ಬೆಲೆ ಎರಡು ಆಣೆ

ಕರ್ಮವೀರ

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

ಸಂಪಾದಕರು:
ಹ. ರಾ. ಪುರೋಹಿತ, ಎಂ. ಎ.

Editor,
H. R. PUROHIT, M. A.

[ಸಂಪುಟ ೨೦] ಹುಬ್ಬಳ್ಳಿ, ಸೋಮವಾರ ತಾರೀಖು ೨೬—೪—೧೯೪೮ [ಸಂಚಿಕೆ ೩]



ಪ್ರಕೃತಿ-ಪ್ರತಿಕೃತಿ

ಚಿತ್ರ: ಶ್ರೀಮತಿ ಸುಶೀಲಾ ಯಾವಳಕರ

ಮುಂಬಯಿಯಲ್ಲಿ ಕೆಲದಿನ ಕೆಳಗೆ ಶ್ರೀಮತಿ ಯಾವಳಕರರ ಅನೇಕ ಚಿತ್ರಗಳ ಪ್ರದರ್ಶನ ನಡೆಯಿತು. ನಮ್ಮ ಚಿತ್ರಗ್ರಾಹಕರು ಅದರಲ್ಲೊಂದು ಚಿತ್ರದ ಚಿತ್ರ ತೆಗೆದುಕಳಿಸಿದ್ದಾರೆ. ಬಲಗಡೆ ಕಾಣುವವರು ಚಿತ್ರಕಾರ್ತಿ.

* ಭಾರತೀಯ ಜೀವನದಲ್ಲಿ ಕಲೆಯ ಸ್ಥಾನ

ಶ್ರೀ ಎಲ್. ಎಸ್. ಬಿ.ಎ. ಗದಗಕರ ಧಾರವಾಡ

ಭಾರತೀಯರಲ್ಲಿಯ ಕಲೆ ಭಾವಿಕತನದ್ದಲ್ಲ. ಅವರ ಜೀವನದಲ್ಲಿ ಹಾಸು ಹೊಕ್ಕಾಗಿದೆ. ಅದು ಜೀವನವನ್ನು ರಸವತ್ತಾಗಿ ಮಾಡಬಲ್ಲದಲ್ಲದೆ ವಿವಿಧ ಬಗೆಯಾಗಿ ಕಾಣಿಸಿಕೊಳ್ಳುವಹುದು. ಹಳ್ಳಿಯ ಒಕ್ಕಲಿಗನು ಬೀಜ ಬಿತ್ತುವಾಗಲೂ ಪೈರು ಕೊಯ್ಯುವಾಗಲೂ ಶ್ರಮಪರಿಹಾರದ ಉದ್ದೇಶದಿಂದ ಹಾಡು ಹಾಡುವದನ್ನು ನಾವು ಕೇಳುವೆವು. ಹಳ್ಳಿಯ ನಾಟಕ, ನೃತ್ಯ, ಸಂಗೀತ ಅಲ್ಲಿಯ ವಾತಾವರಣವನ್ನು ಹೆಚ್ಚಾಗಿ ವ್ಯಗೊಳಿಸಿಕೊಂಡಿವೆ. ಮುಖ್ಯತಃ ಆ ಕಲೆ ನಿರಾಡಂಬರವಾದುದು. ಸರಳತೆ, ತತ್ವಬೋಧೆ, ಧಾರ್ಮಿಕ ಜೀವನ — ಸಹಜವಾಗಿ, ಅಂದವಾಗಿ ಅಲ್ಲಿ ಅರಳಿವೆ.

ಭಾರತೀಯ ಜೀವನದಲ್ಲಿ ಸಂಗೀತಕ್ಕೆ ಮೇಲಿನ ಸ್ಥಾನ. ಅದು ಸಾಮವೇದದಲ್ಲಿ ಮೂರ್ತಿಮತ್ತಾಗಿ ನಿಂತಿದೆ. ಮಾರ್ಮಿಕವಾದ ಸಂಗೀತವು ತನ್ನ ಲಕ್ಷಣಕ್ಕನುಗುಣವಾಗಿ ಮನುಷ್ಯನನ್ನು ಅಳಿಸಬಲ್ಲದು, ನಗಿಸಬಲ್ಲದು. ಪ್ರೀತಿಯನ್ನಾಗಲಿ ವಿಶಿಷ್ಟ ಜಾತಿಯ ಸಂಗೀತವು ತೋರಿಸಲು ಶಕ್ತವಿದೆ. ಸಂಗೀತವು ಸೈನಿಕನಿಗೆ ಧೈರ್ಯವನ್ನೂ ಪ್ರಣಯಿಗೆ ಭಾಷೆಯನ್ನೂ ದುಃಖಿಗೆ ಸಮಾಧಾನವನ್ನೂ ಆನಂದಿತನಿಗೆ ಉನ್ಮಾದನವನ್ನೂ ಭಕ್ತನಿಗೆ ಅಪಾರ ಭಕ್ತಿರಸವನ್ನೂ ನೀಡುವದು. ಅವರೂ ಯಾವ ಸನ್ನಿವೇಶದಲ್ಲಿಯೂ ಸಂಗೀತಕ್ಕೆ ಗಾಂಭೀರ್ಯದ ಝುಳುಕು ಇರದಿರದು. ಅಂತೇ ಭಾರತದ ಶ್ರೇಷ್ಠ ಸಂಗೀತಗಾರರು — ನಾರದ, ತ್ಯಾಗರಾಜ, ಪುರಂದರದಾಸ, ಕಬೀರ, ಸೂರದಾಸರಂತಹರೇ ಆಗಿರುವರು !

ನೃತ್ಯಕಲೆಯ ಯೋಗ್ಯತೆಯನ್ನು ಕಡೆಗಣಿಸಲಾಗದು. ಭರತನ ನಿರೂಪಣೆಯಂತೆ, ದೇವತೆಗಳ ಇಚ್ಛೆಗನುಗುಣವಾಗಿ ಬ್ರಹ್ಮನು ನಾಟ್ಯವೇದವನ್ನು ರಚಿಸಿದನು. ವೇದಗಳಿಂದ ವಿಷಯವನ್ನಾಯ್ದುಕೊಂಡು ಸ್ವರ್ಗಲೋಕಕ್ಕೆ ರೂಪವಾಗುವಂತೆ ಅದು ರಚಿತವಾಯಿತು. ಋಗ್ವೇದದಿಂದ ಶಬ್ದಗಳನ್ನೂ ಸಾಮವೇದದಿಂದ ಸಂಗೀತವನ್ನೂ ಯಜುರ್ವೇದದಿಂದ ಭಾವವನ್ನೂ ಅಥರ್ವವೇದದಿಂದ ರಸವನ್ನೂ ಕಲೆಹಾಕಿ ಬ್ರಹ್ಮನು ಐದನೆಯ ವೇದವನ್ನು ನಿರ್ಮಿಸಿ 'ನಾಟ್ಯವೇದ'ವೆಂದು ಅದಕ್ಕೆ ಹೆಸರಿಸಿದನು. ಅಂತೇ ವೇದದ ಪಾವಿತ್ರ್ಯ, ಗಾಂಭೀರ್ಯ, ಈ ಕಲೆಗುಂಟಾಗಿದೆ. ವಿವಿಧ ಬಗೆಯ ನೃತ್ಯದ ಮೂಲ ಸ್ವರ್ಗನೆಂದರೆ ಶಿವನೇ ಎಂದು ಬೇರೆ ಹೇಳಬೇಕಿಲ್ಲ. ಅತಿ ಲೋಕಪ್ರಿಯ ನೃತ್ಯಪಟುವೆಂದರೆ ಕೃಷ್ಣ. ಮಹಾಭಾರತ ಕಾಲದ ರಾಜಮನೆತನದಲ್ಲಿ ನೃತ್ಯಕಲೆಯ ವ್ಯಾಸಂಗವು ಅತಿ ಮಹತ್ವದ್ದೆಂದು ಪರಿಗಣಿಸಲಾಗಿತ್ತು. ಅರ್ಜುನನು ಬೃಹನ್ನಳೆಯ ವೇಷದಲ್ಲಿ ಉತ್ತರೆಗೆ ನೃತ್ಯ ಕಲಿಸಿದ ಸಂಗತಿಯನ್ನು ನಾವು ವಿರಾಟಪರ್ವದಿಂದ ತಿಳಿಯಬಹುದು. ಇಂತಹ ಸ್ವರ್ಗೀಯ ಕಲೆಯು ಅನೇಕ ವರ್ಷ ಮುಖ್ಯವಾಗಿ ದೇವದಾಸಿಯರ ಸೊತ್ತಾಗಿತ್ತು. ಎಲ್ಲಕ್ಕೂ ಹೆಚ್ಚೆಂದರೆ ನೃತ್ಯದಿಂದ ದೇಹದ ಪ್ರತಿ ಅವಯವಕ್ಕೆ ಚಟುವಟಿಕೆಯುಂಟಾಗುವದು ಎಂಬಲ್ಲಿ ಸಂಶಯವಿಲ್ಲ.

ಚಿತ್ರಕಲೆಯ ಸಹಾಯದಿಂದ ಭಾರತೀಯರಿಗೆ ನಿಸರ್ಗದ ಮಡಿಲಲ್ಲಿ ಬಾಳುವ ಹದವು ಸಾಧಿಸಿತು. ದೇಹಕ್ಕೆ 'ಆಹಾರದ ಅವಶ್ಯಕತೆ ಇದ್ದಂತೆ' ವರ್ಣ, ಸೌಂದರ್ಯ ಅಂತರಾತ್ಮಕ್ಕೆ ಅತ್ಯವಶ್ಯ. ಅಜಂತಾ ಗವಿಯ ಚಿತ್ರಗಳು ಕೇವಲ ಕಣ್ಣಿಗೆ ಹಬ್ಬವಲ್ಲ. ಅದರೆ ಅವು ಭಾರತದ ಆದರ್ಶ, ಗಾಂಭೀರ್ಯ ತೋರ್ಪಡಿಸುವುವು. ಸೂಕ್ಷ್ಮತೆ, ಕಲ್ಪನಾಶಕ್ತಿ, ಭಾವನಾಜಾಲ — ಅಪೂರ್ವವಾಗಿ ಅಲ್ಲಿ ಮೇಳವಿಸಿ ಬಂದುಬಿಟ್ಟಿವೆ. ಮನುಷ್ಯನನ್ನು ಬೆರಗುಪಡಿಸುವವು. ಅಜಂತಾ ಗವಿಗಳಲ್ಲಿ ಹೊರಸೂಸುವ ಪ್ರಶಾಂತ ವಾತಾವರಣವು ಹುಟ್ಟಿಸೊಡಲು ಪ್ರವಾಸಿಯ ಮನಸ್ಸಿನ ಮೇಲೆ ಉತ್ಕಟ ಪರಿಣಾಮವನ್ನುಂಟುಮಾಡುವದು. ಕಲಾಜೀವಿಗಳಿಗೆಲ್ಲ ಅದು 'ಯಾತ್ರಾ ಸ್ಥಳ'ವಲ್ಲವೇ ?

ಚಿತ್ರಾರ್ಪಿತ ಸೌಂದರ್ಯವನ್ನು ಒಳಹೊಕ್ಕು ತಿಳಿದುಕೊಳ್ಳಲು ಸೂಕ್ಷ್ಮ ಬುದ್ಧಿ ಅವಶ್ಯಕ. ಅಲ್ಲಿಯ ಜೀವಂತ ಕಳೆ ಹಿಡಿಯುವದಕ್ಕೆ ಅಭ್ಯಾಸಬಲವೂ ಪ್ರಾಮಾಣಿಕತನವೂ ಶ್ರದ್ಧೆಯೂ ಬೇಕು. ಸೌಂದರ್ಯವು ತೀರ ಮೇಲಿನ ಮಟ್ಟದ್ದಿರುವದರಿಂದ ಯಾವ ಸೂತ್ರದ ಅಳತೆಗೋಲೂ ನಮಗೆ ನಿಜ ಕಲ್ಪನೆ ಮಾಡಿಕೊಡದು.

ಮುಂದೆ ಮೊಗಲ-ರಜಪೂತ ಅರಸರ ಕಾಲದ ಚಿತ್ರಗಳು ಆಯಾ ಜನರ ಧ್ಯೇಯ ಕನಸುಗಳನ್ನು ವಿವೇಚಿಸಲು ಹವಣಿಸಿದವು. ಪರ್ಶಿಯಾ ದೇಶದ ಚಿತ್ರಕಲೆಯಲ್ಲಿ ವರ್ಣಕ್ಕೆ, ವೈಭವಕ್ಕೆ ಪ್ರಾಧಾನ್ಯ ಹೆಚ್ಚು ಕಡಿಮೆ. ಯುದ್ಧ ಮಾಡುವದು, ಕುಡಿಯುವದು, ಪ್ರೀತಿಸುವದು ಅಲ್ಲಿಯ ಸಾಮಾನ್ಯ ಪ್ರಸಂಗಗಳು. ಮೊಗಲರ ಚಿತ್ರಕಲೆ ನಿಜವಾಗಿಯೂ ಅಂದವಾದುದು, ಕಾವ್ಯಮಯವಾದುದು. ಮನಸಿನ ವಿಕಾರಗಳಿಗೆ ಅಲ್ಲಿ ಎಡೆ ಇಲ್ಲ. ಅದರೆ ಅಬುಲಫಜಲನ ಅಭಿಪ್ರಾಯದಂತೆ, 'ರಜಪೂತ ಚಿತ್ರಗಳು ನಮ್ಮ ಕಲ್ಪನಾಸಾಮ್ರಾಜ್ಯದ ಆಚೆಗೆ ಇರುವವು.' ಹಿಂದು ಧರ್ಮದ ಪ್ರತೀಕವಾದ ಆತ್ಮಸಂಯಮ, ಪಾವಿತ್ರ್ಯ, ಕಾರುಣ್ಯ, ಸ್ಪಷ್ಟವಾಗಿ ಅಲ್ಲಿ ಮೈತಳೆದು ನಿಂತಿವೆ.

ಭಾರತೀಯ ಕಲೆ ಕೇವಲ ಪರಂಪರೆಯಲ್ಲ. ಅದರ ಮೇಲೆ ಬೇರೆ ದೇಶದ ಎಂಥ ಛಾಯೆ ಇಲ್ಲ. ಭಾರತೀಯ ಕಲೆ ಎಂದೂ ಸಂಕುಚಿತ ದೃಷ್ಟಿ ಇಟ್ಟುಕೊಂಡಿಲ್ಲವೆಂದು ಎದೆತಟ್ಟಿ ಹೇಳಬಹುದು. ಭಾರತೀಯ ಹಾಗೂ ಗ್ರೀಸ ದೇಶಗಳ ಕಲೆಗಳ ಸಂಗಮದಿಂದ ಗಾಂಧಾರ ಜಾತಿ ಉದಯವಾಗಲಿಲ್ಲವೇ ? ತಾಜಮಹಾಲಿನ ನಿರ್ಮಿತಿಯಾದರೂ ಇಂತಹ ವಿವಿಧ ಕಲಾಸಾನ್ನಿಧ್ಯದ ಪ್ರತೀಕ. ಭಾರತದ ಉಜ್ವಲ ಸಂಸ್ಕೃತಿಯ ಪರಂಪರೆಯ ಗಂಧವರಿಯದ ಆಂಗ್ಲರ ಆಳಿಕೆ ಕಾಲಿಟ್ಟಂದಿನಿಂದಲೇ ಭಾರತೀಯ ಕಲೆಯು ಅವನತಿ ಪ್ರಾರಂಭವಾಯಿತೆನ್ನಲು ಅಡ್ಡಿ ಇಲ್ಲ. ಪೌರ್ವಾತ್ಯ ಪಾಶ್ಚಿಮಾತ್ಯ ಪಂಡಿತರು ವಿವಿಧ ಕಲಾಮಂಡಿತರು ಭಾರತೀಯ ಕಲೆಯ ಪುನರುಜ್ಜೀವನಗೊಳಿಸಬೇಕೆಂದು ಬಗೆಬಗೆಯಾಗಿ ಹೆಣಗಿದರೂ ಫಲಕಾರಿಯಾಗಲಿಲ್ಲ. ಭಾರತಕ್ಕೆ ಈಗ ಸ್ವಾತಂತ್ರ್ಯ ದೊರೆತಿರುವದರಿಂದ ಇನ್ನು ಮುಂದೆ ಕಲೆಯ ಏಳ್ಗೆಯೂ ಆಗಬಹುದೆಂದು ನಾವು ಆಸೆ ಹಿಡಿಯಬಹುದಲ್ಲವೆ ?

* 'ಇಂಡಿಯನ್ — ರಿವ್ಯೂ'ದ ಲೇಖನದ ಆಧಾರದಿಂದ

ಈ ವರ್ಷದಲ್ಲಿ ಹರಿಜನೋದ್ಧಾರ ಕಾರ್ಯ

ಒಂದು ಕೋಟಿ ರೂಪಾಯಿ ವೆಚ್ಚದ ಯೋಜನೆ

ಹರಿಜನೋದ್ಧಾರಕ್ಕಾಗಿ ಈ ವರುಷ ಕೇಂದ್ರ ಸರಕಾರದವರು ಮತ್ತು ಬೇರೆ ಬೇರೆ ಪ್ರಾಂತೀಯ ಸರಕಾರಗಳು ಕೂಡಿ ಸುಮಾರು ಒಂದು ಕೋಟಿ ರೂಪಾಯಿಗಳ ವರೆಗೆ ವೆಚ್ಚ ಮಾಡುವವೆಂದು ತಿಳಿಯುತ್ತದೆ.

ಮುಂಬಯಿ ಸರಕಾರದವರು ಯುದ್ಧೋತ್ತರ ಪುನಾರ್ರಚನಾ ಅವಧಿಯ ಮೊದಲಿನ ಅಯಿದು ವರುಷಗಳಲ್ಲಿ ಒಂದು ಕೋಟಿ ರೂಪಾಯಿಗಳನ್ನು ಈ ವಿಶಿಷ್ಟ ಯೋಜನೆಗಾಗಿಯೆ ಮೀಸಲಾಗಿಟ್ಟಿರುವರೆಂದೂ ೩ ಲಕ್ಷ ರೂಪಾಯಿಗಳನ್ನು ಅಸ್ವಚ್ಛತೆಯನ್ನು ಹೋಗಲಾಡಿಸಲು ಮತ್ತು ವಸತಿಗಳನ್ನು ನಿರ್ಮಿಸಲು ಪ್ರತ್ಯೇಕವಾಗಿ ಇರಿಸುವರೆಂದೂ ತಿಳಿಯುತ್ತದೆ.

ಹರಿಜನರಿಗಾಗಿ ೧೯೪೭-೪೮ ರಲ್ಲಿ ವಿದ್ಯಾಭ್ಯಾಸಕ್ಕೆಂದು ಮುಂಬೈ ಸರಕಾರದವರು ೨೩,೫೩,೦೦೦ ರೂಪಾಯಿಗಳನ್ನು ಮಂಜೂರ ಮಾಡಿರುವರು. ಹರಿಜನರ ಅಪಾತ್ರತೆಯನ್ನು ದೂರ ಮಾಡುವ ಮತ್ತು ಹರಿಜನ ಮಂದಿರ ಪ್ರವೇಶದ ಮಸೂದೆಗಳಿಂದ ಹರಿಜನರ ಸಾಮಾಜಿಕ ಅಪಾತ್ರತೆಯನ್ನು ಹೋಗಲಾಡಿಸಲು ಪ್ರಯತ್ನಿಸಿದ್ದಾಗಿದೆ.

ಬಿಹಾರ ಸರಕಾರದವರು ಹರಿಜನರ ಕಲ್ಯಾಣಕ್ಕಾಗಿ ಸಹಕಾರ ಸಂಘಗಳನ್ನು ಸ್ಥಾಪಿಸಿದ್ದು ವೈಯಕ್ತಿಕ ಸಾಲಗಳನ್ನು ಕೊಡಲಾಗುವದು. ಇದಕ್ಕಾಗಿ ಒಂದು ಶಾಲೆಯನ್ನೇ ಏರ್ಪಡಿಸಲಾಗಿದೆ. ಪ್ರಾಥಮಿಕ ಶಿಕ್ಷಣವನ್ನು ಪುಕ್ಕಟೆ ಒದವಿಸುತ್ತಿದ್ದು ಪದವೀಪ್ರಾಪ್ತಿಯ ನಂತರ ಮತ್ತು ಕಾಲೇಜ ಶಿಕ್ಷಣಕ್ಕಾಗಿ ತಿಂಗಳ ಮೂವತ್ತು ರೂಪಾಯಿ ಪ್ರತಿಯೊಬ್ಬ ವಿದ್ಯಾರ್ಥಿಗೆ ಶಿಷ್ಯವೃತ್ತಿ ಕೊಡುವದನ್ನು ಗೊತ್ತು ಮಾಡಿದೆ. ಈ ಬಗೆಯ ಸುಮಾರು ೧೦೦ ಶಿಷ್ಯವೃತ್ತಿಗಳನ್ನು ಕೊಡಲಾಗುವದು. ೧೯೪೮-೪೯ ರ ಆಯವ್ಯಯ ಪತ್ರಿಕೆಯಲ್ಲಿಯೂ ೩೧,೮೦,೦೦ ರೂಪಾಯಿ ಮಂಜೂರ ಮಾಡಲಾಗಿದೆ.

ಸಂಯುಕ್ತ ಪ್ರಾಂತದವರು ಒಂದು ಸಮಿತಿಯನ್ನು ಸ್ಥಾಪಿಸಿದ್ದು ಹರಿಜನೋದ್ಧಾರ ಕಾರ್ಯದಲ್ಲಿ ಅದರ ಸಲಹೆ ಸೂಚನೆಗಳನ್ನು ಕೋರುವರು. ಮುಖ್ಯಮಂತ್ರಿಗಳೇ ಇದರ ಚೇರಮನರಾಗಿದ್ದಾರೆ. ಹರಿಜನ ಸಹಾಯಕ ಶಾಖೆಯೊಂದನ್ನೂ ಸ್ಥಾಪಿಸಲಾಗಿದೆ. ವಿಧವಿಧವಾಗಿ ಹರಿಜನೋದ್ಧಾರ ಕಾರ್ಯವನ್ನು ಕೈಕೊಳ್ಳುವದೇ ಇದರ ಉದ್ದೇಶವಾಗಿದೆ.

ಹರಿಜನರೆ ಬಹುಸಂಖ್ಯಾಕರಾಗಿರುವ ಸಹಾಯವನ್ನಪೇಕ್ಷಿಸುವ ಎಲ್ಲ ಜಾತಿಯ ಜನರ ಉದ್ಧಾರಕಾರ್ಯಕ್ಕಾಗಿ ೧೯೪೮—೪೯ ರ ಅಂದಾಜ ಪತ್ರಿಕೆಯಲ್ಲಿ ಕೂಲಿಕಾರಜಾತಿಗಾಗಿ ೬೪,೪೧,೫೦೦ ರೂಪಾಯಿ ಮಂಜೂರ ಮಾಡಲಾಗಿದೆ. ಹರಿಜನ ಸಹಾಯಕ ಶಾಖೆಗಾಗಿ ೧೪.೮೭ ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ. ಶಿಕ್ಷಣಕ್ಕಾಗಿ ೧೦,೭೨,೦೦೦ ರೂಪಾಯಿ ಮತ್ತು ಮನೆಗಳಿಗಾಗಿ ೧ ಲಕ್ಷ ರೂಪಾಯಿಗಳನ್ನು ಮಂಜೂರ ಮಾಡಲಾಗಿದೆ. ಬಡಾವಣೆ ಶಾಖೆಗಾಗಿ ೩,೪೪,೦೦೦ ರೂಪಾಯಿ ಮಂಜೂರ ಮಾಡಲಾಗಿದೆ.”

ಮದ್ರಾಸ ಸರಕಾರದವರು ಹರಿಜನೋದ್ಧಾರ ಕಾರ್ಯಕ್ಕಾಗಿ ಒಂದು ಕೋಟಿ ರೂಪಾಯಿಗಳನ್ನು ಪ್ರತ್ಯೇಕ ಇರಿಸಿದ್ದಾರೆ. ಪ್ರಾಂತೀಯ ಹರಿಜನ ಸಮಿತಿಯವರು ಬೇರೆ ಬೇರೆ ವಿವರಗಳನ್ನು ಗೊತ್ತುಪಡಿಸಲಿರುವರು

ಓಡಿಸಾದಲ್ಲಿ ಜಗನ್ನಾಥ ಮಂದಿರವನ್ನು ಹರಿಜನರಿಗೆ ಮುಕ್ತದ್ವಾರ ಮಾಡಿರುವರು. ಇದರಿಂದ ಅಸ್ಪೃಶ್ಯತೆಗೆ ಕೊಡಲಿಪೆಟ್ಟು ಬಿದ್ದಂತಾಗಿದೆ. ಹರಿಜನ ಮತ್ತು ಭಿಲ್ಲ ವರ್ಗದ ವಿದ್ಯಾರ್ಥಿಗಳಿಗೆ ಶಿಷ್ಯವೃತ್ತಿಯನ್ನು ಕೊಡಲಾಗುತ್ತದೆ. ಈ ವರ್ಷ ಹರಿಜನರಿಗಾಗಿ ೧,೨೭,೦೦೦ ರೂಪಾಯಿ ವೆಚ್ಚ ಮಾಡಿ ೬ ಶಾಲೆಗಳನ್ನು ತೆರೆಯಲಿರುವರು. ನಿರಕ್ಷರತೆಯನ್ನು ಹೋಗಲಾಡಿಸುವದಕ್ಕಾಗಿ ೨೨೬೦೦ ರೂಪಾಯಿ ವೆಚ್ಚಮಾಡಿ ೪೦ ಸೇವಾಶ್ರಮ ತೆರೆಯಲಾಗಿದ್ದು ಈ ವರುಷ ೧,೨೨,೦೦೦ರೂಪಾಯಿ ಇಂಥ ಮತ್ತೆ ನೂರು ಸೇವಾಗ್ರಾಮಗಳನ್ನು ತೆರೆಯಲು ವೆಚ್ಚ ಮಾಡಲಿರುವರು.

ಬೇರೆ ಪ್ರಾಂತಗಳಲ್ಲಿಯಂತೆ ಆಸಾಮದಲ್ಲಿ ಹರಿಜನ ಸಮಸ್ಯೆ ಇಲ್ಲ. ಸ್ಥಾನಿಕ ಸಂಸ್ಥೆಗಳಿಗೆ ವಸತಿಯ ಯೋಜನೆಯನ್ನು ಮಾಡಲು ಸರಕಾರ ಕೇಳಿದ್ದು ಧನಸಹಾಯದ ಆಶ್ವಾಸನವನ್ನು ಕೊಟ್ಟಿರುವದು.

ಕೇಂದ್ರ ಸರಕಾರದ ಅಧೀನದಲ್ಲಿರುವ ಪ್ರದೇಶದಲ್ಲೆಲ್ಲ ಹರಿಜನೋದ್ಧಾರದ ಕಾರ್ಯವನ್ನು ಕೇಂದ್ರ ಸರಕಾರವೇ ಕೈಕೊಂಡಿದೆ. ಶಿಷ್ಯವೃತ್ತಿಗಳಿಗಾಗಿ ಕೇಂದ್ರ ಸರಕಾರದವರು ಪ್ರತಿ ವರ್ಷ ೩ ಲಕ್ಷ ರೂಪಾಯಿಗಳನ್ನು ೧೯೪೪-೪೫ ರಿಂದ ವೆಚ್ಚ ಮಾಡುತ್ತಿರುವರು.

ಗಟಾರ ಯೋಜನೆಗಾಗಿ ಕೇಂದ್ರ ಸರಕಾರದವರು ಅಜಮೀರ ಮ್ಯುನಿಸಿಪಾಲಿಟಿಯವರಿಗೆ ೩,೮೫,೦೦೦ ರೂಪಾಯಿ ಇತ್ತೀಚೆಗೆ ಮಂಜೂರು ಮಾಡಿರುವರು. ನಗರದ ಸ್ವಚ್ಛತೆಗಾಗಿ ಮುನಿಸಿಪಾಲಿಟಿಯ ಭಂಗಿಗಳಿಗೆ ಮತ್ತು ಕಸಗೂಡಿಸುವವರಿಗೆ ವಿಶೇಷ ಸೌಕರ್ಯಗಳನ್ನು ಕೊಡಲಿರುವರು

ನಗೆ ಮಲ್ಲಿಗೆ

ಮುದುಕಿ— ಭಿಕ್ಷುಕನಿಗೆ (ಕರುಣೆಯಿಂದ): “ಅಯ್ಯೋ, ಪಾಪ, ಕುಂಟ ಕಾಲಿನಿಂದ ನಿನಗೆ ಬಹಳ ತ್ರಾಸವಾಗಿರಬೇಕು. ಆದರೂ ಕುರುಡನಾಗಿರುವದಕ್ಕಿಂತ ಇದೇ ವಾಸಿಯಪ್ಪಾ!”

ಭಿಕ್ಷುಕ: “ನಿಜವಮ್ಮಾ, ನಾನು ಕುರುಡನಾಗಿದ್ದಾಗ ನನಗೆ ಖೊಟ್ಟಿ ನಾಣ್ಯಗಳ ಹೊರತು ಬೇರೇನೂ ಸಿಗುತ್ತಿದ್ದಿಲ್ಲ.”

× × ×

ಬಸಿರಿ ತಾಯಿಯ ಹೊಟ್ಟೆಯ ಮೇಲೆಯೆ ಕೂತೇನೆಂದು ಹಟ ಮಾಡುತ್ತಿದ್ದ ಎರಡು ವರ್ಷದ ಮಗಳಿಗೆ ತಾಯಿ: “ಬೇಡ ಮಗು, ಒಳಗಿರುವ ನಿನ್ನ ಪುಟ್ಟ ತಮ್ಮಗೆ ನೋವಾದೀತು,” ಎಂದು ಸಮಜಾಯಿಸಲೆತ್ನಿಸಿದಳು.

ಈ ಪುಟ್ಟ ತಮ್ಮನ ಮಾತು ಬಂದಾಗಲೆಲ್ಲ ಹುಡುಗಿಗೆ ಆಶ್ಚರ್ಯವೇ ಆಗುತಿತ್ತು. “ಪುಟ್ಟ ಪಾಪ ಒಳ್ಳೆ ಹುಡುಗನೇನವ್ವಾ?” ಎಂದು ಕೇಳಿದಳು.

“ಬಹಳ ಚಲೋ ಹುಡುಗ, ಮುದ್ದು ಮಗು” ಎಂದಳು ತಾಯಿ.

“ಹಾಗಾದರೆ ನೀನೇಕೆ ಅವನನ್ನು ನುಂಗೀದಿ ಅವ್ವಾ?”.

× × ×

ಹುಡುಗನನ್ನು ಕಾಲೇಜಿನಿಂದ ಎರಡು ವರ್ಷ “ಡಿಬಾರ್” ಮಾಡಲಾಗಿದೆಂದು ಸಾರಲಾಗಿತ್ತು. ಅವನ ತಂದೆ ಬಂದು ಪ್ರಿನ್ಸಿಪಾಲನೊಡನೆ ಕಾರಣ ಕೇಳಿದರು.

“ಪರೀಕ್ಷೆಯಲ್ಲಿ ದೊಡ್ಡ ಮೋಸ ಮಾಡಿದ್ದಾನೆ” ಎಂದರು ಪ್ರಿನ್ಸಿಪಾಲ.

“ಏನು ಮೋಸ?”

“ನಿಮ್ಮ ಮಗ ಒಳ್ಳೆ ಬುದ್ಧಿವಂತ ಹುಡುಗನ ಹಿಂದೆಯೆ ಕುಳಿತಿದ್ದ. ಮೊದಲಿನ ೯ ಪ್ರಶ್ನೆಗಳಿಗೂ ಅವನು ಬರೆದುದನ್ನು ಇವನು ಇದ್ದಕ್ಕಿದ್ದಂತೆ ನಕಲು ತೆಗೆದುಬಿಟ್ಟಿದ್ದಾನೆ.”

“ನಕಲು ತೆಗೆದಿದ್ದಾನೆಂದೇ ಹೇಗೆ ಹೇಳುತ್ತೀರಿ? ಅವನು ಓದಿದ ಪುಸ್ತಕದಿಂದಲೇ ಇವನೂ ಬಾಯಿಪಾಠ ಕಲಿತಿರಬಾರದೇಕೆ?” ತಂದೆ ಪ್ರಶ್ನೆ ಹಾಕಿದ.

“ಹತ್ತನೆ ಪ್ರಶ್ನೆಯ ಉತ್ತರದಿಂದ ಅದು ಸಿದ್ಧವಾಗಿ ಹೋಯಿತು. ಆ ಹುಡುಗ ಆ ಪ್ರಶ್ನೆಗೆ “ನನಗೆ ಗೊತ್ತಿಲ್ಲ” ಎಂದು ಉತ್ತರ ಬರೆದಿದ್ದ. ನಿಮ್ಮ ಮಗ “ನನಗೂ ಗೊತ್ತಿಲ್ಲ” ಎಂದು ಬರೆದಿದ್ದಾನೆ!”



ಸುಂದರ ಕಾಶ್ಮೀರದ ಒಂದು ದೃಶ್ಯ

ಇಂದಿನ ಕಾಶ್ಮೀರದ ಕೆಲ ನೆನಹು ನೋಟಗಳು

[ವಿಶೇಷ ಲೇಖನ]

ಲೇಖಕರು: ಶ್ರೀ ಸಿ. ಎಂ. ಪೂಣಚ್ಚ, ಘಟನಾ ಸಮಿತಿ ಸದಸ್ಯರು

ಭಾರತಕ್ಕೆ ಸ್ವಾತಂತ್ರ್ಯ ದೊರೆತ ನಂತರ ಅದರ ಐತಿಹಾಸಿಕ ಹಾಗೂ ಆಡಳಿತದ ಜೀವನದಲ್ಲಿ ಅನೇಕ ಬದಲಾವಣೆಗಳಾಗಿರುವವು. ಇದರ ಮಧ್ಯೆ ಅದೆಷ್ಟೋ ದುರಂತ ಘಟನೆಗಳೂ ನಡೆದು ಹೋದವು. ಅದರಲ್ಲಿ ಕಾಶ್ಮೀರಿನ ಪ್ರಶ್ನೆ ಒಂದಾಗಿರುವದು.

ಬಲಾತ್ಕಾರದಿಂದ ಬಗಲಿಗೆ ಹಾಕುವ ಹೊಂಚು

ಕಾಶ್ಮೀರ ಸಂಸ್ಥಾನವನ್ನು ತನ್ನ ಅಧೀನಕ್ಕೆ ಬಲವಂತನಾಗಿ ಸೇರಿಸಿಕೊಳ್ಳಬೇಕೆಂಬ ಉದ್ದೇಶದಿಂದ ಪಾಕಿಸ್ತಾನ ಸರಕಾರವು ನಾನಾ ರೀತಿಯ ಕಾರ್ಯಕ್ರಮಗಳನ್ನು ಕೈಕೊಂಡಿತು. ಪ್ರಥಮದಲ್ಲಿ ಕಾಶ್ಮೀರ ದೇಶಕ್ಕೆ ದಿನ ನಿತ್ಯ ಬೇಕಾಗುವ ವಸ್ತುಗಳಾದ ಸಕ್ಕರೆ, ಉಪ್ಪು, ಪೆಟ್ರೋಲ ಇತ್ಯಾದಿ ಸಾಮಗ್ರಿಗಳಿಗೆ ತಡೆಹಾಕಿ ಕಾಶ್ಮೀರವನ್ನು ತನ್ನ ಕಾಲಿನ ಬುಡಕ್ಕೆ ಬಗ್ಗಿಸುವ ಪ್ರಯತ್ನ ನಡೆಯಿತು. ಈ ಕಾರ್ಯಕ್ರಮಕ್ಕೆ ಬಗ್ಗದಿದ್ದರಿಂದ ದರೋಡೆಗಾರರ ತಂಡಗಳನ್ನು ಏರ್ಪಡಿಸಿ ಪಾಕಿಸ್ತಾನದ ಗಡಿಗಳಿಂದ ಕಾಶ್ಮೀರಿನ ಮೇಲೆ ಪಾಕಿಸ್ತಾನವು ದಾಳಿ ನಡೆಸುತ್ತಾ ಬಂದಿತು. ಈ ಪರಿಸ್ಥಿತಿಯಲ್ಲಿ ಕಾಶ್ಮೀರ ಸಂಸ್ಥಾನವು ೧೯೪೭ ನೇ ಅಕ್ಟೋಬರ ತಿಂಗಳ ೨೬ ನೇ ತಾರೀಕಿನಲ್ಲಿ ಭಾರತದೊಡನೆ ಸೇರಿಕೊಂಡು ದರೋಡೆಗಾರರನ್ನು ಕಾಶ್ಮೀರಿನಿಂದ ಹೊರದೂಡಲು ಭಾರತದ ಆಶ್ರಯವನ್ನು ಬೇಡಿತು. ಅಂದಿನಿಂದ ಕಾಶ್ಮೀರ ದೇಶವನ್ನು ಪುಂಡರಿಂದ ರಕ್ಷಿಸಿ ಅದರ ವ್ಯಕ್ತಿತ್ವವನ್ನು ಉಳಿಸುವ ಹೊಣೆ ಭಾರತ ಸರಕಾರದ್ದಾಗಿದೆ. ಈ ಕಾರಣದಿಂದ ಭಾರತ ಸೈನ್ಯವು ಈಗ ಕಾಶ್ಮೀರಿನಲ್ಲಿ ದರೋಡೆಗಾರರನ್ನು ಓಡಿಸುವ ಕಾರ್ಯದಲ್ಲಿ ತೊಡಗಿರುವದು.

ಅನಿಂದ್ಯ ಸುಂದರ ಕಾಶ್ಮೀರ

ಕಾಶ್ಮೀರ ಸಂಸ್ಥಾನವು ಪ್ರಪಂಚದ ಪ್ರಖ್ಯಾತ ಸುಂದರ ಪ್ರದೇಶಗಳಲ್ಲಿ ಒಂದಾಗಿರುವದು. ಅದರ ನೈಸರ್ಗಿಕ ಸೌಂದರ್ಯವನ್ನು ವರ್ಣಿಸಲಸಾಧ್ಯ. ಅದರ ವಿಸ್ತೀರ್ಣ ೮೪,೪೭೧ ಚ. ಮೈ. ಜನಸಂಖ್ಯೆ ೪೦,೨೧,೬೧೬. ಇದರಲ್ಲಿ ನೂರಕ್ಕೆ ೭೭.೧೧ ಮುಸಲ್ಮಾನರು; ೨೦.೧೨ ಹಿಂದೂಗಳು ಮತ್ತು ೨.೭೭ ಶೀಖ ಮತ್ತು ಬೌದ್ಧ ಮತಸ್ಥರು. ಭೌಗೋಲಿಕ ದೃಷ್ಟಿಯಿಂದ ಕಾಶ್ಮೀರನ್ನು ಮೂರು ವಿಭಾಗಗಳಾಗಿ ಮಾಡಬಹುದು. ೧ ಜಮ್ಮು ಬಯಲು ಪ್ರದೇಶ; ೨. ಕಾಶ್ಮೀರ ಸುಂದರ ಕಣಿವೆ ಮತ್ತು ೩. ಲಢಾಕ್ ಮತ್ತು ಗಿಲ್ಗಿಟ್‌ಬೆಟ್ಟ ಪ್ರದೇಶ. ಜಮ್ಮು ಪ್ರದೇಶದಲ್ಲಿ ಹಿಂದೂಗಳು ಅಧಿಕ ಸಂಖ್ಯೆಯಲ್ಲಿರುವರು. ಇಲ್ಲಿ ಜಮ್ಮು ನಗರವಿದೆ. ಈ ನಗರವು ಪರ್ವತ ಸಾಲುಗಳ ತಪ್ಪಲಲ್ಲಿ ಅನೇಕ ಸುಂದರ ದೇವಾಲಯಗಳಿಂದ ಕೂಡಿ ಶೋಭಾಯಮಾನವಾಗಿರುವದು. ತಾವೀ ನದಿಯು ಅದರ ಪಕ್ಕದಲ್ಲೇ ಹರಿಯುತ್ತಿದೆ. ವಿಮಾನ ಮೂಲಕ ನಾವು ಮೊದಲು ಈ ನಗರವನ್ನು ದೃಷ್ಟಿಸಿದಾಗ ಅನೇಕ ದೇವಾಲಯಗಳ ಗೋಪುರಗಳಿಂದಲೂ ಹಿಮಾಲಯದ ತಿಳಿ ನೀರನ್ನು ಹೊತ್ತು ತರುವ ತಾವೀ ನದಿಯ ಬೆಡಗಿನಿಂದಲೂ ಬಹಳ ರಮ್ಯವಾಗಿ ಕಂಡುಬರುತ್ತಿತ್ತು.

ನಾವು ಕಂಡುದೇ ಬೇರೆ

ವಿಮಾನ ನಿಲ್ದಾಣವನ್ನು ಮುಟ್ಟಿ ಪಟ್ಟಣದೊಳಗೆ ಹಾದು ನಾವು ಇಳಕೊಳ್ಳುವ ಸ್ಥಳಕ್ಕೆ ತಲಪಿದಾಗ ನಾವು ಕಂಡ ದೃಶ್ಯವೇ ಬೇರೆ. ದರೋಡೆಗಾರರ ದಾಳಿಗೆ ಒಳಗಾದ ಮಿರಪೂರ, ಪೂಂಚ್ ಗಡಿ ಪ್ರದೇಶಗಳಿಂದಲೂ ಪಾಕಿಸ್ತಾನದಿಂದಲೂ ಓಡಿ ಬಂದ ನಿರಾಶ್ರಿತರು ಗಲ್ಲಿ ಗಲ್ಲಿಗಳಲ್ಲಿ ಕಿಕ್ಕಿರಿದು ವಾಸಕ್ಕೆ ಎಡೆಯಿಲ್ಲದೆ ಬೀದಿಗಳ ಬದಿಗಳಲ್ಲೆಲ್ಲ ಠಾಣ್ಯ ಮಾಡಿಕೊಂಡಿದ್ದರು. ಜಮ್ಮು ನಗರದ ಜನಸಂಖ್ಯೆ ಸುಮಾರು ೪೦,೦೦೦ ಇದ್ದದ್ದು ಈಗ ಒಂದು ಲಕ್ಷಕ್ಕಿಂತ ಏರಿದೆ. ನಗರ ನೈರ್ಮಲ್ಯದ ವಿಚಾರ ಹೇಳಲಸಾಧ್ಯ. ಇಂದೋ ನಾಳೆಯೋ ಸಾಂಕ್ರಾಮಿಕ ರೋಗ ತಲೆದೋರುವ ಭಯವಿದೆ. ಜಮ್ಮು ತಲಪುವಾಗ ಸಾಧಾರಣ ೧೨ ಗಂಟೆ ಸಮಯ. ಮಧ್ಯಾಹ್ನದ ಊಟ ಮುಗಿಸಿ ನಾವು ಪಾಕಿಸ್ತಾನ ಗಡಿಯನ್ನು ಮುಟ್ಟಿಕೊಂಡಿರುವ ಸುಚೇತಘಡ ಎಂಬಲ್ಲಿಗೆ ಹೋದೆವು. ನಮ್ಮನ್ನು ಕರೆದುಕೊಂಡು ಹೋಗುವ ವ್ಯವಸ್ಥೆಯನ್ನು ಸೈನ್ಯಾಧಿಕಾರಿಗಳು ಯೋಗ್ಯ ರೀತಿಯಲ್ಲಿ ಮಾಡಿದ್ದರು. ಜಮ್ಮುವಿನಿಂದ ಸುಚೇತಘಡ ಎಂಬಲ್ಲಿಗೆ ಸುಮಾರು ೩೬ ಮೈಲು ದೂರ. ದಾರಿಯುದ್ದಕ್ಕೂ ಭಾರತ ಸೈನ್ಯ ಠಾಣೆಗಳಿವೆ.

ಹಳ್ಳಿಗರ ಸಂಘಟನೆ

ಜಮ್ಮುವಿನಿಂದ ಸುಮಾರು ೨೦ ಮೈಲು ದೂರದ ವರೆಗೆ ಗ್ರಾಮ ಜೀವನ ಎಂದಿನಂತೆ ನಡೆಯುತ್ತಲಿದೆ. ರೈತರು ಹೊಲಗಳಲ್ಲಿ ಉಳುತ್ತಿದ್ದರು. ಪ್ರದೇಶವೆಲ್ಲ ಪೈರುಪಚ್ಚೆಗಳಿಂದ ಅಲಂಕೃತವಾಗಿತ್ತು. ದನಕರುಗಳು ಹಿಂಡು ಹಿಂಡಾಗಿ ಮೇಯುತಿದ್ದವು. ಅದರ ಮಧ್ಯೆ ಒಬ್ಬಿಬ್ಬರು ಹಳ್ಳಿಗರು ಬಂದೂಕ ಹಿಡಿದುಕೊಂಡಿದ್ದರು. ಬಂದೂಕ ಹೆಗಲ ಮೇಲೆ ಹಾಕಿಕೊಂಡಿದ್ದ ಒಬ್ಬನನ್ನು ಸಮೀಪದಲ್ಲಿ ಕಂಡೊಡನೆ ನಾವು ನಮ್ಮ ವಾಹನವನ್ನು ನಿಲ್ಲಿಸಿ ಅವನನ್ನು ಪ್ರಶ್ನೆ ಮಾಡಿದೆವು. ನಮ್ಮನ್ನು ಕಂಡೊಡನೆ ಹರಕು ಅಂಗಿ ಮತ್ತು ಪಂಚೆ ಉಟ್ಟುಕೊಂಡಿದ್ದ ಆ ಯುವಕನು ಸೈನಿಕನಂತೆ ಕಾಲು ಜೋಡಿಸಿ ಸೈನ್ಯಕ್ರಮಕ್ಕನುಸಾರ "ಸೆಲ್ಯೂಟ್" ಮಾಡಿದನು. ಕುತೂಹಲದಿಂದ ನಾವು ಇನ್ನೂ ಪ್ರಶ್ನೆ ಮಾಡಿದಾಗ ಆತನು "ನಾನು ಶೇಕ್‌ಸಾಬ್‌ರವರ ಹೋಂ ಗಾರ್ಡ್. ಈ ಪ್ರದೇಶದಲ್ಲಿ ನಾವು ಕೆಲವರು ಗ್ರಾಮ ರಕ್ಷಣಾ ಕಾರ್ಯದಲ್ಲಿರುವೆವು" ಎಂದನು. "ನಿನಗೆ ಎಷ್ಟು ಸಂಬಳ?" ಎಂದು ನಮ್ಮಲ್ಲೊಬ್ಬರು ಕೇಳಿದರು. "ಸಂಬಳ ಏನೂ ನಾವು ತೆಗೆದುಕೊಳ್ಳುವದಿಲ್ಲ. ನಮಗೆ ಕವಾಯತು ಕಲಿಸಿ ಬಂದೂಕ ಕೋವಿಗಳನ್ನು ಕೊಟ್ಟಿರುವರು. ನಾವು ನಮ್ಮ ಹಳ್ಳಿಗಳ ಹಾಗೂ ದೇಶದ ರಕ್ಷಣೆಗಾಗಿ ಪಣತೊಟ್ಟ ಸ್ವಯಂಸೇವಕರು" ಎಂದನು. ಹಿಂದೂ ಯುವಕ-ಮುಸ್ಲಿಂ ಪ್ರಧಾನ ಮಂತ್ರಿ ಶೇಕ್ ಅಬ್ದುಲ್ಲಾರವರ ನಮ್ರ ಅನುಯಾಯಿ. ದೇಶದ ರಕ್ಷಣೆಗಾಗಿ ಎಲ್ಲರೂ ಕರ್ತವ್ಯನಿರತರಾಗಿರುವ ಅಪೂರ್ವ ದೃಶ್ಯ ಮರೆಯಲಾಸಾಧ್ಯ!

ದರೋಡೆಗಾರರ ಲಗ್ಗೆಗೆ ಸಾಕ್ಷಿ

ಮುಂದೆ ಸಾಗಿದೆವು ದರೋಡೆಗಾರರ ಲೂಟಿಯ ವಿಚಾರ ಸಾಕ್ಷಿ ಹೇಳಲು ನಿಂತಂತೆ ಬೆಂದು ಸೂರೆಯಾದ ಹಳ್ಳಿಗಳಲ್ಲಿ ಅಲ್ಲೊಂದು ಇಲ್ಲೊಂದು ಕಂಬಗಳು ಮಾತ್ರ ನಿಂತಿದ್ದವು. ದೊಡ್ಡ ಒಂದು ಸಕ್ಕರೆ ಕಾರ್ಖಾನೆಯು ಪಟಿಸವಾಗಿ ನಿಂತಿದೆ. ಅದರ ಸುತ್ತಲೂ ಸಾವಿರಾರು ಎಕರೆ ಕಬ್ಬು ಬೆಳೆಸಿದ ರೈತರು ತಮ್ಮ ಕಬ್ಬಿನ ಬೆಳೆಯನ್ನು ಏನು ಮಾಡುವದೆಂದು ಚಿಂತಿಸುತ್ತಿರುವರು. ಕೊನೆಗೆ ಸ. ಚೇತಘಡ ಗಡಿಯನ್ನು ಮುಟ್ಟಿದೆವು. ಇಲ್ಲಿಂದ ಪಾಕಿಸ್ತಾನ ಪ್ರದೇಶವು ೩೦೦ಗಜ ದೂರದಲ್ಲಿರುವದು. ಅಲ್ಲಿ ರೈತರು ಕೆಲಸ ಮಾಡುವದೂ ದನಕರುಗಳು ಮೇಯುವದೂ ಕಾಣುತ್ತಿತ್ತು. ದುರ್ಬೀನು ಇಟ್ಟು ನೋಡಿದಾಗ ಪಾಕಿಸ್ತಾನ ಸೈನ್ಯ ಠಾಣೆಯೂ ಕಂಡುಬಂತು. ಈ ಭಾಗದಲ್ಲಿ ಈಗ ದರೋಡೆಗಾರರ ಹಾವಳಿಯಿಲ್ಲ. ಇಲ್ಲಿಂದ ಸಿಯಾಲ್‌ಕೋಟ್ ನಗರಕ್ಕೆ ಬರೇ ೬ ಮೈಲು ದೂರ. ಈ ಭಾಗದ ಗಡಿಯುದ್ದಕ್ಕೂ ಭಾರತ ಸೈನ್ಯದ ಠಾಣೆಗಳಿವೆ. ಭಾರತದ ಎಲ್ಲಾ ಪ್ರಾಂತಗಳಿಂದ ಬಂದ ನಮ್ಮ ಯೋಧರು ಹಿರಿದಾದ ಉತ್ಸಾಹದಲ್ಲಿ ತಮ್ಮ ಕರ್ತವ್ಯವನ್ನು ಮಾಡುತ್ತಿರುವರು.

ಶೇಕ್‌ಸಾಬರೊಡನೆ ಮಾತುಕತೆ

ಆ ದಿನ ಸಾಯಂಕಾಲ ಮರಳಿ ಜಮ್ಮು ನಗರವನ್ನು ಸೇರಿ ಕಾಶ್ಮೀರಿನ ಪ್ರಧಾನ ಮಂತ್ರಿ ಶೇಕ್ ಅಬ್ದುಲ್ಲಾರವರನ್ನು ಅವರ ಭವನದಲ್ಲಿ ಭೆಟ್ಟಿ ಮಾಡಿದೆವು. ಕಾಶ್ಮೀರಕ್ಕೆ ಜವಾಬ್ದಾರಿ ಸರಕಾರ ದೊರೆತು ಅದರ ಮುಖ್ಯ ಮಂತ್ರಿಯಾಗಿ ಈ ಬಿಕ್ಕಟ್ಟಿನ ಸಮಯದಲ್ಲಿ ಬಿಡುವಿಲ್ಲದೆ ಕೆಲಸ ಮಾಡುತ್ತಿರುವ ಈ "ಶೇಕ್‌ಸಾಬ" (ಈಪ್ರಕಾರ ಅವರನ್ನು ಅಲ್ಲಿ ಕರೆಯುವದು) ಒಬ್ಬ ಐತಿಹಾಸಿಕ ವ್ಯಕ್ತಿಯಾಗಿರುವರು. ಕಾಶ್ಮೀರಿನ ಭವಿಷ್ಯ ಇವರು ಮತ್ತು ಇವರ ಸಹ ಕಾರ್ಯಕರ್ತರನ್ನೆ ಅವಲಂಬಿಸಿರುವದು.

೨೫ ಸಾವಿರ ಸಾಲಿಗ್ರಾಮಗಳುಳ್ಳ ದೇಗುಲ


ಮೂರನೆ ದಿನ ಜಮ್ಮು ನಗರದ ಕೆಲವು ಭಾಗಗಳನ್ನು ಸಂದರ್ಶಿಸಿದೆವು. ಅಲ್ಲಿನ ದೊಡ್ಡ ದೇವಾಲಯವಾದ ಶ್ರೀ ರಘುನಾಥಜೀ ಮಂದಿರವನ್ನು ನೋಡಿದೆವು. ಈ ಮಂದಿರದಲ್ಲಿ ಕಾಲುಲಕ್ಷ ಸಾಲಿಗ್ರಾಮ ಶಿಲೆಗಳನ್ನು ಜೋಡಿಸಿರುವರು. ಅದಕ್ಕೆ ದಿನಾ ಅಭಿಷೇಕ ನಡೆಯುತ್ತಲಿದೆ. ಕಷ್ಟದಲ್ಲಿರುವವರಿಗೆ ದೇವರೇ ಗತಿ ಎಂಬಂತೆ ಅದರ ಆವರಣದೊಳಗೆಲ್ಲ ನಿರಾಶ್ರಿತರು ಕಿಕ್ಕಿರಿದು ತುಂಬಿರುವರು. ಅನಂತರ ಸುಮಾರು ೧೨॥ ಗಂಟೆಗೆ ಶ್ರೀನಗರಕ್ಕೆ ವಿಮಾನ ಏರಿದೆವು. ಜಮ್ಮು ನಮ್ಮ ಇತರ ಬಯಲು ಸೀಮೆಯಂತೆ ಸೆಕೆಯಾಗಿತ್ತು. ಆದರೆ ವಿಮಾನ ಏರಿ ಕಾಲುಗಂಟೆಯೊಳಗೆ ಹಿಮಾಲಯದ ಶೀತಗಾಳಿ ಪ್ರಾರಂಭಿಸಿತು. ನಮ್ಮ ವಿಮಾನ ಹಿಮದಿಂದ ಮುಚ್ಚಿಕೊಂಡಿರುವ ಹಿಮಾಲಯ ಪರ್ವತ ಸಾಲುಗಳ ಕಡೆಗೆ ಧಾವಿಸುತ್ತಲಿತ್ತು. ಸುಮಾರು ೧೬,೦೦೦ ಅಡಿ ಎತ್ತರದಲ್ಲಿ ನಮ್ಮ ವಿಮಾನವು ಏರಿ ಹೋಗುತ್ತಲಿತ್ತಾದರೂ ಹಿಮವತ್ಪರ್ವತ ಶ್ರೇಣಿಗಳು ಕೈ ಚಾಚಿದರೆ ನಿಲುಕುವಷ್ಟು ಸಮೀಪ ಕಾಣುತಿದ್ದವು ಹಿಮದಿಂದ ಸಂಪೂರ್ಣವಾಗಿ ಮುಚ್ಚಿಕೊಂಡಿದ್ದ ಆ ಪರ್ವತದ ಸಾಲುಗಳು ಸೂರ್ಯನ ರಶ್ಮಿಗೆ ಸ್ಫಟಿಕ ಶಿಖರಗಳಂತೆ ಶೋಭಿಸುತ್ತಲಿದ್ದವು. ಕೆಲವು ಸಮಯ ನಮ್ಮ ಪುರಾಣ ಮತ್ತು ಕಾವ್ಯಗಳಲ್ಲಿನ ಕೈಲಾಸ ಪರ್ವತದ ವರ್ಣನೆ ಜ್ಞಾಪಕಕ್ಕೆ ಬರುತ್ತಿತ್ತು.

ಶ್ರೀನಗರದ ಬೆಡಗು

ಸಾಧಾರಣ ಅರ್ಧಗಂಟೆಯ ನಂತರ ಬೆಳ್ಳಿಹೊದಿಕೆಯನ್ನು ಹೊತ್ತ ಪರ್ವತಶ್ರೇಣಿಗಳ ನಡುವಲ್ಲಿ ಶ್ರೀನಗರವು ಕಂಡುಬಂತು. ಅದೊಂದು ಅಪೂರ್ವದೃಶ್ಯ! ಶ್ರೀನಗರವನ್ನು ತಲುಪಿದೊಡನೆ ವಿಮಾನ ನಿಲ್ದಾಣದಲ್ಲಿ ಈಗಿನ ಕಾಶ್ಮೀರ ಸರಕಾರದ ಮಂತ್ರಿಗಳಲ್ಲೊಬ್ಬರಾದ ಬಾಬಿಶ್ ಸಾಹೇಬರು ನಮ್ಮನ್ನು ಭೇಟಿ ಮಾಡಿದರು. ಶ್ರೀನಗರದಲ್ಲಿ ನಾವು ಉಳಿದುಕೊಳ್ಳುವ ವ್ಯವಸ್ಥೆಯನ್ನೆಲ್ಲ ಇವರು ಮಾಡಿದ್ದರು. ಆ ದಿನವೆಲ್ಲ ಶ್ರೀನಗರದ ಮನರಂಜಕ ಸ್ಥಳಗಳನ್ನು ಸಂದರ್ಶಿಸಿದೆವು. ಡಾಲ್ ಸರೋವರ ಮತ್ತು ಅದರ ತಟದಲ್ಲಿರುವ ಶಾಹೀಚಶ್ಮ ಮತ್ತು ಶಾಲಿಮಾರ್ ಮೊದಲಾದ ವೃಂದಾವನಗಳಿಗೆ ಹೋದೆವು. ಕಾಶ್ಮೀರ ಪ್ರದೇಶವೇ ಸೌಂದರ್ಯದ ನೆಲೆವೀಡು. ಅದರಲ್ಲೂ ಸುಂದರವಾದ ಈ ವಿಹಾರ ಸ್ಥಳಗಳನ್ನು ಹೇಳಬೇಕೆ? ಮೊಗಲರ ಆಳಿಕೆಯ ಕಾಲದಲ್ಲಿ ಕಟ್ಟಿದ ಈ ಸುಂದರ ವೃಂದಾವನಗಳು ಪ್ರವಾಸಿಕರನ್ನು ಮುಗ್ಧಗೊಳಿಸುವವಾಗಿರುವವು. ಕಾಶ್ಮೀರ ಕಣಿವೆಯ ಈ ಪ್ರದೇಶದಲ್ಲಿರುವವರು ಬಹುತೇಕ ಮುಸಲ್ಮಾನರು. ವರ್ಷದ ಆರುತಿಂಗಳು ಮಾತ್ರ ವ್ಯವಸಾಯ, ಚಳಿಗಾಲದ ಆರು ತಿಂಗಳು ಪುರದ, ರೇಶ್ಮೆಯ, ಉಣ್ಣೆಯ ಮತ್ತಿತರ ಕೈಗಾರಿಕೆಗಳ ಮೂಲಕ ಇವರು ಜೀವನ ಸಾಗಿಸುವರು. ಒಟ್ಟಿನಲ್ಲಿ ಬಡತನದ ಪರಮಾವಧಿಯನ್ನು ಇಲ್ಲಿ ಕಾಣಬಹುದು.

ಇಲ್ಲಿಯ ಜನರಲ್ಲಿ ಭೇದಭಾವವಿಲ್ಲ

ಇಲ್ಲಿಯ ಜನರು ಬಹಳ ಸರಳ ಹಾಗೂ ನಮ್ರಸ್ವಭಾವದವರು. ಇಲ್ಲಿ ಹಿಂದೂ—ಮುಸ್ಲಿಮ್ ಎಂಬ ಭೇದಭಾವವೇ ಕಾಣುವದಿಲ್ಲ. ಎಲ್ಲರೂ ತಮ್ಮ ದೇಶವನ್ನು ದರೋಡೆಗಾರರಿಂದ ರಕ್ಷಿಸಿಕೊಳ್ಳಬೇಕೆಂಬ ಕಾಂಕ್ಷೆಯುಳ್ಳವರು ಇದೊಂದು ವಿಶಿಷ್ಟ ದೃಶ್ಯವೇ ಸರಿ! ಕಾಶ್ಮೀರಿನ ಕೈಗಾರಿಕೆಗಳು ಹೆಸರುವಾಸಿಯಾಗಿರುವವು. ಇಲ್ಲಿಯ ರೇಶ್ಮೆ ಹಾಗೂ ಉಣ್ಣೆಯ ವಸ್ತ್ರಗಳು ಲೋಕ ಪ್ರಖ್ಯಾತವಾಗಿರುವವು ನಾವು ಶ್ರೀನಗರದಲ್ಲಿರುವ ಸರಕಾರಿ ರೇಶ್ಮೆ ಕಾರ್ಖಾನೆಯನ್ನು ಸಂದರ್ಶಿಸಿದೆವು. ಇಲ್ಲಿ ೪೦೦೦ ಮಂದಿ ಕೆಲಸ ಮಾಡುತ್ತಿರುವರು. ಈ ಕಾರ್ಖಾನೆಯಲ್ಲಿ ವರ್ಷಕ್ಕೆ ೬೦ಲಕ್ಷ ರೂಪಾಯಿ ಬೆಲೆಬಾಳುವ ರೇಶ್ಮೆ ತಯಾರಾಗುವದು. ಮನೆ ಕೈಗಾರಿಕೆಗಳು ಕಾಶ್ಮೀರಿನಲ್ಲಿ ಹೆಚ್ಚಾಗಿರುವವು. ಮನೆಯಲ್ಲೂ ಮರದ ಅಥವಾ ರೇಶೆ ಅಥವಾ ಉಣ್ಣೆ ಅಥವಾ ಬಣ್ಣದ ಆಟದ ಸಾಮಾನುಗಳನ್ನು ಮಾಡುವ ವ್ಯವಸ್ಥೆಗಳಿರುವದನ್ನು ಕಂಡೆವು.



ಶ್ರೀಯುತ ಸಿ. ಎಂ. ಪೂಣಚ್ಚ

ದಾಳಿಗಾರರನ್ನು ತೊಲಗಿಸುವ ನಿರ್ಧಾರ

ಮೂರನೆ ದಿನ ನಾವು ಪಟ್ಟನ್, ಬಾರಾಮುಲ್ಲಾ, ಮಹೋರಾ, ಉರಿ ಮುಂತಾದ ಸ್ಥಳಗಳಿಗೆ ಹೋದೆವು ದಾರಿಯುದ್ದಕ್ಕೂ ದರೋಡೆಗಾರರು ಒಮ್ಮೆ ಶ್ರೀನಗರದ ಸಮೀಪದ ವರೆಗೆ ಬಂದು ಮಾಡಿದ ಸೂರೆಯನ್ನು ಕಂಡೆವು. ಪಟ್ಟನ್ ಎಂಬ ಚಿಕ್ಕ ಹಳ್ಳಿ. ಶ್ರೀನಗರದಿಂದ ೧೧ ಮೈಲು. ಅಲ್ಲಿರುವ ಮನೆಗಳಲ್ಲಿ ಮುಕ್ಕಾಲು ಪಾಲು ನೆಲಸಮವಾಗಿವೆ. ದರೋಡೆಗಾರರು ಬಂದಿದ್ದ ಸಮಯದಲ್ಲಿ ಪ್ರಾಣ ಉಳಿಸಿಕೊಳ್ಳಲು [illegible] ಗ್ರಾಮ ನಿವಾಸಿಗಳು ಈಗ ಬಂದು [illegible] ಗ್ರಾಮವನ್ನು [illegible]

(೧೧ನೆಯ ೬ನೆ ಪುಟ ನೋಡಿರಿ)

ವಿವಿಧ ಪ್ರಪಂಚ

ಇಂಡೊನೇಶಿಯದಲ್ಲಿ ಸಂಸ್ಕೃತ ಶಾಸನ

ಇಂಡೊನೇಶಿಯ ಪ್ರಜಾರಾಜ್ಯದ ರಾಜಧಾನಿಯಾದ ಜೋಗ್ಯಕಾರ್ತದ ಸಮೀಪದಲ್ಲಿರುವ ಪರಮ್‌ಬಾಣನ ದೇವಾಲಯದ ಭಗ್ನಾವಶೇಷಗಳ ನಡುವೆ ೧೨೦೦ ವರ್ಷ ಹಳೆಯ ಸಂಸ್ಕೃತ ಹೇಮಪಟ್ಟ (ಚಿನ್ನದ ತಗಡಿನ ಮೇಲೆ ಬರೆದ ಶಾಸನ) ವೊಂದು ಮೊನ್ನೆ ಮೊನ್ನೆ ಬೆಳಕಿಗೆ ಬಂದಿದ್ದು ಇಂಡೊನೇಶಿಯದ ಶಿಕ್ಷಣ ಹಾಗು ಸಾಂಸ್ಕೃತಿಕ ವಿಷಯಗಳ ಮಂತ್ರಿಯಾದ ಡಾ. ಸಸ್ತ್ರೋ ಅಮೀಜ್ಯಾಯೋ ಅವರು ಹಿಂದೀ ಪ್ರತಿನಿಧಿ ಶ್ರೀ ರಾಘವನ್ನರಿಗೆ ಈ ಸಮಾಚಾರವನ್ನು ತಿಳಿಸಿ ಅದನ್ನು ವಿಶೇಷವಾಗಿ ಅಭ್ಯಸಿಸಲು ಹಿಂದೀ ಸಂಶೋಧಕರನ್ನು ಕಳಿಸಬೇಕೆಂದು ಬಿನ್ನವಿಸಿದ್ದಾರೆ. "ನಮ್ಮ ಪ್ರಾಚೀನ ದೇವಾಲಯಗಳಲ್ಲಿ ಹಿಂದೀ ಸಂಸ್ಕೃತಿಯ ಪ್ರಭಾವ ವಿಶೇಷವಾಗಿದ್ದುದರಿಂದ ನಿಮ್ಮ ಪ್ರಾಜ್ಞ ಸಂಶೋಧಕರು ಇದನ್ನು ಸ್ವತಃ ಬಂದು ಪರಿಶೀಲಿಸುವದು ಮಹತ್ವದ್ದಾಗಿದೆ" ಎಂದು ಅವರು ಸೂಚಿಸಿದ್ದಾರೆ.

ಪ್ರಾಚೀನ ಸಂಬಂಧ

ಜಾವಾ ದ್ವೀಪಕ್ಕೆ ಭಾರತೀಯ ಸಂಸ್ಕೃತಿ ಹಬ್ಬಿದ ಕಥೆ ಪ್ರಾಚೀನವಾಗಿರುವಷ್ಟೇ ಪ್ರಾಮುಖ್ಯವಾದ ಘಟನೆಯೂ ಹೌದು. ರಾಮಾಯಣದಲ್ಲಿ ಕೂಡ "ಯವದ್ವೀಪ"ವೆಂಬ ಹೆಸರಲ್ಲಿ ಅದರ ಉಲ್ಲೇಖವಿದೆ. ಸೀತಾ ದೇವಿಯನ್ನು ಹುಡುಕುತ್ತ ವಾನರರು ಅಲ್ಲಿಗೂ ಹೋಗಿದ್ದರು. ೨ ನೇ ಶತಮಾನದ ಗ್ರೀಕ ಭೂಗೋಲಜ್ಞ ಪೋಲೆಮಿಯಾದರೂ ಆ ದ್ವೀಪವನ್ನು "ಯುವ" ಎಂಬ ಹೆಸರಿಂದಲೇ ಕರೆಯುತ್ತಾನೆ. ೫ ನೆ ಶತಮಾನದೊಳಗೇನೇ ಹಿಂದೂ ಪ್ರವಾಸಿಗಳು ಆ ದ್ವೀಪದಲ್ಲಿ ಪ್ರಭಾವ ಸ್ಥಾಪಿಸಿ ಹಿಂದೂ ಅಥವಾ ಹಿಂದೂಕೃತ ರಾಜ್ಯಗಳನ್ನು ಸ್ಥಾಪಿಸಿದ್ದರು. ೮ ನೆ ಶತಮಾನದವರೆಗೂ ಮಧ್ಯಜಾವದಲ್ಲಿ ಶೈವ ಧರ್ಮಾವಲಂಬಿ ರಾಜರು ಆಳುತಿದ್ದರು. ಅವರ ಶಾಸನಗಳು ಸಂಸ್ಕೃತ ಭಾಷೆಯಲ್ಲಿದ್ದರೂ ಲಿಪಿ ಮಾತ್ರ ದ. ಭಾರತದ ತಮಿಳು ಲಿಪಿಯನ್ನು ಹೋಲುತ್ತದೆ.

೭ನೇ ಶತಮಾನದ ಕೊನೆಗೆ ಸುಮಾತ್ರದ ರಾಜಧಾನಿ ಶ್ರೀವಿಜಯದಲ್ಲಿ ಆಳುತಿದ್ದ ಶೈಲೇಂದ್ರ ವಂಶದ ರಾಜರು ಮಧ್ಯಜಾವವನ್ನು ಗೆದ್ದರು. ಅವರು ಬಳಸಿದ ಲಿಪಿ ಪೂರ್ವ ಭಾರತದ ನಲಂದ ವಿಶ್ವವಿದ್ಯಾಲಯದ ಲಿಪಿಯನ್ನು ಹೋಲುತ್ತದೆ. ಈ ಅರಸರು ಮಹಾಯಾನ ಬೌದ್ಧರು. ಅವರು ಜಾವದಲ್ಲಿ ಎಲ್ಲೆಲ್ಲೂ ಬೌದ್ಧ ದೇವಾಲಯಗಳನ್ನು ಸ್ಥಾಪಿಸಿದರು. ಬರೋಬುದೂರದಲ್ಲಿನ (ಕ್ರಿ.ಶ ೮೫೦) ಏಳು ಅಟ್ಟಳಿಗೆಯ ಭಾರತೀಯ ಶಿಲ್ಪಶಾಸ್ತ್ರವನ್ನನುಸರಿಸಿ ಅವರು ಕಟ್ಟಿಸಿದ ಸ್ತೂಪ ಅತ್ಯಂತ ಸುಂದರವಾದುದು.

ಆ ಮೇಲೆ ತಿರುಗಿ ಜಾವಾದಲ್ಲಿ ವೈದಿಕ ರಾಜರು ಉಚ್ಛ್ರಾಯಕ್ಕೆ ಬಂದರು. ಅವರು ಪ್ರಸ್ತುತ ಪರಮ್‌ಬಾಣನದಲ್ಲಿನ ಗಮನಾರ್ಹವಾದ ಅಷ್ಟ ದೇವಾಲಯಗಳನ್ನು ಕಟ್ಟಿಸಿದರು. ಅವು ಬ್ರಹ್ಮ, ಶಿವ, ವಿಷ್ಣು ಮತ್ತು ನಂದಿ ಈ ದೇವತೆಗಳವು. ಅವುಗಳ ಗೋಡೆಯ ಮೇಲೆ ರಾಮಾಯಣದ ದೃಶ್ಯಗಳನ್ನು ಕೆತ್ತಲಾಗಿರುವದೊಂದು ವೈಶಿಷ್ಟ್ಯ.

೧೦ ನೆ ಶತಮಾನದಲ್ಲಿ ವೈದಿಕ ಧರ್ಮಾವಲಂಬಿ ಏರಲಾಂಗನು ಮಹಾಭಾರತ ರಾಮಾಯಣಗಳನ್ನು ಅಲ್ಲಿಯ ಭಾಷೆಗೆ ಅನುವಾದ ಮಾಡಿಸಿದನು.

೧೪ ನೆ ಶತಮಾನದಲ್ಲಿ ಜಾವದಲ್ಲಿ ತಾಂತ್ರಿಕ ಬೌದ್ಧಧರ್ಮ ಪ್ರಚುರವಾಗಿತ್ತು. ೧೫ ನೆ ಶತಮಾನದಲ್ಲಿ ಪ್ರವೇಶಿಸಿದ ಇಸ್ಲಾಮ ಧರ್ಮ ಮೆಲ್ಲಗೆ ಹಬ್ಬಿ ಇಂದು ಉಳಿದೆಲ್ಲ ಧರ್ಮಗಳನ್ನು ಇಲ್ಲದಂತೆ ಮಾಡಿದೆಯೆನ್ನಬಹುದು. ಆದರೂ ಆ ದ್ವೀಪದ ಜನರ ಹಬ್ಬ ಹುಣ್ಣಿವೆ, ರೀತಿ ನಡೆವಳಿ, ಹಾಗು ಪುರಾಣ ಪುಣ್ಯಕಥೆಗಳಲ್ಲಿ ಹಿಂದೀ ಸಂಸ್ಕೃತಿಯ ಮುದ್ರೆ ಅಚ್ಚಳಿಯದಂತೆ ಉಳಿದಿದೆ.

ಪ್ರಸ್ತುತ ಹೇಮಪಟ ಜೋಗ್ಯಕಾರ್ತ ಮತ್ತು ಸುರಕಾರ್ತ ನಗರಗಳ ಹೊರವಲಯದಲ್ಲಿರುವ ಪರಮ್‌ಬಾಣನ ದೇಗುಲಗಳಲ್ಲಿ ದೊರೆತಿದ್ದು ಅದು ೮ ಇಂಚು ಉದ್ದ ೩ ಇಂಚು ಅಗಲದ್ದಾಗಿದೆ. ಅದರಲ್ಲಿ ಬರೆಯಲ್ಪಟ್ಟದ್ದು ಸಂಸ್ಕೃತ ಲಿಪಿ ಬೌದ್ಧ ತಂತ್ರವಾದದ ಒಂದು "ಧರಣಿ" ಅಥವಾ ಮಂತ್ರವಾಗಿದೆ. ಅದು ಯಾವ ಗ್ರಂಥದಿಂದ ಎತ್ತಿದ್ದೋ ತಿಳಿದಿಲ್ಲ. ನೇಪಾಳದಲ್ಲಿಯೂ ಇತರ ಭಾರತೀಯ ಬೌದ್ಧ ದೇವಾಲಯಗಳಲ್ಲಿಯೂ ಪವಿತ್ರ ಮಂತ್ರಗಳ ಪಟವನ್ನು ಪ್ರತಿಷ್ಠಿಸುವ ರೂಢಿ ಮೊದಲಿಂದಲೇ ಇತ್ತು.

ಹಾಸಿಗೆ ಹಿತವಲ್ಲ

ಜಡ್ಡು ಬಂದೊಡನೆ, ಅಥವಾ ಬರುವಂತೆ ತೋರಿದೊಡನೆ ಹಾಸಿಗೆ ಹಿಡಿದು "ವಿಶ್ರಾಂತಿ" ತೆಗೆದುಕೊಳ್ಳುವದಕ್ಕಿಂತ ಉತ್ತಮ ಬೇರಾವದೂ ಇಲ್ಲವೆಂದು ಸಾಮಾನ್ಯರ, ಏಕೆ, ಡಾಕ್ಟರರನೇಕರ ಭಾವನೆ. ಆದರೆ ವೈದ್ಯ ಶಾಸ್ತ್ರದಲ್ಲಿ ಪ್ರಗತಿಯಾದಂತೆ ಈ ಭಾವನೆ ನಿರಾಧಾರವೆಂದು ಮಾತ್ರವಲ್ಲ, ಅಪಾಯಕರವೆಂದು ಕಂಡುಬಂದಿದೆ. "ಬ್ರಿಟಿಶ ವೈದ್ಯಕೀಯ ಪತ್ರಿಕೆ" (British Medical Journal) ಈ ವಿಷಯದಲ್ಲಿ ಎಚ್ಚರಿಕೆಕೊಡುತ್ತ ಮಾನವದೇಹದಲ್ಲಿ ಹಾಸಿಗೆಯ ಪೀಡೆಯಿಂದ ಅಪಾಯಕ್ಕೆ ಒಳಗಾಗದಷ್ಟು ಗಟ್ಟಿಮುಟ್ಟಾದ ಭಾಗವೇ ಇಲ್ಲವೆಂದು ಹೇಳಿದೆ. "ರೋಗಿಗಳಿಗೆ ಹಾಸಿಗೆಯ ಸೆರೆ ಹೋಗುವಂತೆ ಹೇಳುವ ಮೊದಲು ಹತ್ತು ಸಲ ಯೋಚಿಸಿಕೊಳ್ಳಬೇಕು. ಕಂಬಳಿಯ ಸುಖದ ಸಂಗಡ ಎಷ್ಟೋ ಪ್ರಬಲ ಅಪಾಯಗಳು ಹುದುಗಿವೆ"ಯೆಂದು ವೈದ್ಯಕದಲ್ಲಿ ಪ್ರಭುತ್ವವುಳ್ಳವರೆಂದೆನಿಸಿದ ಡಾ. ಆಶರರು ಹೇಳುತ್ತಾರೆ. ಇದು ಡಾಕ್ಟರ ಜನರಿಗೆ ಈಗ ಚೆನ್ನಾಗಿ ಅನುಭವಕ್ಕೆ ಬಂದಿದೆ. ಶಸ್ತ್ರಕ್ರಿಯೆ ಪಡೆದ ರೋಗಿಗಳನ್ನು ಕೂಡ ಎರಡು ಮೂರು ದಿನಗಳೊಳಗೆ ಹಾಸಿಗೆಯಿಂದ ಬಿಡುಗಡೆ ಮಾಡಿದರೆ ಗಾಯ ಬೇಗನೆ ಮಾಯುವದೆಂದು ಚಿಕಾಗೋ (ಅಮೇರಿಕ) ಡಾಕ್ಟರರು ಕಂಡು ಹಿಡಿದಿದ್ದಾರೆ.

ದೀರ್ಘ ಕಾಲ ಹಾಸಿಗೆಯಲ್ಲಿದ್ದರೆ ಏನೇನು ಅಪಾಯವಾಗಬಹುದೆಂದು ನೋಡಿರಿ:

- ಪುಪ್ಪುಸ (ಶ್ವಾಸಕೋಶ) ರೋಗಗಳನ್ನುಂಟು ಮಾಡಬಹುದು ಇಲ್ಲವೆ ಹೆಚ್ಚಿಸಬಹುದು.
- ರಕ್ತನಾಳಗಳನ್ನು ದುರ್ಬಲಗೊಳಿಸಿ, ಮುಖ್ಯವಾಗಿ ಕಾಲಿನಲ್ಲಿ ರಕ್ತನಾಳಗಳು ಗಂಟಿನಂತೆ ಸುತ್ತುವ ಹಾಗೆ ಮಾಡಬಹುದು.
- ಮಾಂಸಖಂಡಗಳಲ್ಲಿ ಕೆಲವು ನೀಡಿ ಕೆಲವು ಸುಕ್ಕಿ ಒಂದೇ ರೀತಿ ಬಿದ್ದಿರುವದರಿಂದ ಪಾದದಲ್ಲಿ ಮತ್ತು ಮೊಳಕಾಲಿನಲ್ಲಿ ವಾತ ಕಾಣಿಸಿಕೊಳ್ಳಬಹುದು.
- ಎಲುಬುಗಳಲ್ಲಿರುವ ಸುಣ್ಣ ನಷ್ಟವಾಗಿ ಅವು ದುರ್ಬಲವಾಗಬಹುದು.
- ಸುಣ್ಣ ನಾಶವಾಗುವದರಿಂದ ಅದು ಮೂತ್ರ ಕೋಶದಲ್ಲಿ ಶೇಖರಿಸಿ, ಅಲ್ಲಿ ಕಲ್ಲಾಗುವ ಅಪಾಯ ಮಾತ್ರವಲ್ಲ ಸರಿಯಾಗಿ ಮೂತ್ರ ಶಂಕೆಯಾಗದೆ ಮೂತ್ರ ಪಿಂಡ ಹಾಗೂ ಮೂತ್ರಕೋಶಕ್ಕೆ ಪೆಟ್ಟು ಬೀಳಬಹುದು.
- ಮಲಬದ್ಧತೆಯುಂಟಾಗಬಹುದು.
- ನರ ಮಂಡಲಕ್ಕೆ ಸಂಬಂಧಿಸಿದ ಜಡ್ಡಾಗಿದ್ದರೆ ದೀರ್ಘಶಯ್ಯೆಯಿಂದ ಮಾಂಸ ಖಂಡಗಳ ಮೇಲೆ ನರಗಳ ಸ್ವಾಮಿತ್ವ ನಷ್ಟವಾಗಬಹುದು.
- ಕಾಲದ್ದಕ್ಕೆ ಮನಸ್ಸಿನ ಮೇಲೂ ಪರಿಣಾಮವಾಗಿ ತನ್ನ ಜಡ್ಡಿನ ತೀಕ್ಷ್ಣತೆ ಬಹಳವಾಗಿದೆಯೆಂದು ಆವನು ತಿಳಿದುಕೊಂಡು ಧೈರ್ಯಗೆಡಲು ಕಾರಣವಾಗುತ್ತದೆ. ಕೊನೆಗೆ ಹಾಸಿಗೆ ಬಿಟ್ಟೇಳುವದೆಂದರೇ ಅವನಿಗೆ ಒಗ್ಗದಷ್ಟು ಆಲಸ್ಯ ಬರುವ ಸಂಭವವಿದೆ.

ದಾರಿತಪ್ಪಿದ ಉಲ್ಕೆ

ಸೂರ್ಯನ ಸುತ್ತ ಪ್ರದಕ್ಷಿಣೆಮಾಡುವ ಗೋಲಗಳಲ್ಲಿ ಹಿರಿಯವೂ ಪ್ರಸಿದ್ಧವೂ ಆದ ೯ ಗ್ರಹಗಳಲ್ಲದೆ ಸುಮಾರು ೧೬೦೦ ಚಿಕ್ಕ ಗ್ರಹಗಳು ಅಥವಾ "ಉಲ್ಕೆ"ಗಳು ಇವೆಯೆಂದು ಎಲ್ಲರಿಗೂ ಗೊತ್ತಿರಲಿಕ್ಕಿಲ್ಲ. ಅವು ಸಾಮಾನ್ಯವಾಗಿ ಗುರು ಮಂಗಳರ ನಡುವೆ ಸೂರ್ಯನಿಗೆ ಪ್ರದಕ್ಷಿಣೆ ಹಾಕುತಿರುತ್ತವೆ. ಅವು ತೀರ ಚಿಕ್ಕನಿರುವದರಿಂದ ಅವುಗಳನ್ನು ಅಭ್ಯಸಿಸುವದು ಖಗೋಲಜ್ಞರಿಗೆ ಸಾಧ್ಯವಾಗಿಲ್ಲ. ಕೆಲ ವಾರ ಕೆಳಗೆ ಕ್ಯಾಲಿಫೋರ್ನಿಯಾದ (ಅಮೇರಿಕಾ) ಲಿಕ್ ವೇಧಶಾಲೆಯ "ಖಸೂಚಿ"ಗಳಿಗೆ ದಾರಿ ತಪ್ಪಿ ಭೂಮಿಯನ್ನು ಸಮೀಪಿಸಿದ ಉಲ್ಕೆಯೊಂದು ಅಭ್ಯಾಸಕ್ಕೆ ಅವಕಾಶ ಮಾಡಿಕೊಟ್ಟಿತು. ಅದರ ವ್ಯಾಸ ೨ ಮೈಲಿನಷ್ಟಿದ್ದು ಎಲ್ಲಾದರೂ ಭೂಮಿಗೆ ಅಪ್ಪಳಿಸಿದರೆ ಸಾಕಷ್ಟು ಅಪಾಯ ಮಾಡಬಹುದಾಗಿತ್ತು. ಖಗೋಲಜ್ಞರು ಬೇಗಬೇಗನೆ ಲೆಕ್ಕ ಹಾಕಿ ನೋಡಿದರು. ಈ ಪ್ರದಕ್ಷಿಣೆಯಲ್ಲಂತೂ ಅದು ಭೂಮಿಗೆ ಅಪ್ಪಳಿಸಲಾರದೆಂದು ಅವರ ಗಣಿತ ಹೇಳಿತು. ಈ ದಾರಿ ತಪ್ಪಿದ ಉಲ್ಕೆ ಭೂಮಿಗೆ ೧೫೦ ಲಕ್ಷ ಮೈಲಿನಷ್ಟು ಹತ್ತಿರ ಬಂದು ಎತ್ತಲೋ ಹೋಗುವದಂತೆ. ಈ ಹಿಂದೆ ಇಂಥ ಹಲವು ಉಲ್ಕೆಗಳು ಭೂಮಿಯ ಸಮೀಪಕ್ಕೆ ಹಾಯ್ದು ಹೋದ್ದರೂ ಅವು ಬಹು ವೇಗವಾಗಿ ಕಣ್ಮರೆಯಾಗಿದ್ದವು. ಆದರೆ ಈ ಉಲ್ಕೆ ಸಾಕಷ್ಟು ಹೊತ್ತು ಗೋಚರದಲ್ಲಿದ್ದುದರಿಂದ ಅದರ ಓಟವನ್ನು ನಿರ್ಧರಿಸಿ ಅದು ಸೂರ್ಯನ ಆ ಪಾರ್ಶ್ವಕ್ಕೆ ಹೋದಾಗ ಎಲ್ಲಿಗೆ ಹೋಗುವದೆಂದು ಗಣಿತಜ್ಞರು ಕಂಡುಹಿಡಿಯಬಹುದು.

ವಿಚಿತ್ರ ರೂಢಿಗಳು

ಆಫ್ರಿಕೆಯ ಮಂತ್ರವಾದಿ ಸಂಘಗಳು

ಸದಸ್ಯತ್ವ ವರ್ಗಣಿ : ಇಬ್ಬರು ಹೆಣ್ಮಕ್ಕಳು !



ಕೈಲಾಸದ ಒಡೆಯನಾದ ಪರಮೇಶ್ವರನು ಹುಲಿಯ ಚರ್ಮ ಧರಿಸುವನೆಂದು ಪುರಾಣಗಳು ಹೇಳುತ್ತವೆ. ರುಂಡಮಾಲೆ, ವ್ಯಾಘ್ರಚರ್ಮ ಮೊದಲಾದ ಭಯಾನಕ ಆಭರಣಗಳನ್ನು ಧರಿಸಿದ್ದರೂ ಆತ "ಶಂ"-ಕರ, ಅಂದರೆ ಮಂಗಲಕಾರಿಯೆಂದು ಪೂಜಿಸಲ್ಪಡುತ್ತಾನೆ. ಆದರೆ ಕತ್ತಲೆಯ ಖಂಡವೆಂದು ಹೆಸರಾದ ಆಫ್ರಿಕೆಯಲ್ಲಿ ಹಾಗಲ್ಲ. ಹುಲಿಯ ಚರ್ಮವೆಂದರೆ ಮೃತ್ಯು, ಭೀಕರ ಕೊಲೆ, ಮಂತ್ರವಾದಗಳ ಸಂಕೇತ. ಬಂಕಿಮಚಂದ್ರರ ಕಾದಂಬರಿಗಳಲ್ಲಿ ಕಾಪಾಲಿಕರ ಭಯಾನಕ ಕರ್ಮಗಳ ಕಥೆ ಓದಿದವರಿಗೆ ಆಫ್ರಿಕೆ ಮಾನವ ವ್ಯಾಘ್ರಗಳ ಕಲ್ಪನೆ ಬರಬಲ್ಲದು.

ಆಫ್ರಿಕೆಯ ಕಪ್ಪು ಜನರ ವಾಸಸ್ಥಾನಗಳಲ್ಲಿ, ಈ ವ್ಯಾಘ್ರ ಮಾನವರ ಸಾಮೀಪ್ಯದ ಸುದ್ದಿಯೆದ್ದಿತೆಂದರೆ, ಹಳ್ಳಿಗರ ಎದೆ ಸಂಜೆಯಾಗುತ್ತಲೆ ಗಡಗುಟ್ಟಿ ನಡುಗತೊಡಗುವದು. ಅವರು ಕಟ್ಟಿಗೆಯನ್ನೊಟ್ಟಿ ಬೆಂಕಿಮಾಡಿ ಕಣ್ಣಲ್ಲೆಣ್ಣೆ ಹಾಕಿಕೊಂಡು ಜೀವ ಕೈಯಲ್ಲಿ ಹಿಡಿದುಕೊಂಡು ಕಾಯುವರು. ಚಿಕ್ಕಮಕ್ಕಳ ತಾಯಂದಿರು ತಮ್ಮ ಹಸುಳೆಗಳನ್ನು ಎದೆಗೆ ಅವಚಿಕೊಂಡು ಕಾತರನೇತ್ರಗಳಿಂದ ಬಹಬಹುಪಾದ ಗಂಡಾಂತರವನ್ನು ಎದುರು ನೋಡುತಿರುತ್ತಾರೆ. ಯಾರಿಗೆ ಗೊತ್ತು, ನಿರುಪದ್ರವಿಯೆಂದು ತೋರುವ ನೆರೆಮನೆಯವನೊಬ್ಬ ರಾತ್ರಿ ಬೆಳಗಾಗುವದರೊಳಗೆ ಹುಲಿಯಾಗಿ ಮಕ್ಕಳನ್ನೊ, ಗಂಡನನ್ನೊ ತನ್ನನ್ನೆಯೊ ಸೆಳೆದೊಯ್ದು ದೇವತೆಗೆ ಬಲಿಗೊಟ್ಟರೆ?

ರಾತ್ರಿಂಚರರು

ಮಧ್ಯ ಆಫ್ರಿಕೆಯಲ್ಲಿ ಎಲ್ಲೆಲ್ಲೂ ಈ ಹುಲಿ-ಮನುಷ್ಯನ ಕಥೆ ಒಂದೇ ಬಗೆಯಾಗಿ ಕೇಳಬರುತ್ತದೆ. ಸ್ತಬ್ಧವಾದ ನಡುರಾತ್ರಿಯಲ್ಲಿ ಗದ್ದಲವೇಳುತ್ತದೆ. ಯಾವುದಾದರೊಂದು ಮನೆಯ ಕೋಳಿಯನ್ನು ನರಿಗಳು ಕದ್ದೊಯ್ಯುವಷ್ಟೇ ಚಮತ್ಕಾರದಿಂದ ಮಗುವನ್ನೋ ಹೆಂಗಸನ್ನೋ ಗಂಡಸನ್ನೋ ಹುಲಿಯೊಂದು ಸೆಳೆದುಕೊಂಡು ಆಫ್ರಿಕೆಯಲ್ಲಿ ಎಲ್ಲೆಲ್ಲೂ ಇರುವ ಅರಣ್ಯದಲ್ಲಿ ಕಣ್ಮರೆಯಾಗಿ ಬಿಡುತ್ತದೆ. ಮರುದಿನ ಹುಡುಕಾಡಿದರೆ ಆ ಬಡಪಾಯಿ ಸತ್ತುಬಿದ್ದಿರುವದು ಕಾಣುತ್ತದೆ. ಗಂಟಲಲ್ಲಿ ಕೋರೆದಾಡೆಯ ಗುರುತು, ಮೈಯೆಲ್ಲ ಹುಲಿಯುಗುರಿನ ಗಾಯ. ದಿಟ್ಟರಾದ ಹಳ್ಳಿಗರಾರಾದರೂ ಓಡುವ ಹುಲಿಯನ್ನು ಪಂಜುಗಳ ಬೆಳಕಿನಲ್ಲಿ ಬೆನ್ನಟ್ಟಿದರೆ ಆಗ ಕ್ಷಣಾರ್ಧದಲ್ಲಿ ನೆಲದ ಮೇಲಿನ ಹುಲಿಯುಗುರ ಕುರುಹು ಮನುಷ್ಯನ ಹೆಜ್ಜೆಯಾಗಿ ಮಾರ್ಪಡುವದುಂಟು. ಯಾರಾದರೊಬ್ಬನ ಭಲ್ಲೆಗೆ ಗುರಿಯಾದರೂ ಹುಲಿ ಹೆಚ್ಚಾಗಿ ತಪ್ಪಿಸಿಕೊಳ್ಳುತ್ತದೆ. ಆದರೆ ಮರುದಿನ ಯಾರೊ ಗುರುತಿಲ್ಲದ ಮನುಷ್ಯ ಕಾಲಿಗೆ ಅರಿವೆ ಸುತ್ತಿಕೊಂಡು ಸಮೀಪದಲ್ಲಿ ಕುಳಿದಾಡುವದನ್ನು ಕಾಣಬಹುದು. ಅಂಥ ಗಾಯಾಳು ಕಣ್ಣಿಗೆ ಬಿದ್ದಲ್ಲಿ ಹಿಂದಿನ ರಾತ್ರಿಯ ಹುಲಿ ಮನುಷ್ಯ ಈತನೆ ಎಂದು ಬಗೆದು ಹಳ್ಳಿಗರು ಅವನನ್ನು ಕುಟ್ಟಿಕುಟ್ಟಿ ಕೊಂದುಹಾಕುತ್ತಾರೆ.

ಪ್ರಾಚೀನ ಸಂಸ್ಥೆ

ಯುದ್ಧ ಕಾಲದಿಂದೀಚೆಗೆ ಈ ಬಗೆಯ ಹುಲಿ-ಕೊಲೆಗಳು ಬಹಳ ಬೆಳೆದಿವೆ. ಆದಕಾಗಿ ಮೊನ್ನೆ ಮೊನ್ನೆ ೧೮ ಜನ "ಮಂತ್ರವಾದಿ"ಗಳನ್ನು ಗಲ್ಲಿಗೆ ಹಾಕಲಾಯಿತು. ಆದರೆ ಆಫ್ರಿಕೆಯಲ್ಲೆಲ್ಲ ಹಬ್ಬಿರುವ ಈ ಹುಲಿ ಮಂತ್ರವಾದಿಗಳಲ್ಲಿ ನೂರಕ್ಕೊಬ್ಬರನ್ನೂ ಇದರಿಂದ ಗತಿಕಾಣಿಸಿದಂತಾಗಲಿಲ್ಲ. ಸಿಕ್ಕಿಬಿದ್ದವರಲ್ಲಿ ಕೂಡ ಅನೇಕರು ಬಿಳಿಯರ ಪುರಾಣೆ ಕಾಯದೆಗಳಲ್ಲಿರುವ ಬಿಲಗಳಿಂದ ಸುಲಭವಾಗಿ ನುಣಚಿಕೊಳ್ಳುತ್ತಾರೆ. ಇದರಿಂದ ಮೂಲ ನಿವಾಸಿಗಳ ಅಸಂತೋಷ ಹೆಚ್ಚಿದೆ.

ವ್ಯಾಘ್ರ ಮಂತ್ರವಾದಿಗಳ ಸಂಸ್ಥೆಯು ಆಫ್ರಿಕೆಯಷ್ಟೇ ಹಳೆಯದೆಂದು ಹೇಳಲಾಗಿದೆ. ಪಶ್ಚಿಮ, ಮಧ್ಯ ಮತ್ತು ಪೂರ್ವ ಆಫ್ರಿಕೆಯ ಎಲ್ಲ ಭಾಗಗಳಲ್ಲಿ ಈ ಭಯಾನಕ ಕಾಪಾಲಿಕರು ತಮ್ಮ ಬೀಭತ್ಸ ವ್ಯಾಪಾರವನ್ನು ನಡೆಸುತಿದ್ದಾರಂತೆ. ಈ ದ.ರಾಕ್ಷಸರು; ನಮ್ಮ ಪುರಾಣಗಳ ರಾಕ್ಷಸರಂತೆ, ಬೇಕಾದಾಗ ಹುಲಿಯ ರೂಪ ಬೇಕಾದಾದ ಮನುಷ್ಯ ರೂಪ ತಳೆಯಬಲ್ಲರೆಂದು ಆಫ್ರಿಕೆಯ ಮೂಲ ನಿವಾಸಿಗಳು ನಂಬಿದ್ದರೂ ಅವರು ಹುಲಿಯ ಚರ್ಮವನ್ನು ಹೊದ್ದ ಮನುಷ್ಯರು ಹೊರತು ಬೇರಲ್ಲವೆಂದು ಹೇಳಬಹುದು.

ದೇವತೆಗಳ ಪ್ರೀತ್ಯರ್ಥ

ಇದೆಲ್ಲ ಏಕೆ?— 'ಜು-ಜು'ವಿನ ಪ್ರೀತ್ಯರ್ಥ. "ಜು-ಜು"ಗಳೆಂದರೆ ನಾವು ದುಷ್ಟ ದೇವತೆಗಳೆಂದು ಕರೆಯುವ ಒಂದುಬಗೆಯ ಭೂತಗಳು. ಅವುಗಳಲ್ಲಿ ಕೆಲವು ಕೋಳಿಯ ತಲೆಗಳನ್ನು ಬೇಡಿದರೆ ಉಳಿದವು ಮನುಷ್ಯನ ರುಂಡವನ್ನೆ ಬೇಡುತ್ತವೆ. ಇನ್ನು ಕೆಲವು ಕೊಲೆಗಳು ವಶೀಕರಣ, ಸಂಪತ್ತು, ಮಂತ್ರೌಷಧಗಳಿಗಾಗಿಯೂ ಆಗುತ್ತವೆ. ಈಚೆಗೆ ಗಲ್ಲಿಗೇರಿಸಲ್ಪಟ್ಟ ಒಬ್ಬ ಮಂತ್ರವಾದಿ ವೈದ್ಯನು ಯಾವನೋ ಒಬ್ಬ ಗೌಡನ ರಕ್ಷೆಗಾಗಿ ಹಳ್ಳಿಗನೊಬ್ಬನನ್ನು ಕೊಂದು ಅವನ ರುಂಡವನ್ನು ಒಂದು ವಿಶಿಷ್ಟ ಔಷಧಕ್ಕಾಗಿ ಉಪಯೋಗಿಸಿದ್ದನಂತೆ!

ನಮ್ಮ ಡಾಕ್ಟರರ ಸಂಘಗಳಿರುವಂತೆ ಈ ಮಂತ್ರ ವೈದ್ಯರವೂ ಸಂಘಗಳೇ ಇವೆಯಂತೆ! ವಿವಿಧ ಭೂತಗಳನ್ನು ಶಾಂತಗೊಳಿಸಲು ಇವರು ಬೇರೆ ಬೇರೆ "ಫೀ" ಚಾರ್ಜು ಮಾಡುತ್ತಾರೆ; ಸಿಡಿಲದೇವತೆ "ಹೆಬೀಜೋ"ನನ್ನು ಸಂತೋಷಗೊಳಿಸಲು ೪೦ ಪೌಂಡ್ ಚಾರ್ಜಾದರೆ, ಮೃತ್ಯುದೇವತೆ "ಅತಂದೋ"ನನ್ನು ಪ್ರಸನ್ನಗೊಳಿಸಲು ೧೦೦ ಪೌಂಡ್ ಬೀಳುವದು!

ಗುಪ್ತ ಸಂಘಗಳು

ಆದರೆ "ಕಾಪಾಲಿಕ" ಹುಲಿ ಮಾನವರ ವ್ಯಾಪಾರ ಎಲ್ಲಕ್ಕೂ ಭಯಾನಕ. ಆಫ್ರಿಕೆಯಲ್ಲೆಲ್ಲ ಅವರ ಗುಪ್ತ ಸಂಘಗಳಿವೆ. ಹುಲಿ ಮನುಷ್ಯರು ಮತ್ತು ನೀರ-ಹುಲಿ ಮನುಷ್ಯರೆಂದು ಇದರಲ್ಲಿ ಎರಡು ಬಗೆ. ನೀರ ಹುಲಿ ಸಂಘಕ್ಕೆ ಆ ಹೆಸರು ಬರಲು ಅವರು ಬಲಿಕೊಡುವ ಮೊದಲು ಬಲಿಬೀಳುವವರನ್ನು ನೀರಲ್ಲಿ ಮುಳುಗಿಸಿ ಕೊಲ್ಲುವದೇ ಕಾರಣ. ಇವೆರಡು ಸಂಘಗಳ ಆಚಾರ ವಿಚಾರ ಭಿನ್ನವಾಗಿದ್ದರೂ ಕೊಲೆ, ನರಬಲಿ, — ಅಷ್ಟೇ ಏಕೆ, ನರಭಕ್ಷಣ ಕೂಡ ಎರಡಕ್ಕೂ ಸಮಾನವೇ. ಇವು ದೇವತಾ ಸಂತುಷ್ಟಿಗಾಗಿ ಮಾತ್ರವಲ್ಲ, ದ್ವೇಷದ ಮೂಲಕ, ಲಾಭಕ್ಕಾಗಿ, ಇಲ್ಲವೆ ಪ್ರೇಮಕ್ಕಾಗಿ ಯಾರನ್ನಾದರೂ ಕೊಲ್ಲಿಸಬಯಸುವವರಿಂದ ಹಣಪಡೆದು ಕೂಡ ಕೊಲೆ ಮಾಡುವರು.

ಈ ಮಾಂತ್ರಿಕರ ಸಂಘಗಳು ಎಲ್ಲೆಲ್ಲಿಯೂ ಹಬ್ಬಿದ್ದರೂ ಅವುಗಳ ಒಳಗುಟ್ಟುಗಳು ಹೊರ ಜಗತ್ತಿಗೆ ಇನ್ನೂ ಗೊತ್ತಾಗಿಲ್ಲ. ಅವುಗಳ ಸದಸ್ಯರಲ್ಲಿ ಶಿಸ್ತು ಅಷ್ಟು ಕಠೋರವಾಗಿದೆ. ಸಿಕ್ಕಿಬಿದ್ದರೂ ಅದರ ಸದಸ್ಯರು ಏನಾದರೂ ಬಾಯಬಿಡುವದಿಲ್ಲ.

ಆ ಸಂಘಗಳಲ್ಲಿ ಸೇರಬೇಕಾದರೆ ಪ್ರವೇಶಾಪೇಕ್ಷಿಗಳು ತೆರಬೇಕಾದ ಬೆಲೆಯೂ ಭಯಂಕರವೇ ಇದೆ. "ನೀರ ಹುಲಿಗಳು" ತಮ್ಮ ಸಮಾಜದಲ್ಲಿ ಸೇರಲಪೇಕ್ಷಿಸುವವರಿಂದ ಒಬ್ಬ ಯುವತಿ ಒಬ್ಬ ಹುಡುಗಿಯನ್ನು ಕೇಳುತ್ತಾರೆ. ಅವರಿಬ್ಬರೂ ಉಮೇದ್ವಾರನ ಸಮೀಪ ಬಂಧುಗಳಿರತಕ್ಕದ್ದು. ಅವರಿಬ್ಬರನ್ನೂ ಬಲಿಕೊಟ್ಟು ಅವರ ಮಾಂಸವನ್ನು ತಿನ್ನುವ ಭಯಾನಕ ರೂಢಿಯಿದೆ. ಅವರ ಹೃದಯ ಪಿಂಡಗಳನ್ನಷ್ಟೇ ವಿಶೇಷ "ದೇವತೆ"ಯೆಂದು ಕಾದಿಡುತ್ತಾರೆ.

ಸಂಪಾದಕೀಯ ಟೀಕೆಟಿಪ್ಪಣಿಗಳು

ಸಮಯೋಚಿತ ಸದುಪದೇಶ

ಮುಂಬಯಿ ಸರಕಾರದ ಗೃಹ ಮತ್ತು ಕಂದಾಯ ಶಾಖೆಗಳ ಮಂತ್ರಿಗಳಾದ ಮಾನ್ಯ ಮುರಾರಜಿಯವರು ಕಳೆದ ವಾರ ವಿಜಾಪುರ ಜಿಲ್ಲೆಯ ದಕ್ಷಿಣ ಭಾಗದಲ್ಲಿ ಸಂಚರಿಸಿದರು. ಹಿಂದುಸ್ಥಾನದಲ್ಲಿ ಈಗ ಸ್ವಾತಂತ್ರ್ಯ ಸಂಸ್ಥಾಪಿತವಾಗಿದೆ. ತಮ್ಮ ಎಲ್ಲ ಬಗೆಯ ಕಷ್ಟನಿಷ್ಠುರಗಳು ಕೂಡಲೆ ನಿವಾರಿಸಲ್ಪಡಬೇಕು ಎಂದು ಆತ್ಮಾತುರರಾದ ಜನಸಾಮಾನ್ಯರು ಸದ್ಯದ ಪರಿಸ್ಥಿತಿಯನ್ನು ನೋಡಿ ನಿರಾಶರಾದುದುಂಟು. ಜನಸಾಮಾನ್ಯದ ಪರಿಸ್ಥಿತಿ ಸ್ವಾತಂತ್ರ್ಯ ಸಂಪಾದನೆಯ ನಂತರ ಸುಧಾರಿಸಿಲ್ಲ. ಇಷ್ಟೇ ಅಲ್ಲ, ಅದು ಮತ್ತಿಷ್ಟು ಕೆಟ್ಟಿದೆ. ಆಹಾರ ಪದಾರ್ಥಗಳ ಮೇಲಿನ ನಿಯಂತ್ರಣವನ್ನು ತೆಗೆದು ಹಾಕಿದ್ದರಿಂದ ಅವುಗಳ ಬೆಲೆಗಳು ಮಿತಿಮೀರಿ ಏರಿ ಇಂದು ಧಾನ್ಯ ಕೊಂಡುತಿನ್ನುವವರಿಗೆ ವಿಪರೀತ ಕಷ್ಟವೆನಿಸಹತ್ತಿದೆ. ಅಲ್ಲಲ್ಲಿ ಗಲಭೆಗಳು ಸಂಭವಿಸಿ ಪ್ರಜೆಗಳ ವಿತ್ತಜೀವಿತಗಳ ಬಗ್ಗೆ ವಿವಂಚನೆಯಾದುದುಂಟು. ಗಡಿ ಭಾಗದಲ್ಲಿರುವ ಜನರು ಅನುಭೋಗಿಸುವ ಕಷ್ಟನಷ್ಟಗಳಂತೂ ವಿಪರೀತವಾಗಿವೆ. ಇವೆಲ್ಲ ಬೇಗ ಸರಿಪಡಿಸಲ್ಪಡುವದು ಅವಶ್ಯ. ಆದರೆ ಅನೇಕ ಕಾರಣಗಳ ಮೂಲಕ ಇದೆಲ್ಲ ಆಗಬೇಕಷ್ಟು ಒತ್ತರದಿಂದ ಆಗಲೊಲ್ಲದು. ಅಂತೆಯೇ ಮಾನ್ಯ ಮಂತ್ರಿಗಳು, ತಾಳ್ಮೆಯಿಂದಿರಬೇಕು. ಒಮ್ಮೆಲೆ ಎಲ್ಲವೂ ಬದಲಾಗದು ಎಂದು ಈ ಸಂಚಾರದಲ್ಲಿ ಹೇಳಬೇಕಾಯಿತು. ಜನತೆಯ ನೈತಿಕ ಮಟ್ಟವು ಬರಬರುತ್ತ ಬಹಳ ಕೆಳಗಿಳಿಯುತ್ತ ನಡೆದುದನ್ನು ಲಕ್ಷಿಸಿ ಮಂತ್ರಿಗಳು ಅದನ್ನು ಎತ್ತರಿಸಿಕೊಳ್ಳಲು ಉಪದೇಶಿಸಿದ್ದಾರೆ. ದೇಶದಲ್ಲಿ ರಾಮರಾಜ್ಯ ಪ್ರಸ್ಥಾಪಿತವಾಗಬೇಕಾದರೆ ಕೇವಲ ಮಂತ್ರಿಗಳಷ್ಟೇ ರಾಮನಂತಾದರೆ ನಡೆಯದು. ಪ್ರಜೆಗಳು ನೀತಿಯನ್ನು ಸುಧಾರಿಸಿಕೊಳ್ಳಬೇಕೆಂದು ಹೇಳಿದರು. ಇದರ ಗುಟ್ಟನ್ನು ಎಲ್ಲರೂ ತಿಳಿದುಕೊಳ್ಳುವದು ಅವಶ್ಯವಿದೆ. ಲಂಚಬಡಕತನ, ಲಾಭಬಡಕತನ, ಅಧಿಕಾರಲಾಲಸೆ, ಜಾತ್ಯಂಧತೆ, ಕೊಲೆ, ಸುಲಿಗೆ, ಕೊಳ್ಳೆಗಳಿಗೆಳಸುವದು ಮೊದಲಾದವೆಲ್ಲ ಮಾನವನ ನೀತಿಯನ್ನು ಕಳೆದು ಅವನನ್ನು ಅಧಃಪಾತಕ್ಕೆ ಒಗೆಯುವಂಥವು. ಈ ದುರ್ಗುಣಗಳನ್ನು ಬಿಟ್ಟುಗೊಟ್ಟಾಗಲೆ ಮಾನವನ ನೀತಿಮತ್ತೆ ಸುಧಾರಿಸುವದು. ರಾಮರಾಜ್ಯ ಪ್ರಸ್ಥಾಪನೆಗೆ ಅವಕಾಶವುಂಟಾಗುವದು. ಮಂತ್ರಿಗಳು ಮಾಡಿದ ಈ ಉಪದೇಶವನ್ನು ನೆನೆದು ಜನಸಾಮಾನ್ಯವೆಲ್ಲ ಅದರಂತೆ ನಡೆಯಲಣಿಯಾದರೆ ಅವರ ಸಂಚಾರ ಸಾರ್ಥಕವಾಗುವದು. ಇನ್ನೊಂದು ಮಾತನ್ನು ಮಂತ್ರಿಗಳು ಈ ಸಂಚಾರದಲ್ಲಿ ಸ್ಪಷ್ಟಪಡಿಸಿರುವರು. ಈ ರಾಜ್ಯವು ಕೇವಲ ರೈತರದಲ್ಲ ಕೂಲಿಕಾರರದಲ್ಲ. ಇಲ್ಲಿರುವ ಪ್ರತಿಯೊಂದು ಸಮಾಜವನ್ನೂ ವರ್ಗವನ್ನೂ ಸರಕಾರವು ಪಾಲಿಸಬೇಕಾಗುತ್ತದೆ. ಅವರ ಹಿತಸಂಬಂಧಗಳನ್ನು ನೋಡಬೇಕಾಗುತ್ತದೆ ಎಂದು ಮಂತ್ರಿಗಳು ಹೇಳಿದರು. ಹೊಲ ಸಾಗುವಳಿ ಕಾಯದೆಯ ಅಪಪ್ರಚಾರದಿಂದ ರೈತರೇ ನಾಡಿನ ಒಡೆಯರು. ಅವರು ಮಾಡಿದ್ದೇ ಕಾಯದೆ. ಒಡೆಯರಿಗೆ ಲಾವಣಿ ಮುಂತಾದ್ದನ್ನು ಕೊಡಬಾರದೆಂದು ಅವರಿಗೆನಿಸಿದರೆ ಹಾಗೆ ಮಾಡಬಲ್ಲರು ಎಂದು ಮುಂತಾಗಿ ರೈತರ ಭಾವನೆಯಾಗಿದ್ದರಿಂದ ಅನೇಕ ಹಳ್ಳಿಗಳಲ್ಲಿ ಶಾಂತಿ ನೆಮ್ಮದಿಯಿರುವುದಿಲ್ಲ. ಹೊಲದೊಡೆಯರಿಗೆ ಬಹಳ ಕಷ್ಟನಿಷ್ಠುರಗಳನ್ನನುಭವಿಸಬೇಕಾಗುತ್ತದೆ. ಇದಕ್ಕೆ ಹೊಣೆಗಾರರಾದವರು ಮಾನ್ಯ ಮಂತ್ರಿಗಳ ಮಾತಿನ ರಹಸ್ಯವನ್ನು ಅರಗಿಸಿಕೊಂಡು ವರ್ತಿಸುವದು ಅವಶ್ಯವಾಗಿದೆ. ಮಾನ್ಯ ಮುರಾರಜಿಯವರು ಸಮಯೋಚಿತ ಮಾತುಗಳನ್ನು ಹೇಳಿದುದಕ್ಕಾಗಿ ಅಭಿನಂದನಾರ್ಹರಾಗಿರುವರು. ರೈತರು ಮತ್ತು ಇತರರು ಅವರ ಉಪದೇಶದಂತೆ ನಡೆಯಲು ಮುಂದಾದರೆ ಪರಿಸ್ಥಿತಿ ಬಹಳ ಮಟ್ಟಿಗೆ ಸುಧಾರಿಸಬಲ್ಲದೆಂದು ನಮ್ಮ ಅಭಿಪ್ರಾಯ.

ಗವ್ಹರ್ನರರ ಸಂಚಾರ

ಮುಂಬಯಿ ಪ್ರಾಂತದ ಗವ್ಹರ್ನರರಾದ ಸರ್. ಮಹಾರಾಜಸಿಂಗರು ಕಳೆದವಾರ ಉತ್ತರ ಕನ್ನಡ ಜಿಲ್ಲೆಯ ಕೆಲ ಭಾಗಗಳಲ್ಲಿ ಸಂಚರಿಸಿ ಜಿಲ್ಲೆಯ ಅಭಿವೃದ್ಧಿಯ ಬಗ್ಗೆ ಕೆಲ ಮಹತ್ವದ ಮಾತುಗಳನ್ನು ಹೇಳಿದರು. ಜಿಲ್ಲೆಯು ವನಸಂಪತ್ತಿನ ಬೀಡಾಗಿದ್ದರೂ ಅದರ ಸಾಕಷ್ಟು ಉಪಯೋಗ ಜಿಲ್ಲೆಗೆ ಆಗದಿರುವದು ದುರ್ದೈವದ ಮಾತಾಗಿದೆ. ಸ್ವತಂತ್ರ ಹಿಂದುಸ್ತಾನದಲ್ಲಿಯಾದರೂ ಇದೆಲ್ಲ ಸಾಧನಸಂಪತ್ತಿಯ ಸದುಪಯೋಗವಾಗುವದೆಂದು ಆಶಿಸಲಾಗಿದೆ. ಕಾರವಾರ ನಗರಸಭೆ ಕೊಟ್ಟ ಮಾನಪತ್ರಕ್ಕೆ ಉತ್ತರಕೊಡುವಾಗ ಗವ್ಹರ್ನರರು, ಕಾರವಾರವನ್ನು ಮರೆತಿಲ್ಲ ಅದಕ್ಕೆ ಎಲ್ಲ ಬಗೆಯ ನಾಗರಿಕ ಅನುಕೂಲತೆಗಳನ್ನು ಒದಗಿಸಿ ಕೊಡಲಾಗುವದೆಂದು ಆಶಿಸಿದರು. ಉತ್ತರ ಕನ್ನಡ ಜಿಲ್ಲೆಗೆ ಜೋಗದ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡುವದರ ಬಗ್ಗೆ ಮಾಡಿಕೊಂಡ ಬಿನ್ನಹಕ್ಕೂ ಮಹಾರಾಜಸಿಂಗರು ಪ್ರಾಂತದ ದಕ್ಷಿಣ ಭಾಗದಲ್ಲಿಯ ಔದ್ಯೋಗಿಕ ಅನುಕೂಲತೆಗಳನ್ನು ವಿಚಾರಿಸಲು ವಿಶೇಷ ಅಧಿಕಾರಿಯನ್ನು ನೇಮಿಸಲಾಗಿದೆಯೆಂದು ಹೇಳಿದರು. ಕಾಳೀ ನದಿಯ ಯೋಜನೆಯ ಬಗ್ಗೆ ವಿಚಾರ ಮಾಡಿ ವರದಿಯನ್ನೊಪ್ಪಿಸಲು ಒಂದು ಕಂಪನಿಗೆ ಕೇಳಿಕೊಂಡಿದ್ದು ಅದರ ವರದಿ ಬಂದ ನಂತರ ಮುಂದಿನ ಕ್ರಮ ಕೈಕೊಳ್ಳಲಾಗುವದೆಂದು ಹೇಳಿದರು. ವಿಚಾರಣೆ, ವರದಿ, ನಿರ್ಧಾರ ಮೊದಲಾದವುಗಳಲ್ಲಿಯೆ ವಿಶೇಷ ವೇಳೆ ವ್ಯಯವಾಗದೆ ಬೇಗ ಕಾರ್ಯ ಪ್ರಾರಂಭವಾಗಲಿ ಎಂದಿಷ್ಟೇ ನಾವೀ ಸಮಯದಲ್ಲಿ ಸರಕಾರವನ್ನು ಕೇಳಿಕೊಳ್ಳಬೇಕಾಗಿದೆ. ಉತ್ತರ ಕನ್ನಡ ಜಿಲ್ಲೆಯ ಅಭಿವೃದ್ಧಿಯಾಗಬೇಕಾದರೆ ರೇಲ್ವೆಯ ಅನುಕೂಲತೆ ಅತ್ಯವಶ್ಯವೆಂದು ಎಂದಿನಿಂದಲೂ ಕೇಳಿಕೊಳ್ಳಲಾಗುತಿದೆ. ಆದರೆ ಒಂದಿಲ್ಲೊಂದು ಕಾರಣದಿಂದ ಅದು ನೆನಗುದಿಗೆ ಬೀಳಹತ್ತಿದೆ. ಯಲ್ಲಾಪುರ ಹಳ್ಯಾಳ ಮಾರ್ಗವಾಗಿ ಅಳ್ನಾವರದಿಂದ ಕಾರವಾರಕ್ಕೆ ರೇಲ್ವೆ ಹಾಕುವ ಬಗ್ಗೆ ಮುಂಬಯಿ ಸರಕಾರದವರು ರೇಲ್ವೆ ಬೋರ್ಡಿನವರ ಗೂಡ ವಿಚಾರ ನಡೆಸಿದ್ದಾರೆ. ಆದರೆ ಇದೆಲ್ಲ ಕಾರವಾರ — ಭಟಕಳ ಬಂದರಗಳಲ್ಲಿ ಯಾವದು ಅಭಿವೃದ್ಧಿಯಾಗತಕ್ಕದ್ದೆಂಬದನ್ನೇ ಅವಲಂಬಿಸಿದೆಯೆಂದು ಸರ್ ಸಾಹೇಬರು ಹೇಳಿದರು. ಉತ್ತರ ಕನ್ನಡ ಜಿಲ್ಲೆಗೆ ರೇಲ್ವೆ ಅನುಕೂಲತೆಗಳನ್ನು ಮಾಡಿಕೊಡುವದು ಈ ಬಂದರಗಳ ಅಭಿವೃದ್ಧಿಯನ್ನೇಕೆ ಅವಲಂಬಿಸಬೇಕೊ ತಿಳಿಯದು. ಯಾವ ಬಂದರವಾದರೂ ಕಾರವಾರ ಜಿಲ್ಲೆಗೆ ರೇಲ್ವೆ ಅತ್ಯವಶ್ಯವೆಂಬದನ್ನು ನೆನೆದು ಸರಕಾರದವರು ಅತ್ತ ಗಮನಿಸುವದು ಅವಶ್ಯವಾಗಿದೆ. ಆಹಾರ ಪದಾರ್ಥಗಳ ಪೂರೈಕೆಯ ಆಶ್ವಾಸನವನ್ನು ಗವರ್ನರ ಸಾಹೇಬರು ಕೊಟ್ಟಿದ್ದು ಅದರಿಂದ ಬೆಲೆಗಳು ಇಳಿಯಬಹುದೆಂದೂ ಆಶಿಸಿದ್ದಾರೆ. ಗವರ್ನರ ಸಾಹೇಬರು ಬರಿ ಆಶ್ವಾಸನ ಕೊಟ್ಟು ಜನತೆಯನ್ನು ಸಮಾಧಾನಪಡಿಸಲು ಹವಣಿಸದೆ ಅವರ ಬೇಡಿಕೆಗಳನ್ನು ಪ್ರತ್ಯಕ್ಷ ಒದಗಿಸಿ ಕೊಟ್ಟು ಅವರನ್ನು ಸಮಾಧಾನಪಡಿಸಬೇಕು. ಜಿಲ್ಲೆಯನ್ನು ಉಪೇಕ್ಷಿಸಲಾಗಿದೆಯೆಂಬ ಆರೋಪವನ್ನು ಕಾರ್ಯತಃ ನಿರಾಕರಿಸಬೇಕಲ್ಲದೆ ಬರಿ ಶಬ್ದಗಳಿಂದ ಅಲ್ಲ ಎಂದು ಗವರ್ನರರಿಗೆ ವಿನಯ್ಯಪೂರ್ವಕವಾಗಿ ಹೇಳಬಯಸುತ್ತೇವೆ.

ಸಹಕಾರಿ ಪರಿಷತ್ತು

ಸಹಕಾರಿ ಸಂಘಗಳು ಸರಿಯಾಗಿ ಕಾರ್ಯ ಮಾಡದ್ದರಿಂದ ಹಿಂದುಸ್ತಾನದಲ್ಲಿ ಅದಷ್ಟೊಂದು ಪ್ರಗತಿಯನ್ನು ಪಡೆದಿಲ್ಲೆಂದು ವಿಷಾದದಿಂದ ಹೇಳಬೇಕಾಗಿದೆ. ಅದರ ಧ್ಯೇಯ ಧೋರಣಗಳು ಪ್ರಶಂಸನೀಯವಾಗಿದ್ದರೂ ಅನೇಕ ಸಂದರ್ಭಗಳಲ್ಲಿ ಅವುಗಳಿಗನುಸಾರವಾಗಿ ಸಹಕಾರಿಗಳು ನಡೆಯದ್ದರಿಂದ ಉದ್ದಿಷ್ಟವು ಸಾಧಿಸದೆ ಅಹಿತವಾಗುವದುಂಟು, ಆದುದುಂಟು. ಆದರೆ ಇತ್ತೀಚೆ ಈ ಸಹಕಾರ ಪದ್ಧತಿಯಲ್ಲಿ ಸುಧಾರಣೆಯಾದುದು, ಆಗಬೇಕೆಂದು ಧುರೀಣರು ಪ್ರಯತ್ನಿಸುತ್ತಿರುವದು ತುಂಬ ಅಭಿನಂದನೀಯ ಸಂಗತಿಯಾಗಿದೆ. ಸದ್ಯದಲ್ಲಿ ಈ ಸಹಕಾರ ಪದ್ಧತಿಯ ಅವಲಂಬನವು ಅತ್ಯವಶ್ಯ ಮತ್ತು ಹಿತಕಾರಿಯಾಗಿದೆ. ನಮ್ಮ ರಾಷ್ಟ್ರದಲ್ಲಿ ಉತ್ಪಾದನೆಯನ್ನು ಹೆಚ್ಚಿಸಬೇಕಾಗಿದ್ದು ಅದು ಸಹಕಾರ ಪದ್ಧತಿಯಿಂದ ಹೆಚ್ಚು ಬೇಗ ಮತ್ತು ಯಶಸ್ವಿಯಾಗಿ ಸಾಧಿಸಬಲ್ಲುದು. ಮುಂಬಯಿಯಲ್ಲಿ ಕಳೆದ ವಾರ ಕೂಡಿದ ಪ್ರಾಂತೀಯ ಸಹಕಾರಿ ಪರಿಷತ್ತಿನ ಅಧ್ಯಕ್ಷಸ್ಥಾನದಿಂದ ಜಯಪುರದ ದಿವಾಣ ಸರ್ ವಿ. ಟಿ. ಕೃಷ್ಣಮಾಚಾರ್ಯರು ಈ ಮಾತನ್ನು ಚೆನ್ನಾಗಿ ವಿವರಿಸಿರುವರು. ತೀವ್ರಗಾಮಿಯಾದ ಮಾನಸಿಕ ಕ್ರಾಂತಿಯಾಗಬೇಕಾದರೆ ಜನಪ್ರತಿನಿಧಿಕವಾದ ಈ ಸಹಕಾರ ಪದ್ಧತಿಯಿಂದಲೆ ಸಾಧ್ಯವೆಂದು ಅವರು ಹೇಳಿರುವರು. ಹಿಂದುಸ್ತಾನದ ಒಕ್ಕಲತನದ ಉತ್ಪಾದನೆಯನ್ನು ಇಮ್ಮಡಿ ಮುಮ್ಮಡಿ ಹೆಚ್ಚಿಸುವದು ಅತ್ಯವಶ್ಯವಾಗಿದ್ದು ಇದು ರಶಿಯದ ಸಾಮೂಹಿಕ ಪದ್ಧತಿಯಿಂದ ಸಾಧ್ಯವಿಲ್ಲ, ಸಹಕಾರಿ ಪದ್ಧತಿಯಿಂದಲೆ ಸಾಧ್ಯವೆಂದು ಕೃಷ್ಣಮಾಚಾರಿಯವರು ಹೇಳಿದ್ದಾರೆ. ಹಿಂದುಸ್ತಾನದ ವಿಶಿಷ್ಟ ಪದ್ಧತಿಯನ್ನು ಅಭ್ಯಸಿಸಿದರೆ ಇದು ಸರಿಯೆಂದೆನಿಸುವದು. ವೈಯಕ್ತಿಕ ಲಾಭವನ್ನು ಮಾಡಿಕೊಂಡು ನೆರೆಹೊರೆಯವರಿಗೆ ಸಹಾಯ ಮಾಡುವದೇ ಸಹಕಾರ ಪದ್ಧತಿಯ ಮುಖ್ಯ ಗುರಿಯಾಗಿದೆ. ಸ್ವಾರ್ಥ ಪರಾರ್ಥಗಳೆರಡೂ ಇದರಲ್ಲಿ ಸಾಧಿಸುವವು. ಒಂದು ಬಗೆಯಿಂದ ರಾಷ್ಟ್ರೀಕರಣಕ್ಕಿಂತ ಇದು ಹೆಚ್ಚು ಪ್ರಯೋಜನಕಾರಿಯೆಂದು ಹೇಳಬಹುದು ಏಕೆಂದರೆ ರಾಷ್ಟ್ರೀಕರಣದಲ್ಲಿ ವೈಯಕ್ತಿಕ ಲಾಭದಾಸೆ ಇಲ್ಲದ್ದರಿಂದ ನಿರ್ಜೀವವೆನಿಸಬಲ್ಲುದು. ಅಂತೆಯೆ ಮಾನ್ಯ ಅಧ್ಯಕ್ಷರು ಸಹಕಾರ ಪದ್ಧತಿಯನ್ನು ಪುರಸ್ಕರಿಸಿರುವರು. ಕಾಳುಕಡಿಗಳ ಧಾರಣೆ ಮಿತಿಮೀರಿ ಏರಿದ ಈ ಸಮಯದಲ್ಲಿ ಈ ಸಹಕಾರಿ ಸಂಘಗಳು ಮುಂದೆ ಬಂದು ಸದಸ್ಯಬಂಧುಗಳಿಗೆ ಸಹಾಯ ಮಾಡುವದು ಕರ್ತವ್ಯವಾಗಿದೆ. ಇದೇ ಉದ್ದೇಶದಿಂದ ಹೊಸ ಸಂಘಗಳನ್ನು ಸ್ಥಾಪಿಸಬಹುದಾಗಿದೆ. ಜೀವನಾವಶ್ಯಕವಾದ ಎಲ್ಲ ಪದಾರ್ಥಗಳನ್ನು ಸಹಕಾರ ಪದ್ಧತಿಯಿಂದ ಪಡೆದುಕೊಳ್ಳುವದು ಲಾಭಕರವಾಗಿದೆ. ಮುಂಬಯಿ ಮುಖ್ಯ ಮಂತ್ರಿಗಳು ಸಹಕಾರೀ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಮದನರೂ ಸಹಕಾರಿ ಸಂಘಗಳ ಅಭಿವೃದ್ಧಿಯನ್ನು ಕೋರಿದ್ದು ಸಮಯೋಚಿತವಾಗಿದೆ.

ಹೊಣೆಗಾರರಾರು?

ನಿಜಾಮ ಹೈದರಾಬಾದದ ಇತ್ತೆಹಾದ ಸಂಸ್ಥೆಯ ಅಧ್ಯಕ್ಷರಾದ ಕಾಶೀಮ ರಜವಿಯವರು ಮನಬಂದಂತೆ ಭಾಷಣ ಮಾಡುತಿರುವದರಿಂದ ಅಲ್ಲಿನ ಪರಿಸ್ಥಿತಿ ಹದಗೆಟ್ಟು ಜನತೆ ಬಗೆಬಗೆಯ ಕಷ್ಟನಿಷ್ಠುರಗಳಿಗೆ ಆಹುತಿಯಾಗಬೇಕಾಗಿದೆ. ಸುಪ್ರಸಿದ್ಧ ಗ್ರಂಥಕರ್ತರಾದ ಶ್ರೀ ಕೃಷ್ಣಲಾಲ ಶ್ರೀಧರಾಣಿಯವರು ಇತ್ತೀಚೆ ಹೈದರಾಬಾದ ಸಂಸ್ಥಾನದಲ್ಲಿ ಸಂಚರಿಸಿ ಕೆಲ ಮಹತ್ವದ ಮಾತುಗಳನ್ನು ಹೇಳಿರುವರು. ಇತ್ತೆಹಾದ ಸಂಸ್ಥೆಯ ಅಧ್ಯಕ್ಷರಾದ ರಜವಿಯವರು ೩೧ ನೇ ತಾರೀಕು ಭಾಷಣ ಮಾಡಲೆ ಇಲ್ಲೆಂದು ಶ್ರೀಧರಾಣಿಯವರ ಮುಂದೆ ಹೇಳಿದರಂತೆ. ಆದರೆ ಅನೇಕ ಜನರನ್ನು ವಿಚಾರಿಸಲಾಗಿ ಅವರು ಭಾಷಣ ಮಾಡಿದ್ದು ನಿಜ. ಆದರೆ ಪತ್ರಿಕೆಗಳಲ್ಲಿ ಪ್ರಕಟಿಸಬಾರದೆಂದು ವಿಧಿಸಲಾಗಿತ್ತು ಎಂದು ಮುಂತಾಗಿ ಶ್ರೀ ಧರಾಣಿಯವರು ಪ್ರಸಿದ್ಧಿಸಿರುವರು. ರಜವಿಯವರ ಭಾಷಣಗಳು ಉಗ್ರವಾಗಿ ಇವೆಯೆಂದು ಅವರಿಗೆ ತಿಳಿಸಲು "ಅಹುದು, ನಾನು ಕೆಲವೊಂದು ವೇಳೆ ತಾಳದಪ್ಪಿ ಮಾತಾಡುವದುಂಟು ನಮ್ಮ ಜನರು ಧೈರ್ಯಗುಂದದಂತೆ ಅವರಿಗೆ ಹುರುಪು ತುಂಬಲು ಹೀಗೆಲ್ಲ ಭಾಷಣ ಮಾಡಬೇಕಾಗುವದು" ಎಂದು ಅವರು ಹೇಳಿದರೆಂದು ಶ್ರೀಧರಾಣಿಯವರು ಬರೆಯುತ್ತಾರೆ. ತಮ್ಮ ಜನರಲ್ಲಿ ಧೈರ್ಯ ತುಂಬುವುದಕ್ಕಾಗಿ ತಾಳದಪ್ಪಿ ಮಾತಾಡಿದರೆ ಅದರ ದುಷ್ಪರಿಣಾಮ ಉಳಿದ ಜನರ ಮೇಲೆ ಎಂತಾಗುವದೆಂಬದನ್ನು ಅವರು ವಿಚಾರಿಸಿರುವರೆ? ಹಿಂಸೋತ್ತೇಜಕ ಇಲ್ಲವೆ ಕೊಲೆ ಸುಲಿಗೆಗಳಿಗೆ ಪ್ರೇರೇಪಿಸುವ ಭಾಷಣಗಳ ಮೂಲಕವಾಗಿ ವಾಗಿ ಜನ ಆ ಬಗೆಯ ಕೃತ್ಯಗಳನ್ನೆಸಗಲು ಸಿದ್ಧವಾಗುವದೆಂಬುದು ಸ್ಪಷ್ಟವಾಗಿದೆ. ರಜವಿಯಂಥವರ ತಾಳದಪ್ಪಿದ ಭಾಷಣಗಳೇ ಹೈದರಾಬಾದದಲ್ಲಿ ಇಂದು ನಡೆದ ಕೊಲೆ ಸುಲಿಗೆಗಳಿಗೆ ಕಾರಣವೆಂದು ಹೇಳಿದರೆ ತಪ್ಪಾಗದು. ಜನತೆಯಲ್ಲಿ ಭಾವನೆಗಳನ್ನು ಒಮ್ಮೆ ಉದ್ರೇಕಿಸಿಬಿಟ್ಟರೆ ಅದರ ಪರಿಣಾಮ ಎಲ್ಲಿಯ ವರೆಗೆ ಮುಟ್ಟುವದೆಂಬುದನ್ನು ಹೇಳಲಾಗದು. ಹೈದರಾಬಾದ ಸಂಸ್ಥಾನ ಮತ್ತು ಗಡಿಗಳಲ್ಲಿ ನಡೆದ ದುರ್ಘಟನೆಗಳನ್ನು ತಡೆಯಬೇಕಾದರೆ ಜನತೆಯ ಉದ್ವೇಗಗೊಂಡ ಭಾವನೆಗಳನ್ನು ಸಮಾಧಾನಗೊಳಿಸುವದು ಅವಶ್ಯವಾಗಿವೆ ರಜವಿಯಂಥವರ ತಾಳತಪ್ಪಿದ ಭಾಷಣಗಳು ಕೂಡಲೆ ನಿಲ್ಲಬೇಕು. ಶಾಂತಿ ಸೌಹಾರ್ದತೆಯ ಸಂದೇಶ ಹಳ್ಳಿ ಹಳ್ಳಿಗೂ ಮುಟ್ಟಬೇಕು. ಹೈದರಾಬಾದ ನಿಜಾಮ ಸರಕಾರದವರು ಇತ್ತ ಬೇಗ ಗಮನಿಸಿದಷ್ಟು ಒಳ್ಳಿತು.

ಕೊನೆಯ ಎಚ್ಚರಿಕೆ

ರಜಕಾರರ ಹಾವಳಿಯ ಈ ದೃಶ್ಯವು ಭಯಾನಕವಾದ್ದರಿಂದಲೆ ಸಂಸ್ಥಾನದಲ್ಲಿ ಶಾಂತಿ ಸೌಹಾರ್ದ ಪ್ರಸ್ಥಾಪಿತವಾಗಲೊಲ್ಲದು. ಹಿಂದುಸ್ತಾನ ಸರಕಾರದ ಕೂಡ ಮಾಡಿಕೊಂಡ ಯಥಾಸ್ಥಿತ ಒಪ್ಪಂದ ಭಂಗಕ್ಕೂ ಇತ್ತೆಹಾದರ ಹಸ್ತಕ್ಷೇಪವೇ ಕಾರಣವೆಂದು ಹೇಳಲು ಪ್ರತ್ಯವಾಯವಿಲ್ಲ. ಹಿಂದುಸ್ತಾನ-ಹೈದರಾಬಾದ ಸಂಧಾನ ಮಾತುಕತೆಗಳು ಮುರಿಯುವುದಕ್ಕೂ ಇದೇ ಕಾರಣ. ಈ ಸಲದ ಮಾತುಕತೆಗಳ ಕಾಲಕ್ಕೆ ಹಿಂದುಸ್ತಾನ ಸರಕಾರದವರು ಹೈದರಾಬಾದ ಶಿಷ್ಟಮಂಡಲದವರಿಗೆ ಕೊನೆಯ ಎಚ್ಚರಿಕೆಯನ್ನು ಕೊಟ್ಟರೆಂದು ತಿಳಿಯುತ್ತದೆ. ಒಪ್ಪಂದದ ಮುಂದಿನ ಮಾತುಕತೆಗಳ ಪೂರ್ವಭಾವಿಯಾಗಿ ನಿಜಾಮರು ಪ್ರಜೆಗಳ ರಾಜಕೀಯ ಬೇಡಿಕೆಗಳನ್ನು ಪೂರೈಸಲು ಮತ್ತು ರಜಕಾರರ ಹಾವಳಿಯನ್ನು ಹತ್ತಿಕ್ಕಿ ಶಾಂತಿಯನ್ನು ಪ್ರಸ್ಥಾಪಿಸಲು ಉಪಾಯ ಕೈಕೊಳ್ಳಬೇಕೆಂದು ಮುಖ್ಯಮಂತ್ರಿ ಪಂಡಿತ ಜವಾಹರಲಾಲ ನೆಹರು ಹಾಗು ಉಪಮುಖ್ಯಮಂತ್ರಿ ಸರದಾರ ವಲ್ಲಭಭಾಯಿ ಪಟೇಲರು ಹೇಳಿದರೆಂದು ತಿಳಿಯುವದು. ಹೈದರಾಬಾದ ಮಂತ್ರಿಮಂಡಲವು ಈ ಸಮಸ್ಯೆಯನ್ನು ಚರ್ಚಿಸಲು ಬೇಗನೆ ಸಭೆ ಸೇರಲಿದೆ. ಉಭಯ ಪಕ್ಷಗಳಿಗೂ ಸಮ್ಮತವಾಗುವಂಥ ನಿರ್ಣಯಕ್ಕೆ ಲಾಯಕ ಅಲ್ಲಿಯವರು ಬರುವರೆಂದು ತಿಳಿಯುತ್ತದೆ. ಹೊಣೆಗಾರ ಸರಕಾರವನ್ನು ಸ್ಥಾಪಿಸುವ ಈ ಮಹತ್ವದ ಕಾರ್ಯವನ್ನು ನಿಜಾಮಸಾಹೇಬರು ಮೊದಲು ಮಾಡುವರೆಂದು ತಿಳಿಯುತ್ತದೆ. ಅದೇ ಕಾಲಕ್ಕೆ ರಜಕಾರ ಸಂಸ್ಥೆಯನ್ನು ಹತ್ತಿಕ್ಕುವ ಉಪಾಯಗಳನ್ನು ನಿಜಾಮಸಾಹೇಬರು ಕೈಕೊಳ್ಳುವದವಶ್ಯವಾಗಿದೆ. ಇಲ್ಲವಾದರೆ ಹೊಣೆಗಾರ ಸರಕಾರದ ಪ್ರಯೋಜನವಾಗದು. ರಜಕಾರರ ಈ ಹಾವಳಿಯನ್ನು ಹತ್ತಿಕ್ಕಲು ನಿಜಾಮ ಸರಕಾರವು ಸನ್ನದ್ಧವಾದರೆ ಎಲ್ಲ ಬಗೆಯ ಸಹಕಾರವನ್ನು ಕೊಡುವುದಾಗಿಯೂ ಹಿಂದುಸ್ತಾನ ಸರಕಾರ ಆಶ್ವಾಸಿಸಿದೆಯೆಂದು ತಿಳಿಯುತ್ತದೆ. ಅದೇ ರೀತಿ ಕಮ್ಯುನಿಸ್ಟರು ಹೈದರಾಬಾದ ಸಂಸ್ಥಾನವನ್ನು ಪ್ರವೇಶಿಸದಂತೆ ನೋಡಿಕೊಳ್ಳುವ ಅಭಯವಚನವನ್ನೂ ಕೊಟ್ಟಿರುವರಂತೆ ಈ ಪರಿಸ್ಥಿತಿಯಲ್ಲಿ ನಿಜಾಮಸಾಹೇಬರ ಕರ್ತವ್ಯವೂ ಸ್ಪಷ್ಟವಾಗಿದೆ. ರಜಕಾರ ಸಂಸ್ಥೆಯನ್ನು ಹೀಗೆಯೇ ಉಪೇಕ್ಷಿಸುತ್ತ ಇಲ್ಲವೆ ಪ್ರೋತ್ಸಾಹಿಸುತ್ತ ಕುಳಿತರೆ ಹೊಣೆಗಾರ ಸರಕಾರ ಇಲ್ಲವೆ ಶಾಂತಿ ಪ್ರಸ್ಥಾಪನೆ ಅಥವಾ ಹಿಂದುಸ್ತಾನ ಸರಕಾರದ ಕೂಡ ಶಾಶ್ವತ ಒಡಂಬಡಿಕೆ ಸಾಧ್ಯವಾಗಲಾರದು. ಮೊದಲು ಆ ಸಂಸ್ಥೆಯ ಹಿಂಸಾಕೃತ್ಯಗಳನ್ನು ಹತ್ತಿಕ್ಕಿ ಮುಂದಿನ ಕಾರ್ಯಕ್ಕೆಳಸುವದು ಮುತ್ಸದ್ದಿತನದ್ದಾಗಿದೆ.

ಪ್ರಶಂಸನೀಯ ಹಿರಿಯಾಸೆ

ಹಿಂದುಸ್ತಾನ ವಿಶಾಲ ರಾಷ್ಟ್ರವಾಗಿದ್ದರೂ ಆಹಾರ ಪದಾರ್ಥಗಳಲ್ಲಿ ಸ್ವಾವಲಂಬಿಯಾಗಲು ಬೇಕಾದಷ್ಟು ಅನುಕೂಲತೆಗಳಿದ್ದರೂ ಪರಕೀಯ ಆಡಳಿತಗಾರರ ಅನುದಾರ ಧೋರಣೆಯಿಂದ ಅದಿಂದು ಪರರನ್ನವಲಂಬಿಸುವ ದುರ್ಧರ ಪ್ರಸಂಗ ಬಂದಿದೆ. ಸ್ವತಂತ್ರ ಹಿಂದುಸ್ತಾನ ಸರಕಾರವೀಗ ಈ ದುಃಸ್ಥಿತಿಯನ್ನು ದೂರಮಾಡಿ ಆಹಾರ ಪದಾರ್ಥಗಳಲ್ಲಿಯಾದರೂ ಅದು ಸ್ವಾವಲಂಬಿಯಾಗಲು ಹವಣಿಸುತಿದೆ. ಈ ಸಂಬಂಧದಲ್ಲಿ ವಿಚಾರಮಾಡಲು ಆಹಾರಧಾನ್ಯ ಧೋರಣ ಸಮಿತಿಯನ್ನು ನೇಮಿಸಲಾಗಿತ್ತು. ಆ ಸಮಿತಿಯವರು ಪರಿಸ್ಥಿತಿಯನ್ನು ಪೂರ್ಣ ವಿಚಾರಮಾಡಿ ಬರುವ ಐದು ವರ್ಷಗಳೊಳಗಾಗಿ ಒಂದು ಕೋಟಿ ಟನ್ನು ಆಹಾರ ಪದಾರ್ಥಗಳ ಉತ್ಪಾದನೆಯನ್ನು ಹೆಚ್ಚಿಸಬೇಕೆಂದು ಶಿಫಾರಸು ಮಾಡಿದ್ದಾರೆ. ಹಿಂದುಸ್ತಾನದ ಆರ್ಥಿಕ ಪರಿಸ್ಥಿತಿ ಸಂಭ[illegible] ಮೇಲೆ ಇರಬೇಕಾದರೆ ಇದು ಅತ್ಯವಶ್ಯವೆಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಹಿಂದುಸ್ತಾನ ಪರದೇಶಗಳಿಂದ ಆಹಾರ ಪದಾರ್ಥ ತರಿಸುವದನ್ನು ನಿಲ್ಲಿಸಬೇಕು ಮತ್ತು ಬರುವ ಐದು ವರ್ಷಗಳಲ್ಲಿ ಇದು ಸಾಧ್ಯವಾಗಬೇಕು ಎಂದು ಅವರು ಹೇಳಿದ್ದಾರೆ. ಹಿಂದುಸ್ತಾನಕ್ಕೆ ಒಟ್ಟಿಗೆ ೪೪.೪ ದಶಲಕ್ಷಟನ್ ಆಹಾರ ಪದಾರ್ಥಗಳು ಬೇಕಾಗುತಿದ್ದು ಉತ್ಪಾದನೆ ಕೇವಲ ೩೯.೯ ದಶಲಕ್ಷಟನ್ನು ಇದೆ. ಇದರಿಂದ ೪.೫ ದಶಲಕ್ಷಟನ್ ಕೊರತೆಯಾಗುತ್ತದೆ ಈವರೆಗೆ ಜಾರಿಯಲ್ಲಿದ್ದ ಸೀದಾ ಪ್ರಮಾಣದ ಲೆಕ್ಕದಂತೆ ಈ ಕೊರತೆ. ಆದರೆ ಉಳಿದ ದೇಶಗಳಲ್ಲಿನ ಸೀದಾ ಪ್ರಮಾಣವನ್ನು ನಾವೂ ಅನುಸರಿಸಿದ್ದಾದರೆ ಈ ಕೊರತೆ ಇನ್ನಷ್ಟು ಹೆಚ್ಚುವದು. ಅದುದರಿಂದ ೧ ಕೋಟಿ ಟನ್ನು ಉತ್ಪಾದನೆಯನ್ನಾದರೂ ಹೆಚ್ಚಿಸಬೇಕೆಂದು ಹೇಳಿರುವರು. ದೊಡ್ಡ ನದಿಗಳಿಗೆ ಒಡ್ಡು ಕಟ್ಟಿ ನೀರನ್ನು ಸಂಗ್ರಹಿಸಿ ಬೆಳೆಗೆ ಅದರ ಉಪಯೋಗ ಮಾಡಿಕೊಳ್ಳಬೇಕೆಂದು ಸೂಚಿಸಲಾಗಿದೆ. ಬಂಗಾಲ ಪ್ರದೇಶದ ಪುನರ್ನಿರ್ವೇಶನ, ನೀರಾವರಿ, ಗೊಬ್ಬರ, ಒಳ್ಳೆ ಬೀಜ ಮೊದಲಾದವುಗಳಿಂದ ಉತ್ಪಾದನೆಯನ್ನು ಹೆಚ್ಚಿಸುವದು, ಪಡದಿದ್ದ ಭೂಮಿಯನ್ನು ಊಳಿ ಬೆಳೆ ಬರುವಂತೆ ಯೋಜಿಸುವದು ಮೊದಲಾದ ಸೂಚನೆಗಳನ್ನು ಸಮಿತಿಯವರು ಮಾಡಿದ್ದಾರೆ. ಗಂಡಾಂತರವನ್ನು ತಪ್ಪಿಸುವದಕ್ಕಾಗಿ ಸರಕಾರದವರು ಈ ಐದು ವರುಷ ಕನಿಷ್ಠ ೧೦ ಲಕ್ಷ ಟನ್ನು ಅಕ್ಕಿ ಮತ್ತು ಗೋದಿಯ ಸಂಗ್ರಹವನ್ನಿಡಬೇಕೆಂದೂ ಸಮಿತಿಯವರ ಸೂಚನೆ. ಇದನ್ನು ಸಾಧಿಸಬೇಕಾದರೆ ಸರಕಾರದವರು ಆಹಾರ ಪದಾರ್ಥಗಳ ಆಯಾತದ ಗುತ್ತಿಗೆಯನ್ನು ತಾವೇ ತೆಗೆದುಕೊಳ್ಳುವದು ಅವಶ್ಯವೆಂದು ಸೂಚಿಸಲಾಗಿದೆ. ಸರಕಾರದವರು ಈ ಸೂಚನೆಗಳನ್ನು ಕೂಲಂಕಷವಾಗಿ ವಿಚಾರಿಸಿ ಉತ್ಪಾದನೆಯನ್ನು ಹೆಚ್ಚಿಸುವ ಉಪಾಯ ಆದಷ್ಟು ಬೇಗ ಕೈಕೊಳ್ಳಬೇಕೆಂದು ಬಿನ್ನವಿಸುತ್ತೇವೆ.

ಅಂತರ್ದೇಶೀಯ

ಚೀನದ ಅಧ್ಯಕ್ಷ—ಪುನಃ ಚಿಯಾಂಗ್

ಸಂಸ್ಕೃತದ ರಸಿಕ ಕವಿಯೊಬ್ಬ, ಮೊದಲು ಬೇಡಬೇಡವೆಂದು ಕಡೆಗೆ ಒಪ್ಪಿಕೊಳ್ಳುವ ಕುಲಾಂಗನೆಯ ಮಧುರ ಪ್ರಣಯವನ್ನು ಬಣ್ಣಿಸಿದ್ದಾನೆ. ಚೀನದ ಚಿಯಾಂಗ ಕೈಶೇಕರು ಅಧ್ಯಕ್ಷ ಪದವನ್ನು ಸ್ವೀಕರಿಸುವ ಮೊದಲು ಬೇಡಬೇಡವೆಂದು ಹೇಳಿದ್ದರೂ ಒತ್ತಾಯದಿಂದ ಕಳೆದ ವಾರ ಅವರನ್ನು ಅಧ್ಯಕ್ಷರಾಗಿ ಆರಿಸಲಾಯಿತು. ಕಳೆದ ಅನೇಕ ವರ್ಷಗಳಿಂದ ಚೀನದ ಎದುರಿಲ್ಲದ ಸರ್ವಾಧಿಕಾರಿಯಾಗಿ ಉಕ್ಕಿನ ಮುಷ್ಟಿಯಿಂದ ಹಿಡಿದು ಆಳುತಿದ್ದ ಚಿಯಾಂಗರವ ವೈಯಕ್ತಿಕ ರಾಜ್ಯಭಾರ ನಂತರ, ಅಂತರ್ಯುದ್ಧದ ಅಧಿಕಾಲದಿಂದ ನವೆಯುತ್ತಿರುವ ಚೀನಕ್ಕೆ ಈಗ ಅವರಲ್ಲದೆ ಅನ್ಯಥಾ ಗತಿಯಿಲ್ಲ. ಆದುದರಿಂದ ಚೀನದ ಪಾರ್ಲಿಮೆಂಟಿನಲ್ಲಿ ೨೪೩೦ ಮತಗಳಿಂದ ಅವರು ಆರಿಸಲ್ಪಟ್ಟದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಅವರ ವಿರೋಧಿಗೆ ಕೇವಲ ೨೬೯ ಮತಗಳು ಬಿದ್ದದ್ದು ನೋಡಿದರೆ ಚಿಯಾಂಗ ವಿರೋಧಿಗಳು ಎಷ್ಟು ದುರ್ಬಲರಾಗಿದ್ದಾರೆಂದು ತಿಳಿಯುವದು.

● ಚಿಯಾಂಗರೇ ಸರಕಾರದ ಮುಖ್ಯರಾಗಿ ಉಳಿದರೂ ಈಗ ಅವರು ತಮ್ಮನ್ನು ಚೀನದ ಪ್ರಥಮ ಘಟನಾತ್ಮಕ ಪ್ರಜಾತಂತ್ರಾತ್ಮಕ ಅಧ್ಯಕ್ಷರೆಂದು ಹೇಳಿಕೊಳ್ಳಬಲ್ಲರು. ಚೀನದ ೪ ಸಾವಿರ ವರ್ಷಗಳ ಇತಿಹಾಸದಲ್ಲಿ ಇದೇ ಮೊದಲು ಪ್ರಜಾತಂತ್ರ ಹೆಸರಿಗಾದರೂ ಆಚರಣೆಗೆ ಬಂದಿದೆ. ಈ ಶತಮಾನದ ಆರಂಭದಲ್ಲಿ ಚೀನದ ಪ್ರತಿಗಾಮಿ ಅರಸೊತ್ತಿಗೆಯನ್ನು ನಿರ್ನಾಮ ಮಾಡಿದ ಸನ್—ಯತ್ ಸೇನರಿಗೆ ಆ ದೇಶವನ್ನು ಭದ್ರವಾದ ಪ್ರಜಾತಂತ್ರದ ತಳಹದಿಯ ಮೇಲೆ ನಿಲ್ಲಿಸಲು ಸಮಯವೇ ದೊರಕಲಿಲ್ಲ. ಅವರ ಮರಣದ ನಂತರ ಮೊದಲು ದೇಶದಲ್ಲಿದ್ದ ನೂರಾರು ಪಾಳೆಯಗಾರರನ್ನು, ಆ ಮೇಲೆ ಕಮ್ಯುನಿಸ್ಟ ವಿದ್ರೋಹವನ್ನು ಎದುರಿಸಲು ಚಿಯಾಂಗ ಕೈಶೇಕರು ತಮ್ಮ ಅಧಿಕಾರವನ್ನು ಹೆಚ್ಚು ಹೆಚ್ಚು ಬಿಗಿಯಾಗಿ ಮಾಡಿಕೊಂಡರು. ಕ್ರಾಂತಿಕಾರಿ ಕೌಮಿಂಟಾಂಗ್ ಪಕ್ಷ ದೇಶದ ಏಕಮಾತ್ರ ರಾಜಕೀಯ ಪಕ್ಷವಾಗಿ ಎಲ್ಲ ಬಗೆಯ ಪ್ರತಿಗಾಮಿ ತತ್ವಗಳಿಗೆ ಆಶ್ರಯಸ್ಥಾನವಾಗಿ ಏಕಪಕ್ಷ ಸತ್ತೆಯನ್ನು ಚಿಯಾಂಗರ ಮೂಲಕ ನಡೆಸಿತು. ಅಮೇರಿಕೆಯ ಒತ್ತಾಯದಿಂದಲೂ ಪರಿಸ್ಥಿತಿಯ ಅಪರಿಹಾರ್ಯತೆಯಿಂದಲೂ ಕೆಲ ತಿಂಗಳ ಹಿಂದೆ "ಪಾರ್ಲಿಮೆಂಟೊಂದು" ಆರಿಸಲ್ಪಟ್ಟಿತು. ಅದರಲ್ಲಿ ಕೌಮಿಂಟಾಂಗ್ ಹೊರತು ಇತರ ಪಕ್ಷಗಳಿಗೂ ಪ್ರವೇಶ ದೊರೆಯಿತು. ಈಗ ಚಿಯಾಂಗರನ್ನು ಆರಿಸಿದ್ದು ಇದೇ ಪಾರ್ಲಮೆಂಟು. ಇಲ್ಲಿಗೆ ಹೆಸರಿಗಾದರು ಏಕಪಕ್ಷ ಸತ್ತೆ ಹೋದಂತಾಯಿತು.

● ಅತ್ತ ಶಾಂಟುಂಗ್ ಪ್ರಾಂತದಲ್ಲಿಯೂ ಮಂಚೂರಿಯದಲ್ಲಿಯೂ ಕಮ್ಯುನಿಸ್ಟರ ದಾಳಿ ಉಗ್ರವಾಗುತ್ತ ಸರಕಾರಿ ಸೈನಿಕರು ಹಿಂದೆಗೆಯುತ್ತ ಇದ್ದಾರೆ. ಕೆಲ ತಿಂಗಳ ಹಿಂದೆ ಆರು ತಿಂಗಳಲ್ಲಿ ಕಮ್ಯುನಿಸ್ಟರನ್ನು ಗೊತ್ತಿಗೆ ಹಚ್ಚುವ ಪಣ ತೊಟ್ಟಿದ್ದ ಚಿಯಾಂಗರು ಕಳೆದ ವಾರ ಇನ್ನೊಂಬತ್ತು ತಿಂಗಳಲ್ಲಿ ಅವರನ್ನು ಹದಕ್ಕೆ ತರುವದಾಗಿ ಸಾರಿದರು. ನಾಳೆ ಬರುವ ಜಾಗತಿಕ ಯುದ್ಧಕ್ಕಾಗಿ ಅವರು "ಶಾಸ್ತ್ರೀಯ" ತಯಾರಿ ನಡೆಸುತ್ತಿದ್ದಾರಂತೆ. ಈ ನಡುವೆ ಕಮ್ಯುನಿಸ್ಟರೊಡನೆ ಕಾಳಗ ನಡೆಸಿದ ಅವರ ಸೇನಾನಾಯಕರಿಂದ "ತ್ರಾಹಿ ತ್ರಾಹಿ" ತಂತಿಗಳು ಬರುತ್ತಿವೆ.

ಆಗ್ನೇಯ ಏಶಿಯಾದ ಸಂರಕ್ಷಣೆ

ಬೆಳೆಯುತ್ತಿರುವ ಕಮ್ಯುನಿಸ್ಟರ ಪ್ರಭಾವದ ಪ್ರವಾಹವನ್ನು ತಡೆಗಟ್ಟಲು ಯುರೋಪಿನಲ್ಲಿ ಪಶ್ಚಿಮ ರಾಷ್ಟ್ರಗಳ ಒಕ್ಕೂಟ ರಚಿಸಿದಂತೆ ಏಶಿಯದಲ್ಲೂ ಕಮ್ಯುನಿಸ್ಟರನ್ನು ತಡೆಗಟ್ಟಲು ಉಪಾಯಗಳು ಯೋಚಿಸಲ್ಪಡುತ್ತಿವೆ. ಹಿಂದುಸ್ಥಾನ, ಪಾಕಿಸ್ಥಾನ, ಬ್ರಹ್ಮದೇಶ, ಅಸ್ಟ್ರೇಲಿಯಾ ಮೊದಲಾದ ರಾಷ್ಟ್ರಗಳನ್ನು ಒಂದು ಆರ್ಥಿಕ ಹಾಗು ಸೈನಿಕ ಒಪ್ಪಂದದಿಂದ ಬಿಗಿಯುವ ವಿಚಾರ ಇಂಗ್ಲಂಡಿನಲ್ಲಿ ಆಸ್ಥೆಯಿಂದ ಚರ್ಚಿಸಲ್ಪಡುತ್ತಿದೆಯಂತೆ. ಈ ವಿಷಯದಲ್ಲಿ ಅಸ್ಟ್ರೇಲಿಯಾದ ಪಾರ್ಲಮೇಂಟಿನ ವಿರೋಧಿ ಪಕ್ಷ ಪ್ರಮುಖರು ವಿಶೇಷ ಆತುರರಾಗಿದ್ದಾರೆ. ಚೀನದ ನಾಯಕರೂ ಇಂಥ ಒಕ್ಕೂಟದ ಅವಶ್ಯಕತೆಯನ್ನು ಒಪ್ಪಿ ಹೇಳಿದ್ದಾರೆ. ಹಿಂದುಸ್ಥಾನವನ್ನು ಈ ಕೆಲಸದಲ್ಲಿ ಮುಂದೆ ಮಾಡಿಕೊಂಡು ಹೋಗುವ ಲಕ್ಷಣ ಕಾಣುತ್ತದೆ. ಜನರಲ್ ಮಾರ್ಶಲ್ಲರ ಯುರೋಪ ಉದ್ಧಾರ ಯೋಜನೆಯಂತೆ ಆಗ್ನೇಯ ಏಶಿಯಕ್ಕೆ "ಜವಾಹರ" ಯೋಜನೆ ಬೇಕೆಂದು ಕೆಲವರ ಸೂಚನೆ. ಈಚೆಗೆ ಹಿಂದುಸ್ಥಾನದಲ್ಲಿ ಕಮ್ಯುನಿಸ್ಟರ ವಿರುದ್ಧ ಕೈಕೊಂಡ ಕ್ರಮಗಳಿಂದ ಕೆಲವರಿಗೆ ಈ ಬಗ್ಗೆ ಆಶೆಯುಂಟಾಗಿದೆ. ಭಾರತದ ಘಟನೆಯ ಕರಡಿನಲ್ಲಿದ್ದ "ರಿಪಬ್ಲಿಕ್" (ಪ್ರಜಾರಾಜ್ಯ) ಶಬ್ದವನ್ನು ಬದಲಿಸಿ "ಸ್ಟೇಟ್" (ರಾಜ್ಯ) ಎಂಬ ಶಬ್ದವನ್ನು ಹಾಕಬೇಕೆಂದು ತಿದ್ದುಪಡಿ ಸೂಚಿಸಿರುವ ಕಾಯದೆ ಮಂತ್ರಿ ಡಾ. ಅಂಬೇಡಕರರು ಇದರಿಂದ ಭಾರತಕ್ಕೆ ಬ್ರಿಟಿಶ ಸಾಮ್ರಾಜ್ಯದಲ್ಲಿ ಉಳಿಯಲು ಅವಕಾಶವಾಗುತ್ತದೆಂದು ವಿವರಣೆ ಕೊಟ್ಟಿದ್ದಾರೆ. ಇದರಿಂದ ಬೇಗನೆ ಬ್ರಿಟಿಶ ಸಾಮ್ರಾಜ್ಯದಿಂದ ಹೊರಬೀಳುವ ವಿಚಾರ ನಮ್ಮ ನಾಯಕರಲ್ಲಿಲ್ಲವೆಂದು ಪ್ರತೀತವಾಗುತ್ತದೆ.

● ಕಮ್ಯುನಿಸ್ಟ ರೀತಿ ನೀತಿಗಳ ಮೇಲೆ ಪೂರ್ವ ದೇಶಗಳಲ್ಲಿ ಎಷ್ಟೇ ಅಪ್ರೀತಿಯಿದ್ದರೂ ಬಿಳಿಯರ ಮೇಲಿನ ಶಂಕೆಗೂ ಕೊರತೆಯಿಲ್ಲ. ಅಸ್ಟ್ರೇಲಿಯಾ ಇನ್ನೂ "ಬಿಳಿಯರಿಗೆ ಮಾತ್ರ" ಧೋರಣವನ್ನು ಬಿಟ್ಟಿಲ್ಲ. ಇಂಡೋನೇಶಿಯಾ, ಇಂಡೋಚೀನಗಳ ಸ್ವಾತಂತ್ರ್ಯ ಚಳವಳಿಯನ್ನು ಮುರಿಯಲು ಯುಕ್ತರಾಷ್ಟ್ರ ಸಂಘದಂಥ ಸಂಸ್ಥೆ ಕೂಡ ಸಹಾಯ ಮಾಡುತ್ತಿದೆ. ಡಚ್ ಮತ್ತು ಫ್ರೆಂಚ ಸಾಮ್ರಾಜ್ಯವಾದಕ್ಕೆ ಆಗ್ನೇಯ ಏಶಿಯದಲ್ಲಿ ಮೇಲ್ಗೈಯಿದಷ್ಟು ದಿನ ಶತ್ರುಗಳಿಗೆ ಅಲ್ಲಿ ಪ್ರಚಾರಕ್ಕೆ ಬೇಕಾದಷ್ಟು ಎಡೆಯಿದ್ದೇ ಇದೆ.

ಅಧ್ಯಕ್ಷ ರಕ್ಷಾಸರ ಮೃತ್ಯು

ಫಿಲಿಪೈನ್ ದ್ವೀಪಗಳ ಅಧ್ಯಕ್ಷ ರಕ್ಷಾಸರು ಕಳೆದ ವಾರ ಒಂದು ಸಭೆಯಲ್ಲಿ ಕಮ್ಯುನಿಸ್ಟರ ಮೇಲೆ ಕೆಂಡ ಕಾರಿದರು. ಯುದ್ಧ ಮೊದಗಿದ ಪಕ್ಷದಲ್ಲಿ ಕಮ್ಯುನಿಸ್ಟರ ವಿರುದ್ಧ ಅಮೇರಿಕೆಗೆ ಎಲ್ಲ ಸಹಾಯ ನೀಡುವದಾಗಿ ಅವರು ಫಿಲಿಪೈನ್ ಪ್ರಜೆಗಳ ಪರವಾಗಿ ವಾಗ್ದಾನ ಮಾಡಿದರು. ಆದರೆ ಅಂಥ ಪ್ರಸಂಗ ಬರುವ ವರೆಗೆ ಅವರು ಈ ಪ್ರಪಂಚದಲ್ಲಿ ಉಳಿಯಲಿಲ್ಲ. ಭಾಷಣ ಮುಗಿದು ಸ್ವಲ್ಪವೇ ಹೊತ್ತಿನಲ್ಲಿ ಅವರ ಹೃದಯಕ್ರಿಯೆ ನಿಂತುಹೋಯಿತು.



ಮಾರ್ಶಲ್ ಯೋಜನೆಯನ್ನು ಕಾರ್ಯಕಾರಿ ಮಾಡುವ ಯುರೋಪಿನ ರಾಜಕಾರಣಿಗಳು ಪ್ಯಾರಿಸಿನಲ್ಲಿ ಸೇರಿದ್ದಾರೆ: (ಎಡದಿಂದ ಬಲಕ್ಕೆ) ಗ್ರೀಸಿನ ಸಲದಾರಿಸ್, ತುರ್ಕಿಯ ಸಾದಕ್, ಬ್ರಿಟನ್ನಿನ ಬೆವಿನ್ ಮತ್ತು ಲಕ್ಸೆಂಬರ್ಗಿನ ಬೆಕ್.

● ಮೃತ್ಯುಕಾಲದಲ್ಲಿ ಅಧ್ಯಕ್ಷ ರಕ್ಷಾಸರಿಗೆ ೫೫ ವಯಸ್ಸು. ೧೯೪೬ ಮಾರ್ಚ ೨೪ ಕ್ಕೆ ಅಮೇರಿಕೆಯಿಂದ ಸ್ವತಂತ್ರವಾದ ಫಿಲಿಪೈನ್ಸ ಪ್ರಜಾರಾಜ್ಯಕ್ಕೆ ಅದೇ ವರ್ಷ ಎಪ್ರಿಲ ೨೩ ದಿನ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

● ಅಧ್ಯಕ್ಷ ರಕ್ಷಾಸರ ಆಕಸ್ಮಿಕ ಮರಣದಿಂದ ತೆರವಾದ ಅಧ್ಯಕ್ಷಪದಕ್ಕೆ, ಅಮೇರಿಕೆಯಲ್ಲಿ ಟ್ರೂಮನ್ನರು ಬಂದಂತೆ ಉಪಾಧ್ಯಕ್ಷರಾದ ಕ್ವಿರಾನೊ ಅವರು ಏರಿದ್ದಾರೆ. ಈ ವಿಷಯದಲ್ಲಿ ಫಿಲಿಪೈನ್ಸ ಘಟನೆ ಅಮೇರಿಕನ್ ಘಟನೆಯನ್ನು ಹೋಲುತ್ತದೆ. ಹೊಸ ಅಧ್ಯಕ್ಷರ ವಯಸ್ಸು ೫೭

ಪಾಲಿಸ್ಥಾನದಲ್ಲಿ ಸಂಧಿ

ಪಾಲಿಸ್ಥಾನದಲ್ಲಿ ನಡೆದ ಅರಬ-ಯಹೂದ್ಯ ಹತ್ಯಾಕಾಂಡವನ್ನು ನಿಲ್ಲಿಸಲು ಯುಕ್ತರಾಷ್ಟ್ರ ಭದ್ರತಾ ಮಂಡಲ ಕಳೆದವಾರ ಒಂದು "ಸಂಧಿ" ಗೊತ್ತುವಳಿ ಮಾಡಿತು. ಅರಬರೂ ಯಹೂದ್ಯರೂ ಯುದ್ಧ ನಿಲ್ಲಿಸಬೇಕು. ಹೊರಗಿಂದ ಬರುವ ಎರಡೂ ಪಕ್ಷದ ಸಶಸ್ತ್ರ ಜನರನ್ನು ತಡೆಯಬೇಕು. ರಾಜಕೀಯ ರಂಗದಲ್ಲೂ ಎರಡೂ ಪಕ್ಷದವರು ಒಬ್ಬರ ಹಕ್ಕು ಬಾಧ್ಯತೆಗಳಿಗೆ ಅಪಾಯ ತರುವ ಚಟುವಟಿಕೆಗಳನ್ನು ಇನ್ನೊಬ್ಬರು ಮಾಡತಕ್ಕದ್ದಲ್ಲ ಎಂಬಿವು ೭ ಮುದ್ದೆಗಳುಳ್ಳ ಆ ಗೊತ್ತುವಳಿಯ ಮುಖ್ಯಾಂಶಗಳು. ಆದರೆ ಈ "ಸಂಧಿ" ಗೊತ್ತುವಳಿಯನ್ನು ಆಚರಣೆಗೆ ತರುವ ಹೊಣೆ ಯಾರದೆಂದು ಗೊತ್ತುವಳಿ ಹೇಳುವದಿಲ್ಲ. ಬ್ರಿಟಿಶರೆ ಅದರ ಅಧಿಕಾಂಶ ಹೊಣೆಯನ್ನು ಹೊರಬೇಕಾದೀತು. ಅಮೇರಿಕೆಯೂ ತನ್ನ ಪಾಲಿನ ಹೊಣೆಯನ್ನು ಹೊರಲು ಸಿದ್ಧವಿದೆಯೆಂದು ಸಾರಲಾಗಿದೆ.

● ಈ ತಾತ್ಪೂರ್ತಿಕ ಸಂಧಿಯ ನಂತರ ಪಾಲಿಸ್ಥಾನ ಸಮಸ್ಯೆಯನ್ನು ಶಾಶ್ವತವಾಗಿ ಬಿಡಿಸಲು ಅಲ್ಲಿ ಯುಕ್ತರಾಷ್ಟ್ರ ಸಂಘದ ಪರವಾಗಿ ಅಲ್ಪಾವಧಿಯ ವಿಶ್ವಸ್ತ ಆಡಳಿತವನ್ನು ಸ್ಥಾಪಿಸಬೇಕೆಂಬದಾಗಿ ಸಂಘದ ಸಮಿತಿಯಲ್ಲಿ ಸೂಚನೆ ಬಂದಿದೆ. ಈ ಸೂಚನೆಯ ಪ್ರಮುಖ ಪುರಸ್ಕರ್ತ ಅಮೇರಿಕೆ. ಅಮೇರಿಕೆಯ ಸೂಚನೆ ಹೀಗಿದೆ: ಮೂರು ವರ್ಷ ಕಾಲ ಯುಕ್ತರಾಷ್ಟ್ರ ವಿಶ್ವಸ್ತ ಸಮಿತಿ ಒಬ್ಬ ಗವರ್ನರನ ಮೂಲಕ ಪಾಲಿಸ್ಥಾನದ ಆಡಳಿತ ನಡೆಸಬೇಕು. ಅವನು ಎರಡುಭವನಗಳ ಶಾಸನಸಭೆಯ ಸಹಾಯದಿಂದ ಕೆಲಸ ಸಾಗಿಸಬೇಕು. ಈ ಅವಧಿಯಲ್ಲಿ ಅರಬ ಯಹೂದ್ಯರಿಗಿಬ್ಬರಿಗೂ ಒಪ್ಪುವ ಪರಿಹಾರೋಪಾಯವನ್ನು ಕಂಡು ಹಿಡಿಯಬೇಕು

● ಇವೆಲ್ಲ ಮಾತುಕತೆಗಳಲ್ಲಿ ರಶಿಯನ್ ಪ್ರತಿನಿಧಿಗಳು ತಟಸ್ಥರಾಗಿದ್ದರು. ಆದರೆ ಒಳಗಿಂದೊಳಗೆ ಅವರು ಯಹೂದ್ಯರಿಗೆ ಸಹಾಯ ಮಾಡುತ್ತಿರುವರೆಂಬ ಸಂದೇಹದಿಂದಲೇ ಯಹೂದ್ಯ ಕುದುರೆಯ ಬೆನ್ನು ಹತ್ತಿದ್ದ ಅಮೇರಿಕೆಗೆ ಒಮ್ಮಿಂದೊಮ್ಮೆ ಇಳಿಯುವಂತಾಯಿತು. ಝೆಕೊಸ್ಲೊವೇಕಿಯದಿಂದ ವಿಮಾನ ಮೂಲಕ ಯುದ್ಧ ಸಾಮಗ್ರಿಗಳು ಯಹೂದ್ಯರಿಗೆ ದೊರೆಯುತ್ತಿವೆಯೆಂದು ಬ್ರಿಟಿಶ ಅಧಿಕಾರಿಗಳು ಬಹಿರಂಗವಾಗಿ ಸಾರಿದ್ದಾರೆ. ಈ ಕಾರಣದಿಂದ ಕಮ್ಯುನಿಸ್ಟ ವಿರೋಧವನ್ನು ಒದರಿ ಒದರಿ ವ್ಯಕ್ತಗೊಳಿಸುತಿರುವ ಅರಬರಿಗೆ ಅಂಗ್ಲೋ—ಅಮೇರಿಕನ್ನರ ಬೆಂಬಲ ದೊರೆಯಿತು. ಆದುದರಿಂದ ಅವರು ಪಾಲಿಸ್ಥಾನದ ಸಮಸ್ಯೆಯನ್ನು ತಮ್ಮಿಚ್ಛೆಯಂತೆಯೆ ಮುಂಗೈ ಕಸುವಿನಿಂದ ಬಿಡಿಸಲು ಹವಣಿಸುತ್ತಿದ್ದಾರೆ. ಅರಬ ರಾಷ್ಟ್ರಗಳಲ್ಲಿ ಈ ವಿಷಯದಲ್ಲಿ ನಡೆದ ಮಾತುಕತೆಗಳು ಎಲ್ಲರಿಗೂ ಗೊತ್ತು. ಮೇ ೧೫ ಕ್ಕೆ ಬ್ರಿಟಿಶರು ಹೊರಬಿದ್ದೊಡನೆ ಪಾಲಿಸ್ಥಾನವನ್ನು ಆಕ್ರಮಿಸುವ ಹಂಚಿಕೆಯನ್ನು ಅರಬ ರಾಷ್ಟ್ರಗಳು ನಡೆಸಿವೆಯಂತೆ.

ಇಟಲಿಯಲ್ಲಿ ಕಮ್ಯುನಿಸ್ಟರ ಸೋಲು

ಮೂರು ಲಕ್ಷ ಸೈನಿಕರು, ಅಸಂಖ್ಯಾತ ಪೋಲೀಸರು ಕಳೆದ ರವಿವಾರ (ತಾ. ೧೮) ನಡೆದ ಚುನಾವಣೆಗಳಲ್ಲಿ "ಶಾಂತಿ ರಕ್ಷಣೆಗೆ" ಇಟಲಿಯ ಹಳ್ಳಿ ಹಳ್ಳಿಗಳಲ್ಲಿ ಜಾಗಿ ನಿಂತಿದ್ದವು. ಅಮೇರಿಕನ್ ಯುದ್ಧ ಹಡಗಗಳು, ಬ್ರಿಟಿಶ ವಿನಾಶಿಕೆಗಳು ಕೆಲವು ದಿನಗಳಿಂದ ಇಟಲಿಯ ರೇವುಗಳಿಗೆ 'ಭೆಟ್ಟಿ' ಕೊಟ್ಟು ಕೊಟ್ಟು ಹೋಗುತ್ತಿದ್ದವು. ಕಮ್ಯುನಿಸ್ಟರನ್ನೆಲ್ಲಾದರೂ ಆರಿಸಿ ತಂದರೆ ಅಮೇರಿಕೆಯಿಂದ ತೃಣಮಾತ್ರ ಸಹಾಯ ಇನ್ನು ದೊರೆಯಲಾರದೆಂಬದನ್ನು ಟ್ರೂಮನ್ನರು ಗುಟ್ಟಾಗಿಟ್ಟಿದ್ದಿಲ್ಲ. ಟ್ರಿಸ್ಟೆ ಬಂದರವನ್ನು ಇಟಲಿಗೆ ಕೊಡುವ ಪ್ರಲೋಭನವನ್ನೂ ತೋರಿಸಲಾಗಿತ್ತು. ಈ ದಂಡ ದಾನೋಪಾಯಗಳ ಬಳದಲ್ಲಿ ಕಳೆದ ೨೫ ವರ್ಷಗಳಿಂದ ಚುನಾವಣೆಗಳೆಂದರೇನೆಂದೇ ಮರೆತು ಬಿಟ್ಟಿದ್ದ ಇಟಲಿಯ ದುರ್ದೈವಿ ನಾಗರಿಕರು ೪೧೦೦೦ ಮತಗಟ್ಟೆಗಳಲ್ಲಿ ತಮ್ಮ ಪ್ರಜಾಸತ್ತಾತ್ಮಕ ಹಕ್ಕನ್ನು ಉಪಯೋಗಿಸಿದರು. ಅಧಿಕಾರಕ್ಕಾಗಿ ಹೆಣಗುತ್ತಿದ್ದ ಎರಡು ಮುಖ್ಯ ವಿವಾದಿಗಳೆಂದರೆ ಸಿನಾರ ದಿ ಗಾಸ್ಪೆರಿಯ 'ಕ್ರಿಶ್ಚನ್ ಡೆಮಾಕ್ರೆಟ್' ಪಕ್ಷ (ಅಮೇರಿಕನ್ ಕೈಗೂಸು) ಹಾಗೂ ಸಿನಾರ ಪೆಟ್ರೊನೆನ್ನಿ (ಸಾಮ್ಯವಾದಿ) ಹಾಗು ಸಿನಾರ ಟೊಗ್ಲಿಯಾಟಿ (ಕಮ್ಯುನಿಸ್ಟ) ಇವರ ಸಂಯುಕ್ತ 'ಪಾಪ್ಯುಲರ ಫ್ರಂಟ' (ರಶಿಯಾದ ಪಕ್ಷಪಾತಿ)

ಅನಿರೀಕ್ಷಿತವಾಗಿ (ಕಮ್ಯುನಿಸ್ಟರು ಗಲಭೆ ಹೂಡಬಹುದೆಂದು ಅವರ ವಿರೋಧಿಗಳು ಪ್ರಚಾರ ಮಾಡುತ್ತಿದ್ದರೂ) ಮತದಾನ ಸಂಪೂರ್ಣ ಶಾಂತಿಯಿಂದ ನಡೆಯಿತು. ಫಲಿತಾಂಶ ಪೂರ್ಣವಾಗಿ ಇನ್ನೂ ಹೊರಬಿದ್ದಿಲ್ಲವಾದರೂ ಈಗ ಅಧಿಕಾರದಲ್ಲಿರುವ ಗಾಸ್ಪೇರಿಯ ಪಕ್ಷಕ್ಕೇ ಶುದ್ಧ ಬಹುಮತವಿಲ್ಲದಿದ್ದರೂ ಎಲ್ಲರಿಗಿಂತ ಹೆಚ್ಚು ಮತ ದೊರತೀತೆಂದು ಹೇಳಲು ಅಡ್ಡಿಯಿಲ್ಲ. ಸಿನೇಟಿನ ಮೇಲ್ಮನೆಯಲ್ಲಿ ಚುನಾವಣೆಯಲ್ಲಿ ಗಾಸ್ಪೆರಿ ಪಕ್ಷಕ್ಕೆ ನೂರಕ್ಕೆ ೪೭.೯ ಮತಗಳು ದೊರೆತಿವೆ. ಕಮ್ಯುನಿಸ್ಟರ ಪಾಪ್ಯುಲರ ಫ್ರಂಟಿಗೆ ನೂರಕ್ಕೆ ೩೦.೫ ದೊರೆತವು. ಉಳಿದ ನಾಲ್ಕೈದು ಚಿಕ್ಕಪುಟ್ಟ ಗುಂಪುಗಳು ಉಳಿದ ಮತಗಳನ್ನು ಪಡೆದಿವೆ. ಪ್ರತಿನಿಧಿ ಸಭೆಯಲ್ಲಿ (ಕೆಳಮನೆ) ಸುಮಾರು ಅರ್ಧದಷ್ಟು ಮತಗಳ ಎಣಿಕೆಯಾಗಿದ್ದು ಅದರಲ್ಲಿ ಗಾಸ್ಪೇರಿ ಪಕ್ಷಕ್ಕೆ ೬೩.೮೮ ಲಕ್ಷ ಮತಗಳೂ ಕಮ್ಯುನಿಸ್ಟರಿಗೆ ೪೫.೪೭ ಲಕ್ಷ ಮತಗಳೂ ದೊರೆತಿವೆ ಇನ್ನುಳಿದ ಎಣಿಕೆಗಳೂ ಇದಕ್ಕಿಂತ ಬಹಳ ಭಿನ್ನವಾದ ಪರಿಣಾಮವನ್ನು ತೋರಿಸಲಿಕ್ಕಿಲ್ಲವೆಂದು ತೋರುತ್ತದೆ.

ಯುರೋಪಿನ ಉದ್ಧಾರ ಒಪ್ಪಂದ

ಅಮೇರಿಕೆ ಯುರೋಪಿನ ಪುನರುಜ್ಜೀವನಕ್ಕಾಗಿ ಕೊಡುವ ೧೭೦೦ ಕೋಟಿ ಡಾಲರುಗಳ ಸಹಾಯವನ್ನು ವಿನಿಯೋಗಿಸುವ ಒಪ್ಪಂದಕ್ಕೆ ಕಳೆದ ವಾರ ಪ್ಯಾರಿಸಿನಲ್ಲಿ ೧೬ ರಾಷ್ಟ್ರಗಳ ಪ್ರತಿನಿಧಿಗಳು ಅಂಕಿತವಿಕ್ಕಿದರು. ಯುರೋಪಿನ ೧೬ ಸ್ವತಂತ್ರ ರಾಷ್ಟ್ರಗಳನ್ನಲ್ಲದೆ ಜರ್ಮನಿಯ ಅಂಗ್ಲೋ-ಅಮೇರಿಕನ್ ಆಕ್ರಮಿತ ಪ್ರದೇಶವನ್ನೂ ಈ ಉದ್ಧಾರ ಯೋಜನೆಯಲ್ಲಿ ಸೇರಿಸಿಕೊಳ್ಳಲಾಗಿದೆ. ಸ್ವದೇಶದಲ್ಲಿಯೂ ಸಾಗರೋತ್ತರ ಸಾಮ್ರಾಜ್ಯ ಪ್ರದೇಶಗಳಲ್ಲಿಯೂ ಉತ್ಪಾದನೆಯನ್ನು ತಮ್ಮ ತಮ್ಮೊಳಗೆ ವ್ಯಾಪಾರ ವ್ಯವಹಾರ ಸುಂಕಗಳ ವಿಷಯದಲ್ಲಿ ಸಹಕರಿಸಲು ಈ ಒಪ್ಪಂದ ಮೂಲಕ ಈ ರಾಷ್ಟ್ರಗಳು ಬದ್ಧವಾದವು.

ಈ ಕೆಳಗಿನ ರಾಷ್ಟ್ರಗಳು ರಶಿಯಾ ವಿರೋಧಿಯಾದ ಈ ಒಪ್ಪಂದದಲ್ಲಿ ಸೇರಿವೆ:

ಬ್ರಿಟನ್, ಫ್ರಾನ್ಸ, ಆಸ್ಟ್ರಿಯ, ಬೆಲ್ಜಿಯಂ, ಅಯರ್ಲಂಡ್, ಡೆನ್‌ಮಾರ್ಕ, ಗ್ರೀಸ್, ಐಸ್‌ಲ್ಯಾಂಡ, ಇಟಲಿ, ಲಕ್ಸೆಂಬರ್ಗ, ನಾರ್ವೆ, ಸ್ವೀಡನ್, ಸ್ವಿಝರ್ಲಂಡ್, ಟರ್ಕಿ, ಪೋರ್ತುಗಾಲ, ನೆದರ್ಲಂಡ್ಸ ಹಾಗು ಪಶ್ಚಿಮ ಜರ್ಮನಿ.

ಈ ಒಪ್ಪಂದವನ್ನು ಜಾರಿಯಲ್ಲಿ ತರಲು ಯುರೋಪಿನಲ್ಲಿ ಮಾರ್ಶಲ್ ಯೋಜನೆ ಸಂಸ್ಥೆಯ ಶಾಶ್ವತ ಮಂಡಲವೆಂಬ ಸಂಸ್ಥೆಯನ್ನು ನಿರ್ಮಿಸಲಾಗಿದೆ.

ಸುದ್ದಿ ಸ್ವಾತಂತ್ರ್ಯ

ಜಿನೇವಾದಲ್ಲಿ ಸೇರಿದ ೫೫ ರಾಷ್ಟ್ರಗಳನ್ನೊಳಗೊಂಡ ಯುಕ್ತರಾಷ್ಟ್ರ ಸುದ್ದಿ ಸ್ವಾತಂತ್ರ್ಯ ಸಮ್ಮೇಲನದಲ್ಲಿ, ಹಿಂದುಸ್ಥಾನದ ಶ್ರೀ. ರಾಮಸ್ವಾಮಿ ಮುದಲಿಯಾರರ ಸೂಚನೆಯಂತೆ, ಅಮೇರಿಕೆಯ ವಿರೋಧವಿದ್ದರೂ ಉದ್ದೇಶಪೂರ್ವಕ ಮತ್ತು ಸುಸಂಘಟಿತವಾಗಿ ಸುಳ್ಳು ಸುದ್ದಿ ಮತ್ತು ರಾಷ್ಟ್ರ ರಾಷ್ಟ್ರಗಳ ಮೈತ್ರಿಗೆ ಅಪಾಯಕರವಾದ ಸುದ್ದಿಗಳ ಪ್ರಕಟನೆಯನ್ನು ಸರಕಾರಗಳು ತಡೆಯಬೇಕೆಂಬ ಗೊತ್ತುವಳಿ ಸ್ವೀಕೃತವಾಯಿತು

× × ×

ಅಮೇರಿಕೆಯ ಲಾಸ್ ಏಂಜಲ್ಸನ ಜೋ[illegible] ನೆಗೆರ್ ಎಂಬವನು ತನ್ನ ಅತ್ತೆಯನ್ನು ಮ[illegible] ವೆಯಾಗುವದಕ್ಕೋಸ್ಕರ ಹೆಂಡತಿಯನ್ನು [illegible] ದ್ದಾನೆ!

ಭದ್ರತಾಮಂಡಲದಲ್ಲಿ ಕಾಶ್ಮೀರದ ಬಗ್ಗೆ ಗೊತ್ತುವಳಿ

ಇಬ್ಬರಿಗೂ ಬೇಡವಾದ ಮೂರನೇ ಹಾದಿ

ಸೀರಿಯಾ ಭಾರತದ ವಿರುದ್ಧ ತಿರುಗಿತು

- ಕಾಶ್ಮೀರದಲ್ಲಿ ನಮ್ಮ ಸೈನ್ಯದ ಪ್ರಗತಿ

ಮೊನ್ನೆ ಬುಧವಾರ (ತಾ. ೨೧) ಕ್ಕೆ ಯುಕ್ತ ರಾಷ್ಟ್ರ ಭದ್ರತಾಮಂಡಲ ಕಾಶ್ಮೀರ ತಂಟೆಯ ವಿಷಯಕ್ಕೆ ಕೊನೆಯದಾಗಿ ಒಂದು ಗೊತ್ತುವಳಿಯನ್ನು ಅಂಗೀಕರಿಸಿತು. ಆ ಗೊತ್ತುವಳಿಯಲ್ಲಿ ಕಾಶ್ಮೀರದಲ್ಲಿ ಯುದ್ಧವನ್ನು ನಿಲ್ಲಿಸಬೇಕು ಮತ್ತು ಅಲ್ಲಿ ದಾಳಿ ಮಾಡುತಿರುವ ಗುಡ್ಡಗಾಡು ಜನರನ್ನು ಹಿಂದಕ್ಕೆ ಕರೆಸಿಕೊಳ್ಳಲು ಪಾಕಿಸ್ತಾನ ಸರ್ವ ಪ್ರಯತ್ನ ಮಾಡಬೇಕು ಎಂದು ಹೇಳಿದ್ದರೂ ಕಾಶ್ಮೀರ ಮಂತ್ರಿಮಂಡಲದಲ್ಲಿ ಎಲ್ಲ ರಾಜಕೀಯ ಪಕ್ಷಗಳಿಗೆಡೆ ಕೊಟ್ಟು ಆ ಮೇಲೆ ಮತಗಣನೆ ನಡೆಸಬೇಕು, ಹಿಂದೀ ಸೈನ್ಯದ ಅಧಿಕಾಂಶವನ್ನು ಅದಕ್ಕೆ ಮೊದಲೇ ಹಿಂತೆಗೆದುಕೊಳ್ಳಬೇಕು ಎಂದು ಮೊದಲಾಗಿ ಹಿಂದುಸ್ತಾನಕ್ಕೆ ಒಪ್ಪಿಗೆಯಾಗದ ಕಲಮುಗಳಿವೆ.

ಹಿಂದೀ ಪ್ರತಿನಿಧಿ ಸರ್ ಗೋಪಾಲಸ್ವಾಮಿ ಅಯ್ಯಂಗಾರರು ಗೊತ್ತುವಳಿಯನ್ನು ವಿರೋಧಿಸಿ ಇದು ಹಿಂದುಸ್ತಾನದ ಹಕ್ಕನ್ನು ಕಸಿದುಕೊಳ್ಳುತ್ತದೆಂದು ಹೇಳಿದರು. ಹಿಂದೀ ಸರಕಾರದ ಒಪ್ಪಿಗೆಯಿಲ್ಲದ ಈ ಗೊತ್ತುವಳಿಯನ್ನು ಸ್ವೀಕರಿಸಿದರೆ ಮುಂದಿನ ಧೋರಣೆಯನ್ನು ಹಿಂದೀ ಸರಕಾರ ನಿರ್ಧರಿಸಬೇಕಾಗುವದೆಂದೂ ಅವರು ಸಾರಿದ್ದರಿಂದ ಭದ್ರತಾಮಂಡಲದ ಸದಸ್ಯರಿಗೆ ಚಿಂತೆಯುಂಟಾಗಿದೆಯಂತೆ.

ಪಾಕಿಸ್ತಾನದ ಸರ್ ಜಫರುಲ್ಲಾಖಾನರೂ ಗೊತ್ತುವಳಿಯನ್ನು ವಿರೋಧಿಸಿ ಪಾಕಿಸ್ತಾನಕ್ಕೆ ಕಾಶ್ಮೀರದಲ್ಲಿ ಸೈನ್ಯ ಕಳಿಸುವ ಅಧಿಕಾರ ಬೇಕೆಂದು ವಾದಿಸಿದರು. ಅವರು ತಮ್ಮದೇ ಬೇರೆ ಗೊತ್ತುವಳಿಯನ್ನು ಮಂಡಿಸಿದ್ದರು.

ಈ ಚರ್ಚೆಯಲ್ಲಿ ಮೊಟ್ಟಮೊದಲನೆ ಬಾರಿ ಸೀರಿಯನ್ ಪ್ರತಿನಿಧಿ ಖೋರಿ ಬೇಯವರು ಹಿಂದುಸ್ತಾನದ ವಿರುದ್ಧ ನಿಲುಮೆ ತೋರಿ, ಪಾಕಿಸ್ತಾನದ ಬೇಡಿಕೆಗಳಿಗೆ ಬೆಂಬಲ ಕೊಟ್ಟರು. ಭದ್ರತಾಮಂಡಲದ ಅಸ್ಥಾಯೀ ಸದಸ್ಯರನ್ನು ಪ್ರಾದೇಶಿಕ ತಳಹದಿಯ ಮೇಲೆ ಆರಿಸುವದರಿಂದ ಸೀರಿಯಾದ ನಿಲುಮೆಯನ್ನು ಅಖಿಲ ಅರಬ ರಾಷ್ಟ್ರಗಳ ನಿಲುಮೆಯೆಂದು ಭಾವಿಸಬಹುದು.

ಇಡೀ ಚರ್ಚೆಯಲ್ಲಿ ರಶಿಯಾ ತಟಸ್ಥವಾಗಿತ್ತು.

ಇತ್ತ ಕಾಶ್ಮೀರದಲ್ಲಿ ಜಹಾಂಗ, ರಾಜೋರಿ ಭಾಗಗಳಲ್ಲಿ ನಮ್ಮ ಸೈನಿಕರು ಪ್ರಚಂಡ ಪ್ರಗತಿ ಪಡೆದಿದ್ದಾರೆ.

ಕಾಶ್ಮೀರ ಮಹಾರಾಜರು ಭದ್ರತಾಮಂಡಲದ ಗೊತ್ತುವಳಿಯ ಬಗ್ಗೆ ವಿಷಾದವನ್ನು ಪ್ರದರ್ಶಿಸಿದ್ದಾರೆ. ಅವರು ದಿಲ್ಲಿಗೆ ಬಂದು ಸರದಾರ ಪಟೇಲರೊಡನೆ ಮಾತುಕತೆ ನಡೆಸಿರುವರು.

ಗೊತ್ತುವಳಿಯ ವಿವರಗಳು

ಕೆಲ ದಿನಗಳ ಹಿಂದೆ ಚೀನೀ ಪ್ರತಿನಿಧಿ ಸೂಚಿಸಿದ ಗೊತ್ತುವಳಿ ಪಾಕಿಸ್ತಾನಕ್ಕೆ ಅನುಕೂಲವಾದುದೆಂದು ಕಂಡುಕೊಂಡ ನಂತರ ಭದ್ರತಾಮಂಡಲದ ಆರು ಸದಸ್ಯರು– ಬ್ರಿಟನ್, ಬೆಲ್ಜಿಯಮ್, ಚೀನ, ಕೆನಡಾ, ಕೊಲಂಬಿಯ, ಮತ್ತು ಅಮೇರಿಕ,– ಕೂಡಿ ಈ ಗೊತ್ತುವಳಿಯನ್ನು ತಂದಿದ್ದರು. ಅದರ ಮುಖ್ಯಾಂಶಗಳು ಇಂತಿವೆ:—

(೧) ಕಾಶ್ಮೀರಕ್ಕೆ ಯುದ್ಧಕ್ಕೆಂದು ಹೋದ ಪಾಕಿಸ್ತಾನಿ ಮತ್ತು ಗುಡ್ಡಗಾಡು ಜನರನ್ನು ಹಿಂದಕ್ಕೆ ಕರೆಯಿಸಿಕೊಳ್ಳಲು ಪಾಕಿಸ್ತಾನ ಸರ್ವಪ್ರಯತ್ನ ಮಾಡಬೇಕು. ಅದು ಈ ಸಂಬಂಧದಲ್ಲಿ ಕೈಕೊಂಡ ಉಪಾಯಗಳನ್ನು ಸಾರ್ವಜನಿಕವಾಗಿ ತಿಳಿಸಬೇಕು.

(೨) ಪಾಕಿಸ್ತಾನಿಗಳು ಮತ್ತು ಗುಡ್ಡಗಾಡು ಜನರು ತಿರುಗಿ ಹೋಗುತ್ತಿರುವರೆಂದು ಹಾಗೂ ಯುದ್ಧವನ್ನು ನಿಲ್ಲಿಸುವ ಪ್ರಯತ್ನ ಪರಿಣಾಮಕಾರಿಯಾಗಿದೆಯೆಂದು ಭದ್ರತಾ ಮಂಡಲದ ಸದಿಚ್ಛಾ ಮತ್ತು ಮಧ್ಯಸ್ಥ ಮಂಡಲಕ್ಕೆ ಎನಿಸಿದಾಗ, ಹಿಂದುಸ್ತಾನ ಸರಕಾರವು ತನ್ನ ಸೈನ್ಯವನ್ನು ಕ್ರಮವಾಗಿ ಹಿಂತೆಗೆದುಕೊಳ್ಳಲು ಪ್ರಾರಂಭಿಸಬೇಕು. ಕೊನೆಯಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಲು ಕಾಶ್ಮೀರ ಸರಕಾರಕ್ಕೆ ಸಹಾಯವಾಗುವಷ್ಟು ಸೈನ್ಯವನ್ನು ಮಾತ್ರ ಅಲ್ಲಿ ಇಟ್ಟು ಉಳಿದುದನ್ನೆಲ್ಲ ಸ್ವದೇಶಕ್ಕೆ ಕರೆಯಿಸಿಕೊಳ್ಳಬೇಕು.

ಕಾಶ್ಮೀರದಲ್ಲಿ ಉಳಿದ ಸೈನ್ಯವು ಸಹ ನಾಗರಿಕರಿಗೆ ಹೆದರಿಕೆಯನ್ನುಂಟುಮಾಡುವಂತಹದಿರಬಾರದು.

ಯುದ್ಧ ರಂಗದ ಮುಂಭಾಗದಲ್ಲಿ ಸಣ್ಣ ತಂಡವನ್ನು ಮಾತ್ರ ಇಡಬೇಕು.

ಅನಂತರ ಶಾಂತಿ ಪಾಲನೆಗೆ ಸ್ಥಾನಿಕ ದಲಗಳನ್ನೇ ಉಪಯೋಗಿಸಬೇಕು. ಅವು ಅಶಕ್ಯವಾದಲ್ಲಿ ಮತಗಣನೆ ಅಧಿಕಾರಿಗಳು, ಎರಡೂ ಸರಕಾರಗಳ ಒಪ್ಪಿಗೆಯಿಂದ ಅವಶ್ಯವೆನಿಸಿದ ಸರಕಾರದ ಸೈನ್ಯದ ಸಹಾಯವನ್ನು ಪಡೆಯಬಹುದು.

(೩) ಕಾಶ್ಮೀರ ಮಂತ್ರಿ ಮಂಡಲದಲ್ಲಿ ಪ್ರಮುಖ ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನು ಸೇರಿಸಿಕೊಳ್ಳುವಂತೆ ಹಿಂದುಸ್ತಾನವು ಪ್ರಯತ್ನಿಸಬೇಕು.

(೪) ಸಾರ್ವತ್ರಿಕ ಮತಗಣನೆ ನಡೆಸಲು ಅಧಿಕಾರಿಗಳ ಆಡಳಿತ ಮಂಡಲ ನೇಮಿಸಬೇಕು.

(೫) ಸಾರ್ವತ್ರಿಕ ಮತಗಣನೆ ನಿಷ್ಪಕ್ಷಪಾತವಾಗಿ ಜರಗುವಂತೆ ಅದರ ಆಡಳಿತ ಮಂಡಲಕ್ಕೆ ಅವಶ್ಯವಿದ್ದ ಎಲ್ಲ ಅಧಿಕಾರ ಕೊಡಬೇಕು. ಅವರ ಆಡಳಿತಕ್ಕೆ ಅವಶ್ಯವೆನಿಸುವ ಸೈನ್ಯ ಸಹಾಯ ಕೇಳುವ ಅಧಿಕಾರವನ್ನೂ ಕೊಡಬೇಕು. ಭದ್ರತಾಮಂಡಲದ ಕಾರ್ಯದರ್ಶಿಯು ಪ್ರತಿನಿಧಿಯನ್ನು ಈ ಆಡಳಿತ ಮಂಡಲದ ಮೇಲೆ ನೇಮಿಸಬೇಕು.

(೬) ಸಾರ್ವತ್ರಿಕ ಮತಗಣನೆ ಮುಗಿದ ನಂತರ, ಅದು ನಿಷ್ಪಕ್ಷಪಾತದಿಂದ ನಡೆಯಿತೋ ಅಥವಾ ಇಲ್ಲವೋ ಎಂಬ ಬಗ್ಗೆ ಭದ್ರತಾ ಮಂಡಲದ ಮಧ್ಯಸ್ಥ ಮಂಡಲವು ತನ್ನ ಅಭಿಪ್ರಾಯ ಕೊಡುವದು.

(೭) ಮಧ್ಯಸ್ಥ ಮಂಡಲಕ್ಕೆ ಅವಶ್ಯವೆನಿಸಿದಾಗ ಸಹಾಯ ಸಹಕಾರ ನೀಡಲು ಹಿಂದುಸ್ತಾನ ಮತ್ತು ಪಾಕಿಸ್ತಾನ ಸರಕಾರಗಳು ತಮ್ಮ ಒಬ್ಬೊಬ್ಬ ಪ್ರತಿನಿಧಿಯನ್ನು ಕಳಿಸಬೇಕು.

ಭದ್ರತಾ ಮಂಡಲದ ಅಧ್ಯಕ್ಷರಾದ ಕೊಲಂಬಿಯಾದ ಡಾ. ಲೋಪೆಜರು ಗೊತ್ತುವಳಿಯನ್ನು ಕಳೆದ ಶನಿವಾರ (ತಾ. ೧೭) ದಿನ ಭದ್ರತಾ ಮಂಡಲದಲ್ಲಿ ಮಂಡಿಸಿದರು. ಅವರು ಪುರಸ್ಕರ್ತರೆಲ್ಲರೂ ಮಾತಾಡಿ ಹಿಂದುಸ್ತಾನ ಪಾಕಿಸ್ತಾನಗಳು ಇದನ್ನು ಸ್ವೀಕರಿಸಬೇಕೆಂದೂ ಹಿಂದುಸ್ತಾನದ ಹಕ್ಕುಗಳನ್ನು ಇದು ಅಪಹರಿಸುವದೆಂದು ಹೇಳುವದು ಸರಿಯಲ್ಲವೆಂದೂ ಹೇಳಿದರು. ನಿಷ್ಪಕ್ಷಪಾತವಾಗಿ ಮತಗಣನೆ ನಡೆಸುವದು ಅವಶ್ಯವೆಂದು ಈ ವ್ಯವಸ್ಥೆ ಮಾಡಲಾಗಿದೆಯೆಂದು ಅವರ ಅಭಿಪ್ರಾಯವಾಗಿತ್ತು. ಎರಡೂ ಪಕ್ಷದವರು ಇದರಿಂದ ಅಸಂತುಷ್ಟರಾಗಿದ್ದರೂ ಸಮಸ್ಯೆಯನ್ನು ಬಗೆಹರಿಸಲು ಇದೊಂದೇ ಉಪಾಯವೆಂದು ಅವರಿಗೆನಿಸಿತು.

ಭಾರತದ ಆಕ್ಷೇಪ

ತಾ. ೨೦ಕ್ಕೆ ಈ ಗೊತ್ತುವಳಿಗೆ ಹಿಂದುಸ್ತಾನದ ಆಕ್ಷೇಪವನ್ನು ವ್ಯಕ್ತಗೊಳಿಸುತ್ತ ಸರ್ ಗೋಪಾಲಸ್ವಾಮಿ ಅಯ್ಯಂಗಾರರು ಈ ಗೊತ್ತುವಳಿಯನ್ನು ಹಿಂದುಸ್ತಾನವೆಂದಿಗೂ ಸ್ವೀಕರಿಸಲಾರದೆಂದರು. ಯುಕ್ತರಾಷ್ಟ್ರ ಸಂಘದ ಗೊತ್ತುವಳಿಗಳಲ್ಲಿಯೂ ಅಂತರ್ರಾಷ್ಟ್ರೀಯ ಕಾವ್ಯಪಟದಲ್ಲಿಯೂ ವಿಶ್ವಾಸವಿಟ್ಟು ಹಿಂದುಸ್ತಾನ ಇಲ್ಲಿಯ ತನಕ ಈ ಪ್ರಶ್ನೆಯನ್ನು ತಂದಿತು. ಆದರೆ ಭದ್ರತಾ ಮಂಡಲ, ಕಾಶ್ಮೀರದಲ್ಲಿ ನಡೆದ ರಕ್ತಪಾತವನ್ನೂ ಹಿಂದುಸ್ತಾನ ಪಾಕಿಸ್ತಾನಗಳಲ್ಲಿ ಯುದ್ಧವಾಗುವ ಭಯವನ್ನೂ ಲಕ್ಷಿಸದೆ ಈ ಪ್ರಶ್ನೆಯನ್ನು ನಾಲ್ಕು ತಿಂಗಳ ವರೆಗೆ ಮುಂದೂಡುತ್ತ ಬಂತು. ಈಗಂತೂ ಹಿಂದುಸ್ತಾನ ಪಾಕಿಸ್ತಾನಗಳೆರಡನ್ನೂ ಒಂದೇ ಮಟ್ಟಕ್ಕೆ ಇಳಿಸಲಾಗಿದೆ. ಕಾಶ್ಮೀರದಲ್ಲಿ ಸಾರ್ವತ್ರಿಕ ಮತಗಣನೆಯ ಆಶ್ವಾಸನ ಕೊಟ್ಟರು ವಾಗ ಪಾಕಿಸ್ತಾನ ಅದರಲ್ಲಿ ಕೈಹಾಕುವ ಅವಶ್ಯಕತೆ ಇದ್ದಿಲ್ಲ. ಕಾಶ್ಮೀರವೆಂದಿನವರೆಗೆ ಹಿಂದುಸ್ತಾನದಲ್ಲಿರುವದೋ ಅಂದಿನ ವರೆಗೂ ಅದರ ಸಂರಕ್ಷಣೆ ಮಾಡುವ ಕರ್ತವ್ಯದಿಂದ ಹಿಂದುಸ್ತಾನ ಪರಾವೃತ್ತವಾಗಲಾರದು ಮತ್ತು ಅದಕ್ಕೆ ಅವಶ್ಯವಿದ್ದಷ್ಟು ಸೈನ್ಯವನ್ನು ಇಟ್ಟೇ ತೀರುವದೆಂದು ಶ್ರೀ ಅಯ್ಯಂಗಾರರು ಹೇಳಿದರು. ಪಾಕಿಸ್ತಾನ ಹಿಂದುಸ್ತಾನಗಳೊಳಗೆ ಯುದ್ಧವಾಗುವ ಭಯವಿನ್ನೂ ತಪ್ಪಿಲ್ಲವೆಂದು ಅವರು ಹೇಳಿ ಪಾಕಿಸ್ತಾನ ದಾಳಿಗಾರರಿಗೆ ಎಲ್ಲ ಸಹಾಯ ಸೌಕರ್ಯಗಳನ್ನು ಕೊಟ್ಟಿರುವದಲ್ಲದೆ ತನ್ನ ರಾಷ್ಟ್ರೀಯರನ್ನೂ ಕಾಶ್ಮೀರ ರಂಗಕ್ಕೆ ಕಳಿಸಿದೆ. ಅದು ಬಹಿರಂಗವಾಗಿ ಯುದ್ಧ ಸಾರುವದೊಂದೇ ಉಳಿದಿದೆ. ಇದು ಅಂತರ್ರಾಷ್ಟ್ರೀಯ ಕಾಯದೆಯ ಭಂಗವಲ್ಲವೇ? ಇದಕ್ಕೆ ಉತ್ತರವಿತ್ತವರಾರು ಎಂದು ಕೇಳಿ ಸರ್ ಗೋಪಾಲಸ್ವಾಮಿಯವರು ಗ್ರೀಸ ಪ್ರಶ್ನೆಯ ಚರ್ಚೆಯ ಕಾಲಕ್ಕೆ, ಒಂದು ರಾಷ್ಟ್ರದ ವಿರುದ್ಧ ಎದ್ದವರಿಗೆ ಇನ್ನೊಂದು ರಾಷ್ಟ್ರ ಸಹಾಯ ಮಾಡುವದು ಅಂತರ್ರಾಷ್ಟ್ರೀಯ ಕಾಯದೆಗೆ ಭಂಗ ತರುವದೆಂದು ಅಮೇರಿಕನ್ ಪ್ರತಿನಿಧಿ ಹೇಳಿದ್ದನ್ನು ಎತ್ತಿ ತೋರಿಸಿದರು. ಮತಗಣನೆಯ ವ್ಯವಸ್ಥೆಯ ವಿಷಯದಲ್ಲಿಯೂ ಅವರು ಗೊತ್ತುವಳಿಗೆ ತಮ್ಮ ವಿರೋಧವನ್ನು ವ್ಯಕ್ತಗೊಳಿಸಿ ತಮ್ಮ ವಿರೋಧವನ್ನು ಲಕ್ಷಿಸದೆ ಈ ಗೊತ್ತುವಳಿ ಪಾಸಾದರೆ ಮುಂದಿನ ಕ್ರಮವನ್ನು ಹಿಂದೀ ಸರಕಾರ ವಿಚಾರಿಸಬೇಕಾಗುವದೆಂದು ತಿಳಿಸಿದರು.

ಪಾಕಿಸ್ತಾನದ ವಿರೋಧ

ಪಾಕಿಸ್ತಾನದ ಪರವಾಗಿ ಸರ್ ಝಫರುಲ್ಲಾಖಾನರೂ ಗೊತ್ತುವಳಿಯನ್ನು ವಿರೋಧಿಸಿ ದಾಳಿಗಾರರನ್ನು ಹಿಂದಿರುಗುವಂತೆ ಮಾಡಬೇಕಾದರೆ ಪಾಕಿಸ್ತಾನವು ಕಾಶ್ಮೀರದೊಳಗೆ ಸೈನ್ಯ ಒಯ್ಯುವದಕ್ಕೆಡೆಬೇಕೆಂದೂ ಮತಗಣನೆಯ ಕಾಲಕ್ಕೆ ಹಿಂದೀ ಸೈನ್ಯ ಕಾಶ್ಮೀರದಲ್ಲಿದ್ದರೆ ಪಾಕಿಸ್ತಾನಿ ಸೈನ್ಯಕ್ಕೂ ಇರಗೊಡಬೇಕೆಂದೂ ವಾದಿಸಿದರು. ಅವರು ಈ ಬಗ್ಗೆ ೧೮ ಕಲಮುಗಳ ತಮ್ಮದೇ ಒಂದು ಗೊತ್ತುವಳಿಯನ್ನು ರಚಿಸಿ ಭದ್ರತಾ ಮಂಡಲಕ್ಕೆ ಕಳಿಸಿದ್ದರು. ಅದರಲ್ಲಿ ಮೇಲೆ ಹೇಳಿದ ವಿಷಯಗಳಲ್ಲದೆ, ಕಾಶ್ಮೀರ ಮತಗಣನೆಯ ಕಾಲಕ್ಕೆ ಕಾಶ್ಮೀರದ ಮುಸ್ಲಿಂ ಬಹುಸಂಖ್ಯಾಕ ಪ್ರದೇಶಗಳಲ್ಲಿ ಪಾಕಿಸ್ತಾನ ಸೈನ್ಯವೂ ಮುಸ್ಲಿಮೇತರ ಪ್ರದೇಶಗಳಲ್ಲಿ ಹಿಂದೀ ಸೈನ್ಯವೂ ಇರಬೇಕು. ಸಂಸ್ಥಾನದ ಪಕ್ಷಗಳಾದ ರಾಷ್ಟ್ರೀಯ ಪರಿಷತ್ತು, ಮುಸ್ಲಿಂ ಪರಿಷತ್ತು ಮತ್ತು ಆಝಾದ ಕಾಶ್ಮೀರ (ಶೇಖ ಅಬ್ದುಲ್ಲಾ, ಅಬ್ಬಾಸ ಎಂಬವರ ಕೈಗೊಂಬೆಗಳು) ಇವು ಮೂರಕ್ಕೂ ಸಮಪ್ರಾತಿನಿಧ್ಯವುಳ್ಳ ತಾತ್ಪೂರ್ತಿಕ ಸರಕಾರ ರಚನೆಯಾಗಬೇಕು. ಎಲ್ಲ ರಾಜಕೀಯ ಕೈದಿಗಳ ಬಿಡುಗಡೆಯಾಗಬೇಕು ಮೊದಲಾದ ಬೇಡಿಕೆಗಳನ್ನು ಪಾಕಿಸ್ತಾನ ಮಂಡಿಸಿದೆ.

ತಾ. ೨೧ ಕ್ಕೆ ಭದ್ರತಾ ಮಂಡಲದಲ್ಲಿ ಮೊದಲಿನ ಗೊತ್ತುವಳಿಯು ಕಲಮು ಕಲಮಾಗಿ ಪಾಸಾಯಿತು. ಇಡೀ ಚರ್ಚೆಯ ಕಾಲಕ್ಕೆ ರಶಿಯಾ ಯುಕ್ರೇನ್‌ಗಳು ತಟಸ್ಥವಾಗಿದ್ದವು. ಅವು ಮತವನ್ನೂ ಕೊಡಲಿಲ್ಲ.

ಹೈದರಾಬಾದದಲ್ಲಿ ರಾಜಕೀಯ ಕೈದಿಗಳ ಬಿಡುಗಡೆ

ಸಂಧಾನಕ್ಕೆ ಪೀಠಿಕೆ?

ದಿಲ್ಲಿಯಿಂದ ಮರಳಿದ ಹೈದರಾಬಾದ ಮುಖ್ಯಮಂತ್ರಿ ಮೀರಲಾಯಕ ಅಲಿಯವರು ಸಂಸ್ಥಾನದ ರಾಜಕೀಯ ಕೈದಿಗಳ ಸಾರ್ವಜನಿಕ ಬಿಡುಗಡೆಯ ಆಜ್ಞೆ ಹೊರಡಿಸಿದ್ದಾರೆ. ಮುಷೀರಾಬಾದ, ಹೈದರಾಬಾದ ಸೆರೆಮನೆಗಳಿಂದ ತಾ. ೨೦ಕ್ಕೆ ೩೦೦ ಕೈದಿಗಳ ಬಿಡುಗಡೆಯಾಗಿದೆ.

ಗುಲಬುರ್ಗಾ ಜೇಲಿನಲ್ಲಿರುವ ಹೈದರಾಬಾದ ಕಾಂಗ್ರೆಸ್ ಅಧ್ಯಕ್ಷ ಸ್ವಾಮಿ ರಮಾನಂದ ತೀರ್ಥರ ಬಿಡುಗಡೆಯಾಗಿದೆಯೆಂದು ಹೇಳಲಾಗುತ್ತಿದ್ದರೂ ಆ ಸುದ್ದಿ ಇನ್ನೂ ದೃಢಗೊಳಿಸಲ್ಪಟ್ಟಿಲ್ಲ.

ಆದರೆ ರಾಜಕೀಯ ಕೈದಿಗಳನ್ನು ಕೆಟ್ಟ ರೀತಿಯಲ್ಲಿ ನಡೆಸುವದನ್ನು ಪ್ರತಿಭಟಿಸಲು ಅಧ್ಯಕ್ಷ ರಮಾನಂದರು ಸೆರೆಮನೆಯಲ್ಲಿ ಕೈಕೊಂಡಿದ್ದ ಉಪವಾಸವನ್ನು ನಿಲ್ಲಿಸಿದ್ದಾರೆಂದು ತಿಳಿದು ಬಂದಿದೆ.

ನಿಜಾಮರಿಗೆ ಸಕ್ಸೇನರ ಎಚ್ಚರಿಕೆ

ಹೈದರಾಬಾದ ನಿಜಾಮರು ಬೇಗನೆ ತಮ್ಮ ಸಂಸ್ಥಾನದಲ್ಲಿ ಹೊಣೆಗಾರ ಸರಕಾರವನ್ನು ಸ್ಥಾಪಿಸಿ ಘಟನಾತ್ಮಕ ಅರಸರಾಗಿ ಉಳಿಯಬೇಕು ಇಲ್ಲದಿದ್ದರೆ ತುರ್ಕಸ್ಥಾನದ ಸುಲ್ತಾನರಂತೆ ದೇಶತ್ಯಾಗ ಮಾಡಿ ಪಾಕಿಸ್ತಾನದಲ್ಲೋ ತುರ್ಕಸ್ತಾನದಲ್ಲೋ ಕಾಲ ಕಳೆಯಬೇಕಾದೀತೆಂದು ರೇಲ್ವೆ ಧಾನ್ಯದಂಗಡಿಗಳ ವಿಚಾರಣೆ ಸಮಿತಿಯ ಅಧ್ಯಕ್ಷರಾದ ಶ್ರೀ. ಮೋಹನಲಾಲ ಸಕ್ಸೇನರು ಬೆಜವಾಡದ ಒಂದು ಸಾರ್ವಜನಿಕ ಸಭೆಯಲ್ಲಿ ಎಚ್ಚರಿಕೆ ಕೊಟ್ಟರು. ನಿಜಾಮರು ಕಾಲಮಾನಕ್ಕೆ ತಕ್ಕಂತೆ ವರ್ತಿಸದೆ ಹೊಸ ಪ್ರದೇಶಗಳನ್ನು ಗೆಲ್ಲುವ ಹವ್ಯಾಸಕ್ಕೆ ಬಿದ್ದರೆ, ಬಂಗಾಲ ಉಪಸಾಗರದ ತೆರೆಗಳು ಅವರ ಕಾಲು ತೊಳೆಯುವ ಬದಲು ಅವರೇ ಅದಕ್ಕೆ ಆಹುತಿಯಾಗಬೇಕಾದೀತು ಎಂದೂ ಅವರು ಹೇಳಿದರು.

ರಜವಿ–ಮುಸ್ಲಿಮರ ಪರಮ ಶತ್ರು

ಪಶ್ಚಿಮ ಪಂಜಾಬದ ಪ್ರಸಿದ್ಧ ರಾಷ್ಟ್ರೀಯ ಮುಸ್ಲಿಮ್ ಧುರೀಣರಾದ ಪ್ರೊ. ಅಬ್ದುಲ್ ಮಜೀದರು ಒಂದು ಹೇಳಿಕೆಯಲ್ಲಿ ಹೈದ್ರಾಬಾದದ ಕಾಸೀಮ ರಜವಿಯವರನ್ನು ಮುಸ್ಲಿಮರ ಪರಮ ಶತ್ರುವೆಂದು ಸಂಬೋಧಿಸಿದ್ದಾರೆ. ಹೈದರಾಬಾದದಲ್ಲಿ ಮುಸ್ಲಿಂಲೀಗಿನ ವಿಷ ಬೇಡವೆಂದು ಸರ್ ಅಕ್ಬರ್ ಹೈದರಿಯವರು ಕೊಟ್ಟಿದ್ದ ಸದುಪದೇಶವನ್ನು ನೆನೆದುಕೊಂಡು ನಿಜಾಮರು ಸಂಸ್ಥಾನದಲ್ಲಿ ಹೊಣೆಗಾರ ಸರಕಾರವನ್ನು ಸ್ಥಾಪಿಸಬೇಕೆಂದೂ ಅವರು ಸೂಚಿಸಿದ್ದಾರೆ.

ಅಮೇರಿಕೆ ರಶಿಯಾದ ವಿರುದ್ಧ ಯುದ್ಧಕ್ಕಾಗಿ ಮಾಡುತ್ತಿರುವ ಸನ್ನಾಹಗಳಲ್ಲಿ ವಿಮಾನಗಳಿಯ ಹೆಚ್ಚಳ, ಜಲಾಂತರ್ಗಾಮಿಗಳ ಹೆಚ್ಚಳಗಳ ಯೋಜನೆಯುಳ್ಳ ಇವೆರಡು ಸದ್ಯಕ್ಕೆ ರಶಿಯಾದ ಹತ್ತಿರವೇ ಹೆಚ್ಚು ಇದೆಯಂತೆ ಇದಲ್ಲದೆ ಆವ್ಯನಿಸ್ ರಕ್ಷಕ್ಕೆ ಸೇರಿದ ಅಮೇರಿಕನ್ ನಾಗರಿಕರು ತಮ್ಮ ಹೇರುಗಳನ್ನು ರಿಜಿಸ್ಟರು ಮಾಡಿಸಬೇಕೆಂದು ವಿಧಿಸಲಾಗುವದು!

'ಹರಿಜನ' ಅಗ್ರಲೇಖ

ಅ. ಭಾ. ಚ. ಸಂಘದ ಪುನರ್ಜನ್ಮ

ಅಖಿಲಭಾರತ ಚರಖಾ ಸಂಘವು ಕೆಳಗಿನ ಗೊತ್ತುವಳಿಯನ್ನು ಸ್ವೀಕರಿಸಿದೆ—

"(ಹಿಂದೀ ಕಾಂಗ್ರೆಸಿನ ಮಹಾಸಭೆಯು ಹೊಸ ಶರತ್ತು ಹಾಕಿದ್ದರಿಂದ) ಕಾಂಗ್ರೆಸ ಮಹಾಸಭೆಯ ಸದಸ್ಯರಾಗ ಬಯಸುವ ಉಮೇದವಾರರು ಸದಾ ಖಾದಿ ಧಾರಿಯಾಗಿರಬೇಕೆಂದು ಕೇಳುವ ಖಾದಿ ಬಳಕೆಯು ಪ್ರಗತಿಯಲ್ಲಿ ಮುಖ್ಯವೆಂದು ಚರಖಾ ಸಂಘಕ್ಕೆ ಎನಿಸುತ್ತದೆ. ಆದುದರಿಂದ ಖಾದಿಯು ಹೆಚ್ಚು ಸುಲಭವಾಗಿ ದೊರೆಯಬೇಕೆಂದು ಪ್ರಮಾಣಪತ್ರ ಪಡೆದ ಖಾದೀ ಭಾಂಡಾರಗಳಲ್ಲಿ ಖಾದಿ ಕೊಳ್ಳುವವರಿಗೆ ಸ್ವತಃ ನೂಲು ಕೊಡಬೇಕೆಂಬ ನಿರ್ಬಂಧವನ್ನು ತೆಗೆದುಹಾಕಬೇಕೆಂದು ಚರಖಾ ಸಂಘವು ನಿರ್ಧರಿಸಿದೆ. ಖಾದಿಯು ವಿಕೇಂದ್ರೀಕರಣ ಮತ್ತು ಕೂಲಿಕಾರರನ್ನು ಸುಲಿಯುವಿಕೆ [illegible] ಉಳಿದ ಕರಾರುಗಳನ್ನು ಹಾಗೆಯೇ ಇಡಲಾಗಿದೆ. ಈ ರೀತಿಯಾಗಿ ನಿರ್ಧರಿಸಿ ಇನ್ನು ಮುಂದೆ ಚರಖಾಸಂಘವು ಸ್ವಾವಲಂಬನಕಾರ್ಯದಲ್ಲಿಯೇ ತನ್ನ ಎಲ್ಲ ಲಕ್ಷ್ಯವನ್ನು ತೊಡಗಿಸುವದು. ಅಂದರೆ ಖಾದಿಯ ಉತ್ಪತ್ತಿ ಮತ್ತು ಮಾರಾಟದಲ್ಲಿ ಅದು ತೊಡಗುವದಿಲ್ಲ ಆದರೆ ಕೆಲ ಸಮಯದ ವರೆಗೆ ನೂಲುವವರಿಗೆ ಹೊರತಾದ ಖಾದಿಯು ಅವಶ್ಯಕತೆಯಿದ್ದರೆ ಅವರ ಬೇಡಿಕೆಯನ್ನು ಪೂರೈಸಲು ಅದು ಪ್ರಯತ್ನಿಸುವದು. ಈ ಉತ್ಪಾದನೆಗಳನ್ನು ಮಾಡಲಿಕ್ಕೆ ಚರಖಾ ಸಂಘಕ್ಕೆ ಕೆಲ ಸಮಯ ಹತ್ತುವದು. ಈ ಅವಧಿಯಲ್ಲಿ ಚರಖಾಸಂಘದಲ್ಲಿ ಮಾರಾಟವಾಗುವ ಖಾದಿಗೆಲ್ಲ ಮೊದಲಿನಂತೆ ನೂಲು ಕೊಡಬೇಕೆಂದು ಕರಾರ ಇದ್ದೇ ತೀರುವದು."

ಅ. ಭಾ. ಚ. ಸಂಘದ ಇತಿಹಾಸದಲ್ಲಿ ಈ ಗೊತ್ತುವಳಿಯು ಹೊಸ ಘಟ್ಟವನ್ನು ಪ್ರಾರಂಭಿಸುತ್ತದೆ. ವ್ಯಾಪಾರಕ್ಕೆಂದು ಖಾದೀ ಉತ್ಪತ್ತಿ ಮತ್ತು ಮಾರಾಟ ಕಾರ್ಯದ ಹೊಣೆ ಇನ್ನು ಮುಂದೆ ಅವಶ್ಯವಿರುವದಿಲ್ಲ. ಸ್ವಾವಲಂಬನದ ದೃಷ್ಟಿಯಿಂದ ಖಾದಿಯ ಉತ್ಪತ್ತಿಯ ಪ್ರಚಾರ ಮಾಡಬೇಕೆಂಬ ತನ್ನ ಮೂಲ ಮತ್ತು ಮಹತ್ವದ ಉದ್ದೇಶದ ಸಾಧನೆಗಾಗಿಯೇ ಅದು ತನ್ನ ಲಕ್ಷ್ಯವನ್ನು ಹಾಕುವದು. ಕಾಲ ಪರಿಸ್ಥಿತಿಯನ್ನನುಲಕ್ಷಿಸಿ ಅದು ವ್ಯಾಪಾರಕ್ಕಾಗಿ ಎಲ್ಲವನ್ನು ಸಂಘಟಿಸಬೇಕಾಗಿದ್ದಿತು. ಇದರಿಂದ ಬಡವರಿಗೆ ಕೆಲಮಟ್ಟಿಗೆ ಪರಿಹಾರ ದೊರೆಯಿತು. ಖಾದಿಯ ಬಗ್ಗೆ ಭಾವನೆಗಳನ್ನು ಉದ್ರೇಕಿಸಲೂ ಅದು ಕಾರಣವಾಯಿತು. ಆದರೆ ಅಹಿಂಸಾತ್ಮಕ ಸಮಾಜದ ಸ್ಥಾಪನೆಗೆ ಇದಿಷ್ಟೆ ಸಾಲದು. 'ನೂಲುವವರೆಲ್ಲ ಖಾದಿಯನ್ನು ಹಾಕಿಕೊಳ್ಳಲಿಕ್ಕೆಬೇಕು ಮತ್ತು ಖಾದಿಯನ್ನು ಧರಿಸುವವರೆಲ್ಲ ನೂಲಲಿಕ್ಕೇಬೇಕು' ಎಂಬವರ ಬಗ್ಗೆ ಒತ್ತಾಯಪಡಿಸಿ ಸದ್ಯದ ಪರಿಸ್ಥಿತಿಯ ವಿರುದ್ಧ ಹೋರಾಡುವ ನಿರ್ಧಾರವನ್ನು ಸಂಘವು ತೆಗೆದುಕೊಳ್ಳಬೇಕಾಗಿತ್ತು. ಈ ಧ್ಯೇಯ ಸಾಧನೆಯ ಮೊದಲನೆಯ ಮೆಟ್ಟಲೆಂದು ನೂಲಿನ ಕರಾರನ್ನು ಹಾಕಲಾಗಿದ್ದಿತು. ಆದರೂ ಸಂಘವು ಪೇಟೆಗಾಗಿ ಖಾದಿಯನ್ನು ಉತ್ಪಾದಿಸಿ ಮಾರಾಟ ಮಾಡುವದನ್ನು ಮುಂದರಿಸಿತು. ಆದರೆ ಈಗ ಈ ಗೊತ್ತುವಳಿಯಿಂದ ಈ ಚಟುವಟಿಕೆಯಿಂದ ಸಂಘವು ಮುಕ್ತವಾದಂತಾಯಿತು. ಈ ವ್ಯವಹಾರ ಶಾಖೆಯನ್ನು ಪೂರ್ಣವಾಗಿ ಮುಚ್ಚಿಬಿಡಬೇಕಾದರೆ ಕೆಲ ತಿಂಗಳು ಹತ್ತಬಹುದು. ಇದು ಕೇವಲ ಕೆಲಕಾಲದ ಮಾತು.

ಖಾದಿಯ ವ್ಯವಹಾರದ ವಿಷಯು ಇನ್ನು ಮುಂದೆ ಸ್ಥಳೀಯ ಸಂಸ್ಥೆಗಳ ಕೆಲಸ. ಹೆಚ್ಚು ಲಾಭವನ್ನು ತೆಗೆದುಕೊಂಡು ಖಾದಿ ಧಾರಿಗಳನ್ನು ಇಲ್ಲವೆ ಕೂಲಿಕಾರರನ್ನು ಕಡಮೆ ಕೂಲಿ ಕೊಟ್ಟು ಸುಲಿಯುವಂತೆ ಅಥವಾ ಇನ್ನಿತರ ಬೇರೆ ವಿಧದಿಂದ ಮೋಸಗೊಳಿಸುವಂತೆ ನೋಡಿಕೊಳ್ಳುವದರ ಮಟ್ಟಿಗೆ ಅ. ಭಾ. ಚ. ಸಂಘವು ಅವುಗಳ ಮೇಲೆ ನಿಯಂತ್ರಣವನ್ನಿಡುವದು. ಈ ಉದ್ದೇಶದಿಂದಲೆ ಖಾದಿ ವ್ಯವಹಾರ ಮಾಡುವವರಿಗೆ ಪ್ರಶಸ್ತಿ ಪತ್ರಿಕೆಗಳನ್ನು ಕೊಡುವ ಕಾರ್ಯವನ್ನು ಹಿಂದಿನಂತೆ ಸಂಘವು ಮುಂದೆಯೂ ಮಾಡುವದು.

ನೂಲಿನ ಕರಾರನ್ನು ತೆಗೆದುಹಾಕಿದ ಬಳಿಕ ಈ ವ್ಯವಹಾರವನ್ನು ಅ ಭಾ ಚ ಸಂಘವು ನಿಯಂತ್ರಿಸಬೇಕೇಕೆ ಎಂದು ಕೇಳಬಹುದು ಕಾಂಗ್ರೆಸ್ಸಿಗರಿಗೆ ಅನುಕೂಲವಾಗಬೇಕೆಂದು ನೂಲಿನ ನಿರ್ಬಂಧವನ್ನು ತೆಗೆದು ಹಾಕಿದೆ. ಖಾದಿಯ ಹೆಸರು ಉಳಿಸುವದಕ್ಕೆ ನಿಯಂತ್ರಣವನ್ನಿಡಬೇಕೆಂದು ನಿರ್ಧರಿಸಲಾಯಿತು ಕೂಲಿಕಾರರನ್ನು ಸುಲಿದು ತಯಾರಿಸಲ್ಪಟ್ಟ ಖಾದಿಯು ಕಾಂಗ್ರೆಸ್ಸಿಗನ ಅರ್ಥದಲ್ಲಿ ನಿಜವಾದ ಖಾದಿಯೇ ಅಲ್ಲ. ಅವನಿಗೆ ಅದು ಕಲಂಕಿತ ಖಾದಿಯು. ಖಾದಿಯೆಂದು ಪೇಟೆಯಲ್ಲಿ ಮಾರಲ್ಪಡುವ ಪದಾರ್ಥವು ಮಿಶ್ರಿತ ನೂಲಿನದಲ್ಲವೆಂಬುದನ್ನು ನೋಡಿಕೊಳ್ಳುವದೂ ಅವಶ್ಯವಾಗಿದೆ ಇವೆರಡು ಉದ್ದೇಶಗಳಿಗಾಗಿ ಅ. ಭಾ. ಚ. ಸಂಘದ ಪ್ರಶಸ್ತಿಪತ್ರ ಅವಶ್ಯ.

ಇದ್ದೀಗ ಕಾಂಗ್ರೆಸ್ಸಿಗರ ಸತ್ವಪರೀಕ್ಷೆಯ ಸಮಯ. ಕಾಂಗ್ರೆಸ ಪಂಚಾಯತಿಗೆ ನಿಲ್ಲಬಯಸುವ ಉಮೇದವಾರನಿಗೆ ಇಂತಿಷ್ಟು ಕರಾರುಗಳನ್ನು ಪಾಲಿಸಲಿಕ್ಕೆಬೇಕೆಂದು ಕಾಂಗ್ರೆಸ್ಸು ವಿಧಿಸಿದೆ. ಉದಾಹರಣೆಗಾಗಿ ಅವನು ಸದಾ ಖಾದಿಧಾರಿಯಾಗಿರಬೇಕು. ದ್ರವ್ಯತ್ಯಾಗಿರಬೇಕು ಅಂದರೆ ಗಿರಣಿ ಬಟ್ಟೆಯನ್ನು ಧರಿಸುವವ ಮತ್ತು ಕುಡುಕ ಕಾಂಗ್ರೆಸ್ಸಿನ ದೃಷ್ಟಿಯಿಂದ ಸರಿಸಮಾನ ಕುಡುಕತನವನ್ನು ನಿಲ್ಲಿಸುವದು ಕಾಂಗ್ರೆಸ ಕಾರ್ಯಕ್ರಮದ ಭಾಗವಾಗಿರುವಂತೆ ಗಿರಣಿ ಬಟ್ಟೆಯನ್ನು ನಿಲ್ಲಿಸುವದೂ ಆಗಿದೆ ಎಂಬದೇ ಇದರ ಅರ್ಥ. ಇದು ನಿಜವಾದ ವಿವರಣೆಯಾಗಿದ್ದರೆ ಎಲ್ಲ ದೃಷ್ಟಿಯಿಂದ ಖಾದಿಯನ್ನು ಪ್ರೋತ್ಸಾಹಿಸುವದು ಕಾಂಗ್ರೆಸಿನ ಮಿತ್ರರ ಕರ್ತವ್ಯವಾಗಿದೆ. ಅಂದರೆ ಅವನು ಸ್ವತಃ ನೂಲಲಿಕ್ಕೇಬೇಕು ಮತ್ತು ತನಗೆ ಬೇಕಾಗುವ ಬಟ್ಟೆಗೆ ಅದು ಸಾಕಷ್ಟಾಗದಿದ್ದರೆ ಪ್ರಶಸ್ತಿ ಪತ್ರ ಪಡೆದ ಖಾದಿಯನ್ನೆ ಅವನು ಕೊಳ್ಳಬೇಕು. ಸಾಮ್ಯವಾದಿ ಮತ್ತು ಉಳಿದ 'ಪ್ರಗತಿಪರ' ಪಕ್ಷಗಳಾದರೂ ಖಾದಿಯ ಈ ಕಾರ್ಯಕ್ರಮವನ್ನು ಸ್ವೀಕರಿಸುವದು ಕರ್ತವ್ಯವಾಗಿದೆ. ಜನ ಸಾಮಾನ್ಯರ ಹಿತವನ್ನು ಅವರು ಮಾಡಬಯಸುತ್ತಿದ್ದರೆ ಮತ್ತು ದೇಶದ ಚರಖಾ ಧ್ವಜವನ್ನು ಅವರು ಪ್ರೀತಿಸುತ್ತಿದ್ದರೆ ಬಂಡವಲಶಾಹಿಯನ್ನು ವಿರೋಧಿಸುವದರ ನಿದರ್ಶಕವಾದ ಈ ಕಾರ್ಯಕ್ರಮವನ್ನು ಅವರು ಪ್ರೋತ್ಸಾಹಿಸಲಿಕ್ಕೆಬೇಕು.

(೧೯೪೮ ಎಪ್ರಿಲ ತಿಂಗಳಿನ 'ಖಾದಿ ಜಗತ್' ಪತ್ರಿಕೆಯಲ್ಲಿ ಬರೆದ ಹಿಂದುಸ್ತಾನಿ ಲೇಖದಿಂದ ಅನುವಾದಿತ)

ವಿನೋಬಾ

"ಈ ಭೂತದಯಾತ್ಮಕ ಚಳವಳಿಯನ್ನು ಯಶಸ್ವಿ ಮಾಡಲು ಎಲ್ಲ ಧರ್ಮಗುರುಗಳ ಮತ್ತು ಸಂಘ ಸಂಸ್ಥೆಗಳ ಹಿರಿಯರು ಸಹಕರಿಸಬೇಕೆಂದು ಬಿನ್ನವಿಸುತ್ತೇವೆ."

ಈ ಮೂರು ವ್ರತಗಳನ್ನು ಪಾಲಿಸುವ ಅಪ್ರಕಾಶಯರಿಗೆ ನಿತ್ಯದ ಜೀವನದಲ್ಲಿ ಸಿಕ್ಕಾರದೊ ಅವೆಲ್ಲ ಈ ಬಿನ್ನಹವನ್ನು ಲಕ್ಷಿಸಬೇಕಾಗಿ ನಾನು ಕೇಳಿಕೊಳ್ಳುತ್ತೇನೆ ಪರಿಪೂರ್ಣ ಶಾಕಾಹಾರಿಗಳು ಮತ್ತು ಹುಳವನ್ನು ಕೂಡ ಕೊಲ್ಲದಿದ್ದವರು ಮೂರನೆಯ ವ್ರತದತ್ತ ಗಮನಿಸಬೇಕೆಂದು ಬಿನ್ನವಿಸುತ್ತೇನೆ.

ದೇಶದಲ್ಲಿ ಹಬ್ಬಿದ ಜಾತೀಯ ವಿಷವನ್ನು ಲಕ್ಷಿಸಿ ಮತ್ತು ಈ ಬಗೆಯ ಬಿನ್ನಹವನ್ನು ಮಾಡಿಕೊಳ್ಳುವದು ಕೂಡ ಭೀಕರ ಗಲಭೆಗಳಿಗೆ ಕಾರಣವಾಗುವ ಸಂಭವವಿದೆಂದು ಭಾವಿಸಿ ಈ ಚಳವಳಿಯ ಪ್ರದರ್ಶನವನ್ನಾಗಲಿ ಸಂಘಟಿತ ಪ್ರಚಾರವನ್ನಾಗಲಿ ಮಾಡಿರೆಂದು ಹೇಳುವದಿಲ್ಲ. ಈ ವಿಚಾರವು ಬಹಳ ಒಳ್ಳೆಯದಾಗಿದ್ದು ಪ್ರತಿಯೊಬ್ಬ ಇದನ್ನು ವ್ಯಕ್ತಿಶಃ ಆಚರಿಸುವದರಿಂದ ಮತ್ತು ಯಾರಿಗೆ ಇದು ಸೇರುವದೊ ಅವರ ಪ್ರಯತ್ನಗಳಿಂದ ಹೆಚ್ಚು ಲೋಕಪ್ರಿಯವಾಗಬಲ್ಲದು.

ವರ್ಧಾ ಕಿ. ಘ. ಮ.

೧೫—೪—೪೮

× × ×

ನೂಲಿನ ನಿರ್ಬಂಧ

ಖಾದಿಯನ್ನು ಕೊಳ್ಳುವಾಗ ಇದ್ದ ನೂಲಿನ ನಿರ್ಬಂಧವನ್ನು ತೆಗೆದುಹಾಕಲಾಗಿದೆ. ಮನ್ನಣೆ ಪಡೆದ ಭಾಂಡಾರಗಳಿಂದ ಖಾದಿಯನ್ನು ಕೊಳ್ಳಲು ತೋರಿಕೆಯ ಅಡಚಣೆ ಯಾವುದೂ ಉಳಿಯಲಿಲ್ಲ. ಸ್ವತಃ ನೂಲು ತೆಗೆಯಲು ಸಿದ್ಧರಿಲ್ಲದಿದ್ದರೆ ಇಲ್ಲವೆ ತಮ್ಮ ನೇತೃತ್ವದಲ್ಲಿವೆ ನೂಲಿಸದೇ ಇದ್ದರೆ ಅನೇಕ ಕಾಂಗ್ರೆಸ್ಸಿಗರಿಗೆ ಶುದ್ಧ ಖಾದಿಯು ಸಿಗಲಾರದು ಎಂಬ ಮಾತು ಬೇರೆ. ಪ್ರಾಥಮಿಕ ಪಂಚಾಯತಿಯಲ್ಲಿ ಪ್ರತಿ ೫೦೦ ಜನರಿಗೆ ಒಬ್ಬರಂತೆ ಉಮೇದವಾರನಿರಬೇಕೆಂದು ಸೂಚಿತ ಕಾಂಗ್ರೆಸ ಘಟನೆಯಿಂದ ಗೊತ್ತಾಗುತ್ತದೆ. ಇದನ್ನು ಅಕ್ಷರಶಃ ಕಾರ್ಯರೂಪದಲ್ಲಿ ತಂದದ್ದಾದರೆ ಎಲ್ಲಿಯೂ ಸ್ಪರ್ಧಿಸುವ ಉಮೇದ್ವಾರರಿಲ್ಲೆಂದು ಗ್ರಹಿಸಿ ಪಾಕಿಸ್ತಾನವನ್ನು ಬಿಟ್ಟುಗೊಟ್ಟರೂ ೩೦ ಕೋಟಿ ಜನರಿಗೆ ೬ ಲಕ್ಷ ಉಮೇದವಾರರಾಗಬೇಕಾಗುವದು. ಪ್ರತಿಯೊಬ್ಬನಿಗೆ ೨೫ ವಾರ ಖಾದಿಯೆಂದು ಲೆಕ್ಕ ಹಿಡಿದರೆ ೧.೫ ಕೋಟಿ ವಾರ ಖಾದಿಯನ್ನು ಉತ್ಪಾದಿಸುವ ಕಾರ್ಯಕರ್ತರು ಬೇಕಾಗುವರೆಂದು ಇದರ ಅರ್ಥವಾಗುವದು. ಆದುದರಿಂದ ಉಮೇದವಾರರಾಗಬಯಸುವವರು ಸ್ವತಃ ನೂಲದಿದ್ದರೆ ಕೂಡಲೆ ಇಷ್ಟೆಲ್ಲ ಬೇಡಿಕೆ ಪೂರೈಸುವದು ಕಠಿಣವೆ ಆಗುವದು.

ಎಲ್ಲ ಖಾದಿಯನ್ನು ಮನ್ನಣೆ ಪಡೆದ ಸಂಸ್ಥೆಗಳಿಂದಲೆ ಕೊಳ್ಳಬೇಕೆಂದು ಕಾಂಗ್ರೆಸು ನಿರ್ಬಂಧಿಸುವದೆಂದು ಆಶಿಸಲಾಗಿದೆ. ಖಾದಿ ವ್ಯವಹಾರವನ್ನು ಇನ್ನು ಮುಂದೆ ಮಾಡಕೂಡದೆಂದು ಅ. ಭಾ. ಚ. ಸಂಘವು ನಿರ್ಧರಿಸಿದೆ. ಕೂಲಿಕೆಗೆ ದುಡಿಯುವ ನೂಲುವವರಿಂದ ನೂಲು ತೆಗೆದುಕೊಂಡು ಖಾದಿಯನ್ನು ಉತ್ಪಾದಿಸುವದನ್ನು ಅದು ಬಿಟ್ಟುಕೊಟ್ಟಿದೆ. ಆದುದರಿಂದ ಚರಖಾ ಸಂಘವು ಪ್ರಶಸ್ತಿಪತ್ರ ಕೊಡುವಾಗ ವಿಶುದ್ಧ ನೂಲಿನ ಖಾದಿಯನ್ನು ಮಾರುವವರು ಎರಡನೆಯವರನ್ನು ಸುಲಿಯುವ ಉದ್ದೇಶದಿಂದ ಕಾರ್ಯ ನಡೆಸುವದಿಲ್ಲ ಎಂದು ಗ್ರಹಿಸಿ ಮನ್ನಣೆ ಕೊಡುವದು. ಕಾಂಗ್ರೆಸ್ಸಿನ ಭಾವೀ ಉದ್ದೇಶವನ್ನು ಲಕ್ಷಿಸಿದರೆ ಈ ಬಗೆಯ ಕರಾರುಗಳನ್ನು ಹೇರುವದು ಅವಶ್ಯವೆನಿಸುತ್ತದೆ.

ವರ್ಧಾ ಕಿ. ಘ. ಮ.

೮-೪-೪೮

× × ×

ಮಿತಿಮೀರಿದ ಧಾರಣೆಗಳು

ನಿಯಂತ್ರಣಗಳನ್ನು ತೆಗೆದು ಹಾಕಿದ್ದಕ್ಕೆ ವ್ಯಾಪಾರಸ್ಥರು ಮತ್ತು ಕೆಲ ಮಟ್ಟಿಗೆ ಒಕ್ಕಲಿಗರು ಯೋಗ್ಯರೀತಿಯಿಂದ ನಡೆದುಕೊಳ್ಳಲಿಲ್ಲೆಂಬ ದೂರುಗಳು ವಿಶೇಷತಃ ಗುಜರಾಥದಿಂದ ನನ್ನ ಕಡೆಗೆ ಬಂದಿವೆ. ಅವರು ಧಾರಣೆಗಳನ್ನು ಮಿತಿಮೀರಿ ಏರಿಸಿದ್ದಾರೆ ಪರಿಣಾಮವಾಗಿ ಮಧ್ಯಮ ವರ್ಗದವರಿಗೆ ಮತ್ತು ಕೆಳ ವರ್ಗದವರಿಗೆ ಆಹಾರ ಪದಾರ್ಥಗಳನ್ನು ಕೊಳ್ಳುವದೇ ಕಠಿಣವಾಗಿ ಹೋಗಿದೆ. ಸೀದಾ ಪದ್ಧತಿಯನ್ನು ತೆಗೆದು ಹಾಕಿದ್ದರಿಂದ, ಅದು ಜಾರಿಯಲ್ಲಿದ್ದಾಗ ಸಿಕ್ಕುತ್ತಿದ್ದ ಕೆಲ ಔಂಸು ಕಾಳು ಕೂಡ ಸಿಕ್ಕದಂತಾಗಿದೆ. ಪ್ರತಿಯೊಬ್ಬ ನಾಗರಿಕನಿಗೆ ಯೋಗ್ಯದರದಲ್ಲಿ ಆಹಾರ ಪದಾರ್ಥ ಸಿಕ್ಕುವಂತೆ ನೋಡಿಕೊಳ್ಳುವದು ಪ್ರಾಚೀನ ಕಾಲದಿಂದಲೂ ಮಹಾಜನ (ವ್ಯಾಪಾರಸ್ಥರ ಮತ್ತು ಒಕ್ಕಲಿಗರ ಸಂಘ)ದ ಕರ್ತವ್ಯವಾಗಿದೆ. ಹಿಂದೆ ಮಹಾಜನಗಳು ಈ ಕರ್ತವ್ಯವನ್ನು ನಿಷ್ಠೆಯಿಂದ ಮಾಡುತ್ತಿದ್ದುದರಿಂದ ಹಳ್ಳಿಯ ಮತ್ತು ನಗರದ ಲೋಕಪ್ರಿಯ ಸರಕಾರದಂತೆ ಇದ್ದವು ಅವು. ಆದರೆ ಈ ಕರ್ತವ್ಯವನ್ನು ಬಿಟ್ಟುಕೊಟ್ಟದ್ದರಿಂದ ಸಂಘಗಳು ಅಶಕ್ತವಾದವು, ಕೊನೆಗೆ ಸರಕಾರದಿಂದ ಹತ್ತಿಕ್ಕಲ್ಪಟ್ಟವು. ತಮ್ಮ ಹಿಂದಿನ ವರ್ಚಸ್ಸು ಮತ್ತು ಮಹತ್ವವನ್ನು ಪುನಃ ಪಡೆಯಬೇಕಾಗಿದ್ದರೆ ಜನಸಾಮಾನ್ಯರ ಹಿತವನ್ನು ಸಾಧಿಸುವ ಮಹತ್ವದ ಹೊಣೆಯನ್ನು ಅವು ಅರಿತುಕೊಳ್ಳಬೇಕಾದುದು ಅವಶ್ಯವಾಗಿದೆ.

ಸೀಮೆ ಎಣ್ಣೆಯ ಹಂಚಿಕೆಯ ಪದ್ಧತಿಯ ಸಂಬಂಧದಲ್ಲಿಯೂ ದೂರುಗಳಿವೆ. ಕೆಲವೆ ಸಂಸ್ಥೆಗಳು ಈ ಚಿಮಣಿ ಎಣ್ಣೆಯ ಗುತ್ತಿಗೆಯನ್ನು ಹಿಡಿದಂತಾಗಿದೆ. ಪರಿಣಾಮವಾಗಿ ಅದರ ಮಾರಾಟದಲ್ಲಿ ಕಳ್ಳಪೇಟೆ ವಿಪರೀತ ನಡೆದಿದೆ. ಅಧಿಕಾರಿಗಳು ಮತ್ತು ಸಂಬಂಧಿಸಿದ ಸಂಸ್ಥೆಯವರು ಈ ವಿಷಯದತ್ತ ಗಮನಿಸಿ ಅದನ್ನು ಸುಧಾರಿಸುವರೆಂದು ನಾನು ಆಶಿಸುತ್ತೇನೆ.

ವರ್ಧಾ ಕಿ. ಘ. ಮ.

೧೨—೪—೪೮

× × ×

'ಹರಿಜನ' ಆವೃತ್ತಿ

ಹರಿಜನದ ವಾಚಕರು ಮತ್ತು ಹಿಂದೀ ಭಾಷೆಗಳಲ್ಲಿ ಅದನ್ನು ಅನುವಾದಿಸುವವರು ಇಂಗ್ಲಿಷ ಹರಿಜನದೊಂದಿಗೆ ಶಕ್ಯವಿದ್ದರೆ ಗುಜರಾಥಿ ಮತ್ತು ಹಿಂದುಸ್ತಾನೀ ಹರಿಜನಗಳನ್ನು ನೋಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅನೇಕ ಸಲ ಅವುಗಳಲ್ಲಿ ಸ್ವತಂತ್ರ ಲೇಖಗಳು ಇರುವದುಂಟು ಬೇರೆ ಯಾವ ಆವೃತ್ತಿಗಳಲ್ಲಿಯೂ ಅವು ಅನುವಾದಿತವಾಗಿರುವದಿಲ್ಲ ಲೇಖಗಳು ಕೆಲ ಸಲ ಒಂದೆಯಾಗಿದ್ದರೂ ಇಂಗ್ಲಿಷಿನಲ್ಲಿ ಅವನ್ನು ವಿವೇಚಿಸುವದಕ್ಕಿಂತ ದೇಶಭಾಷೆಗಳಲ್ಲಿ ವಿವೇಚಿಸುವ ರೀತಿ ಭಿನ್ನವಾಗಿರುವದುಂಟು. ಬೇರೆ ಭಾಷೆಗಳಲ್ಲಿ ಅನುವಾದ ಮಾಡುವವರು, ಇಂಗ್ಲಿಷಿನಿಂದ ಭಾಷಾಂತರವಾಗದಿದ್ದ ಲೇಖಗಳನ್ನು ಮೂಲ ಗುಜರಾಥಿ ಇಲ್ಲವೆ ಹಿಂದುಸ್ತಾನಿಯಿಂದಲೆ ಅನುವಾದಿಸುವದು ಉಚಿತವಾಗಿದೆ.

ವರ್ಧಾ ಕಿ. ಘ. ಮ.

೧೩—೪—೪೮

ರಕ್ತಸಿಕ್ತ ವಸ್ತ್ರಗಳು

ಕಳೆದ ೨೦ ವರ್ಷಕ್ಕಿಂತಲೂ ಹೆಚ್ಚು ಕಾಲ ಗಾಂಧೀಜಿಯೊಡನೆ ಆಗಾಗ್ಗೆ ಪತ್ರವ್ಯವಹಾರ ಮಾಡುತ್ತಿದ್ದ ವೃದ್ಧರೊಬ್ಬರು ನನಗೆ ಒಂದು ಉದ್ದನ್ನ ಪತ್ರದಲ್ಲಿ ಹೀಗೆ ಬರೆಯುತ್ತಾರೆ:

"ಗಾಂಧೀಜಿಯ ರಕ್ತರಂಜಿತ ವಸ್ತ್ರಗಳನ್ನು ವಸ್ತುಸಂಗ್ರಹ ಶಾಲೆಯಲ್ಲಿ ಕಾಯ್ದಿಡಬೇಕೆಂದಿರುವದು ನಿಜವೆ? ನಿಜವಾದರೆ, ಆ ಮೂಲಕ ಕಾಯ್ದಿಡಬೇಕೆಂದಿರುವ ವಸ್ತು ಯಾವದು—ಪ್ರೇಮವೆ? ದ್ವೇಷವೆ?

"ಎಚ್ಚರಿಕೆ! ಅವರ ಮೇಲಿನ ಅಂಧ ಭಕ್ತಿಯಿಂದ ನಾವು ಘೋರ ಅಪರಾಧವನ್ನು ಮಾಡಬಹುದು ಅವರ ಆಜೀವನ ಮಾಡಿದ ಕಾರ್ಯವನ್ನು ಅವರ ಮಕ್ಕಳೇ—ಅವರ ಅನುಯಾಯಿಗಳೇ ವ್ಯರ್ಥಗೊಳಿಸುವರೆ?

"ಸತ್ಯ ಅಹಿಂಸೆಗಳ ಆರಾಧಕರಾಗಿದ್ದ ಅವರಲ್ಲಿ ಭಕ್ತಿಯನ್ನು ತೋರುವಲ್ಲಿಯೂ ಅವರ ನೆನಪನ್ನು ಜಾಗೃತವಾಗಿಡುವದರಲ್ಲಿಯೂ ನಾವು ವಿಶೇಷ ಜಾಗರೂಕತೆಯನ್ನು ವಹಿಸಬೇಕು. ಮುಂದೆಂದಾದರೂ ಏನಾದರೊಂದು ಕೆಡಕನ್ನುಂಟುಮಾಡಬಹುದಾದ ಯಾವ ಕೆಲಸವನ್ನೂ ನಾವು ಮಾಡಕೂಡದು."

ಮೇಲಿನ ಟೀಕೆ ನನಗೆ ಸಮ್ಮತವಿದೆ. ಕೇವಲ ಗಾಂಧೀಜಿ ಉಪಯೋಗಿಸುತ್ತಿದ್ದ ವಸ್ತ್ರಗಳನ್ನು ಕಾದಿಡುವದರಲ್ಲಿ ಸ್ವತಃ ನನಗೂ ಏನೂ ಆಕ್ಷೇಪವಿಲ್ಲ ಆದರೆ ಗಾಂಧೀಜಿಯ ಸಮೀಪದ ಸಹಕಾರಿಗಳಾಗಿದ್ದವರನೇಕರ ಅಭಿಪ್ರಾಯ ಬೇರೆಯೇ ಇದೆ. ಅವರ ಅಭಿಪ್ರಾಯಕ್ಕೂ ನಾನು ನನ್ನ ಸ್ವಂತ ಅಭಿಪ್ರಾಯದಂತೆ ಮನ್ನಣೆ ಕೊಡಬೇಕಾಗುತ್ತದೆ ಆದರೂ ಗಾಂಧೀಜಿಯ ಕೊನೆಯ ವಸ್ತ್ರಗಳನ್ನು ಕಾದಿಡುವದೇ ಆದರೆ ಅವನ್ನು ಒಗೆದು ರಕ್ತದ ಕಲೆಗಳನ್ನು ತೆಗೆದೇ ಇಡಬೇಕೆಂದು ನನ್ನ ಅಭಿಮತ.

ಗಾಂಧೀ ಅವಶೇಷ ಸಂರಕ್ಷಕ ಸಮಿತಿಯವರು ಈ ವಿಷಯವನ್ನು ಎಚ್ಚರಿಕೆಯಿಂದ ವಿಚಾರಿಸುವರೆಂದು ಹಾರೈಸುತ್ತೇನೆ.

೧೧—೪—೪೮

ಉಳಿದ ಮಾತು:

ಇದನ್ನು ಮುದ್ರಣಕ್ಕೆ ಕಳಿಸುವ ಮೊದಲು ಕಾಕಾ ಕಾಲೇಲಕರರಿಗೆ ತೋರಿಸಿದೆ. ಎರಡೂ

—೯ ನೇ ಪುಟ ನೋಡಿರಿ

ಟಿಪ್ಪಣೆಗಳು

ಅಹಿಂಸಾ ಸಪ್ತಾಹ

ಪನಾಡು ೨ (ಸಿಲೋನ) ಯೂನಿವರ್ಸಲ್ ಕಾಲೇಜಿನ ಪ್ರಿನ್ಸಿಪಾಲರಾದ ಪ್ರೊ. ಡಬ್ಲ್ಯು. ಎಸ್ ಫರ್ನಾಂಡೋ ಇವರು ಬಿನ್ನಹ ಪತ್ರಿಕೆಯನ್ನು ಹೊರಡಿಸಿದ್ದು ಅದರಲ್ಲಿಯ ಕೆಲ ಅಂಶ ಈ ರೀತಿಯಿದೆ.

"ಪ್ರಾಣವು ಅತ್ಯಮೂಲ್ಯವಾದುದು; ಯಾವದೇ ಪ್ರಾಣಿಯು ಅದು ಸಣ್ಣದಿರಲಿ ದೊಡ್ಡದಿರಲಿ. ಪ್ರಾಣವನ್ನು ತೆಗೆದುಕೊಳ್ಳಲು ನಮಗೆ ಅಧಿಕಾರವಿಲ್ಲ. ಮನುಷ್ಯನ ಮತ್ತು ಪಶುಗಳ ಕಷ್ಟನಿಷ್ಠುರಗಳನ್ನು ಕಡಿಮೆಗೊಳಿಸುವದು ನಮ್ಮ ಕರ್ತವ್ಯವಾಗಿದೆ. ಕಳೆದ ಕೆಲ ವರ್ಷಗಳಲ್ಲಿ ಯುದ್ಧ ಸಿಡಿಗುಂಡು ಮತ್ತು ಭಯಂಕರ ಬಾಂಬುಗಳಿಂದ ಭಾರೀ ಅನರ್ಥವನ್ನು ಅನುಭವಿಸಿ ಇಡೀ ಜಗತ್ತು ತತ್ತರಿಸಿದೆ; ಜಾತೀಯ, ಧಾರ್ಮಿಕ ಮತ್ತು ರಾಜಕೀಯ ದುರಂತಗಳಿಂದ ಮುಕ್ತವಾಗಿ ಪರಿಹಾರ ಮತ್ತು ಸುಖ ಸೌಖ್ಯಗಳ ದಿನಗಳನ್ನು ನೋಡಲು ಅದು ಆತುರಗೊಂಡಿದೆ ಆದುದರಿಂದ ಮಾನವ ಜಾತಿಗೆ ಮತ್ತು ಪಶುಪಕ್ಷಿಗಳಿಗೆ ಸುಖ ಸೌಖ್ಯಗಳನ್ನೊದಗಿಸಿ ಕೊಡಲು ನಾವು ಮಹತ್ಪ್ರಯತ್ನಿಸುವಾ.

"೧೯೪೮ನೇ ಇಸ್ವಿಯಲ್ಲಿ ನಾವು ಸೂಕ್ಷ್ಮ ಪ್ರಮಾಣದಿಂದ ಸಂಘಟಿಸಿದ ಅಹಿಂಸಾ ಚಳವಳಿಯನ್ನು ನಿಮ್ಮ ಗಮನಕ್ಕೆ ತರಬಯಸುತ್ತೇವೆ. ಕಳೆದ ಇಪ್ಪತ್ತಮೂರು ವರ್ಷಗಳ ವರೆಗೆ ಅದು ಸಾವಕಾಶ ಪ್ರಗತಿಯನ್ನು ಪಡೆಯುತ್ತ ನಡೆದು ನಡೆದು ಹೋದ ವರುಷ ಅದರ ನಿರ್ದಿಷ್ಟ ಪರಿಣಾಮ ಕಂಡು ಬಂದಿದೆ.

"ಪ್ರತಿವರುಷದಲ್ಲಿ ತಿಂಗಳ ಮೊದಲನೇ ವಾರವೇ ಅಹಿಂಸಾ ಸಪ್ತಾಹವನ್ನು ಪಾಲಿಸುವಲ್ಲಿ ಎಲ್ಲರೂ ನಮ್ಮ ಕೂಡ ಸಹಕರಿಸಬೇಕೆಂದು ನಾವು ಬಿನ್ನವಿಸುತ್ತೇವೆ. ಈ ಸಪ್ತಾಹದಲ್ಲಿ ಕೆಳಗಿನ ಮೂರು ವ್ರತಗಳನ್ನು ಪಾಲಿಸಬೇಕು.

೧) ಕೊಲೆಯಿಂದ ಪರಾವೃತ್ತರಾಗಬೇಕು.

೨) ಕೇವಲ ಶಾಕಾಹಾರವನ್ನೆ ತೆಗೆದುಕೊಳ್ಳತಕ್ಕದ್ದು.

೩) ಮಧ್ಯಾಹ್ನ ೧೧-೩೦ ರಿಂದ ೧ ಗಂಟೆಯ ವರೆಗೆ ಪ್ರಾಣಿಗಳಿಗೆ ವಿಶ್ರಾಂತಿಯನ್ನು ಕೊಡತಕ್ಕದ್ದು ಮತ್ತು ಈ ಅವಧಿಯಲ್ಲಿ ಪ್ರಾಣಿಗಳಿಂದ ಎಳೆಯಲ್ಪಡುವ ವಾಹನಗಳಲ್ಲಿ ಪ್ರವಾಸ ಮಾಡಕೂಡದು.

ಸಂಕುಚಿತ ಪ್ರಾಂತೀಯತೆ

ಪಂಡಿತ ಜವಾಹರಲಾಲ ನೆಹರೂ ಮತ್ತು ಇತರ ಪ್ರಮುಖರು ಈಚೆಗೆ ಕೆಲ ವರ್ಷಗಳಿಂದ ನಮ್ಮ ದೇಶದಲ್ಲಿ ರೂಪುಗೊಳ್ಳುತ್ತಿರುವ ಸಂಕುಚಿತ ಪ್ರಾಂತೀಯತೆಯ ಕಡೆಗೆ ಸಾರ್ವಜನಿಕ ಗಮನವನ್ನು ಸೆಳೆದಿದ್ದಾರೆ.

ಕಡಿಮೆಯೆಂದರೆ ೧೯೩೩ ರಿಂದಲೂ ಈ ಭಾವನೆಯ ಬೆಳವಣಿಗೆಯನ್ನು ನಾನು ಲಕ್ಷಿಸಿದ್ದೇನೆ. ಮುಂದೆ ಗಾಂಧೀ ಸೇವಾ ಸಂಘದ ಅಧ್ಯಕ್ಷನಾದ ನಂತರ ಅದನ್ನು ಹತ್ತಿರದಿಂದ ಅಭ್ಯಸಿಸುವ ಹೇರಳ ಅವಕಾಶ ಸಿಕ್ಕಿತ್ತು. ೧೯೩೮ರಲ್ಲಿ ದೇಲಂಗ (ಓಡಿಶಾ)ದಲ್ಲಿ ಸೇರಿದ ಸಂಘದ ಸಮ್ಮೇಲನದಲ್ಲಿ ನನ್ನ ಸೂಚನೆಯನ್ವಯ, ಗಾಂಧೀಜಿಯ ಬೆಂಬಲದಿಂದ ಈ ಪ್ರಶ್ನೆಯನ್ನು ಸ್ವಲ್ಪ ಮಟ್ಟಿಗೆ ಚರ್ಚಿಸಿದ್ದುಂಟು. ಶ್ರೀ. ರಾಜೇಂದ್ರ ಪ್ರಸಾದ, ಡಾ ಪ್ರಫುಲ್ಲ ಘೋಷ ಹಾಗು ಶ್ರೀ. ಶಂಕರರಾವ ದೇವ ಇವರು ಚರ್ಚೆಯಲ್ಲಿ ಭಾಗ ವಹಿಸಿದ್ದರು ಸಮ್ಮೇಲನ ಈ ಕೆಳಗಿನ ಗೊತ್ತುವಳಿಯನ್ನು ಅಂಗೀಕರಿಸಿತ್ತು.

“ದೇಶದಲ್ಲಿ ಸಂಕುಚಿತ ಪ್ರಾಂತೀಯತೆಯ ದುಷ್ಟ ಭಾವನೆಗಳು ಹಬ್ಬುತ್ತಿರುವದನ್ನು ಸಂಘ ವಿಷಾದದಿಂದ ಗಮನಿಸಿದೆ. ಪ್ರಾಂತೀಯ ಪ್ರಶ್ನೆಗಳಲ್ಲಿ ಸಂಘದ ಸದಸ್ಯರ ಕರ್ತವ್ಯ ಜಾತೀಯತೆಯ ವಿಷಯದಲ್ಲಿದ್ದಂತೆಯೆ ಇದೆಯೆಂದು ಈ ಸಮ್ಮೇಲನದ ಅಭಿಪ್ರಾಯ ಅರ್ಥಾತ್, ವಿವಿಧ ಪ್ರಾಂತಗಳ ಹಾಗು ಭಾಷೆಗಳ ಜನರಲ್ಲಿ ಪರಸ್ಪರ ಪ್ರೀತಿಯನ್ನು ಅಭಿವೃದ್ಧಿಗೊಳಿಸಬೇಕು. ಹಿಂದುಸ್ತಾನವೆಲ್ಲ ಒಂದು ಮತ್ತು ಪ್ರತಿಯೊಬ್ಬ ಹಿಂದೀಯನಿಗೂ ಬೇಕಾದ ಪ್ರಾಂತದಲ್ಲಿ ನೆಲಸಿದರೂ ನಾಗರಿಕ ಹಕ್ಕುಗಳುಂಟೆಂದು ಈ ಸಮ್ಮೇಲನ ಅಭಿಪ್ರಾಯಪಡುತ್ತದೆ. ಅವನಾಗಲಿ ಅವನ ಪೂರ್ವಜರಾಗಲಿ ಇನ್ನೊಂದು ಪ್ರಾಂತದಿಂದ ಬಂದು ನೆಲಸಿದವರೆಂಬ ಕಾರಣದಿಂದ ಅವನ ಈ ಹಕ್ಕುಗಳನ್ನು ಅಪಹರಿಸುವದಾಗಲಿ ಅವನ ವಿರುದ್ಧ ಪಕ್ಷಪಾತ ಮಾಡುವದಾಗಲಿ ಸಲ್ಲದು ಆದರೆ, ತಾವು ಯಾವ ಪ್ರಾಂತದಲ್ಲಿ ನೆಲಸಿರುವರೋ ಆ ಪ್ರಾಂತದ ಜನಜೀವನಗಳಲ್ಲಿ ಸಂಪೂರ್ಣ ಸಮರಸರಾಗಿ, ಅವರ ಸುಖದುಃಖಗಳಲ್ಲಿ ಪಾಲುಗಾರರಾಗಿ, ಆ ಪ್ರಾಂತದ ಅಭಿವೃದ್ಧಿ, ಹಿತಸಾಧನೆ, ಸುಖಗಳಿಗಾಗಿ ಅದೇ ಪ್ರಾಂತದ ಜನರಂತೆ ದುಡಿಯುವದು ಹೊರಗಿಂದ ಬಂದು ನೆಲಸಿದವರ ಕರ್ತವ್ಯ.”

ಸ್ವತಃ ನನಗೆ, ಭಾಷಾನ್ವಯ ಪ್ರಾಂತರಚನೆ ಮತ್ತು “ಅಲ್ಪಸಂಖ್ಯಾಕರ” ಭಾಷಾತ್ಮಕ ಹಕ್ಕುಗಳನ್ನು ಕುರಿತ ಕರಾಚಿ ಗೊತ್ತುವಳಿ ಅಷ್ಟೇನೂ ಜಾಣತನದ್ದೆಂದು ಎಂದೂ ಅನಿಸಿದ್ದಿಲ್ಲ ವ್ಯವಹಾರ್ಯವಾದಷ್ಟು ಮಟ್ಟಿಗೆ ಒಂದೇ ಭಾಷೆಯನ್ನಾಡುವ ಜನರನ್ನೆಲ್ಲ ಒಂದೇ ಆಡಳಿತ ಘಟಕದಲ್ಲಿ ಕೂಡಿಸಬೇಕೆಂಬ ಮಾತು ಬೇರೆ, ಅನೇಕ ಭಾಷೆಗಳನ್ನೊಳಗೊಂಡ ಪ್ರಾಂತಗಳೇ ಬೇಡೆಂಬ ಮಾತು ಬೇರೆ. ಮೊದಲನೆಯದು ಜನರಿಗೂ ಆಡಳಿತ ಯಂತ್ರಕ್ಕೂ ಅನುಕೂಲವಾಗಿ ಸ್ವೀಕಾರಾರ್ಹವಾಗಿದೆ. ಎರಡನೆಯದು ಬೇಕೆಂದು ಹಟಹಿಡಿಯುವದು ಹಾಗಿದೆಯೆಂದು ಹೇಳಲಾಗದು. ಅದರಿಂದ ಭೇದಬುದ್ಧಿ ಬೆಳೆಯುವದು. ಮುಖ್ಯ ಭಾಷೆಯ ಹಕ್ಕುಗಳಿಗೆ ಭಂಗ ಬಾರದಂತೆ ಅನೇಕ ಭಾಷಾ ಪ್ರಾಂತಗಳನ್ನು ನಡೆಸಿಕೊಂಡು ಹೋಗುವದು ಸರ್ವಥಾ ಅಸಾಧ್ಯವೆಂದಾಗಲಿ ಅನನುಕೂಲವೆಂದಾಗಲಿ ಹೇಳಬರುವದಿಲ್ಲ. “ಒಂದು ಭಾಷೆ ಒಂದು ಪ್ರಾಂತ” ಎಂಬ ಛಲದಿಂದ ಅದರ ಪುರಸ್ಕರ್ತರು ಅದನ್ನು ಸಾಧಿಸುವದರಲ್ಲಿರುವ ತೊಡಕುಗಳನ್ನ ನಿವಾರಿಸಲು ಒಂದು ಪ್ರಾಂತದಿಂದ ಇನ್ನೊಂದು ಪ್ರಾಂತಕ್ಕೆ ಪ್ರಜಾ ಸ್ಥಾನಾಂತರವಾಗುವಂತೆ ಬಲಾತ್ಕಾರ ಮಾಡಲಿಕ್ಕಿಲ್ಲೆಂದು ಯಾರು ಹೇಳಬಲ್ಲರು? ವಾತಾವರಣದಲ್ಲಿ ದುಷ್ಟತನ ಹಬ್ಬಿದಾಗ ಅದು ಸೀಮಿತವಾಗಲಾರದು ಅವಿಷ್ಟವಾಗುತ್ತದೆ.

ತನ್ನ ಭಾಷೆಗಾಗಲಿ ಲಿಪಿಗಾಗಲಿ ಸರಕಾರದ ಅಂಗೀಕಾರ ದೊರಕುವಂತೆ ಮಾಡಲು ಯಾವುದೊಂದು ಗುಂಪಿಗೆ ಇರುವ ಅಧಿಕಾರಕ್ಕೆ ಕೂಡ ವಿಶಾಲ ದೃಷ್ಟಿಯಿಂದ ಅರ್ಥ ಹಚ್ಚಬೇಕು ಮಾತೃಭಾಷೆಯಲ್ಲಿ ಶಿಕ್ಷಣ ದೊರಕಬೇಕೆನ್ನುವದು ಶೈಕ್ಷಣಿಕ ದೃಷ್ಟಿಯಿಂದ ಯೋಗ್ಯವಾದ ಪ್ರಮೇಯವೇ. ಆದರೆ ವರ್ಧಾದಲ್ಲಿ ವಾಸಿಸುತ್ತಿರುವ ನಾನು ನನ್ನ ಮಕ್ಕಳ ವಿದ್ಯಾಭ್ಯಾಸಕ್ಕೆ ಗುಜರಾತಿ ಭಾಷೆಯ ಮೂಲಕವೇ ವ್ಯವಸ್ಥೆಯಾಗಬೇಕೆಂದು ಹಟ ತೊಡಬಹುದೆ? ಅಂಥ ಹಕ್ಕನ್ನು ಸರಕಾರ ಅಂಗೀಕರಿಸಲಾರದೆಂದು ನಾನು ಖಂಡಿತವಾಗಿ ಹೇಳಬಲ್ಲೆ. ಬದಲಿಗೆ, ನನ್ನ ಮಕ್ಕಳು ಗುಜರಾಥಿ ಕಲಿಯಲಿಬಿಡಲಿ, ಪ್ರಾಂತಿಕ ಭಾಷೆಯಾದ ಮರಾಠಿಯನ್ನು ಕಲಿತೇತೀರಬೇಕೆಂದು ಸರಕಾರ ಒತ್ತಾಯ ಪಡಿಸಬಲ್ಲದು. ನಾನು ನನ್ನ ಮಕ್ಕಳಿಗೂ ಗುಜರಾಥಿ ಕಲಿಸಿದರೆ ಸರಕಾರ ಅದನ್ನು ತಡೆಯಲಾರದು. ಆದರೆ ಅದು ತಾನು ಗುಜರಾಥಿ ಕಲಿಸುವ ಹೊಣೆ ಹೊರಲಾರದು. ಎಲ್ಲ ಶಿಕ್ಷಣವನ್ನೂ ಗುಜರಾಥಿಯಲ್ಲೆ ಕೊಡಿಸುವ ಮಾತಂತೂ ದೂರ ಉಳಿಯಿತು. ತದ್ವಿರುದ್ಧವಾಗಿ, ಅನ್ಯಪ್ರಾಂತದಿಂದ ಬಂದು ನೆಲಸಿದವನು, ಸುಮಾರು ೨೦ ವರ್ಷಗಳೊಳಗೆ, ಸ್ಥಾನಿಕ ಭಾಷೆಯನ್ನು ತನ್ನದಾಗಿ ಮಾಡಿಕೊಳ್ಳಲೇಬೇಕೆಂದು ಅಪೇಕ್ಷಿಸುವ ಅಥವಾ ಒತ್ತಾಯ ಕೂಡ ಮಾಡುವ ಹಕ್ಕು ಸರಕಾರಕ್ಕಿದೆ.

ವರ್ಧಾ, ಕಿ. ಘ. ಮಶ್ರುವಾಲಾ
೧೦—೪—೪೮

ಕುರುಕ್ಷೇತ್ರದಲ್ಲಿ ವಿನೋಬಾ

೧೯೪೮ ಎಪ್ರಿಲ ೮ ಕ್ಕೆ ಕುರುಕ್ಷೇತ್ರ ಶಿಬಿರದಲ್ಲಿ ಶ್ರೀ ವಿನೋಬಾ ಇವರು ಭಾಷಣ ಮಾಡಿದರು. ಸಭಿಕರನ್ನು ದ್ದೇಶಿಸಿ ಭಾಷಣ ಮಾಡುವ ಮೊದಲು ಅವರು ಪಂಡಿತ ಜವಾಹರಲಾಲರೊಡನೆ ಮತ್ತು ತಾಪ್ರೊಬ್ಬರೆ ಶಿಬಿರದ ಸುತ್ತೆಲ್ಲ ಅಡ್ಡಾಡಿ ಬಂದರು ಅವರು ಮಾಡಿದ ಭಾಷಣವಿಂತಿದೆ ನಾನು ನಿಮ್ಮನ್ನು ಭೆಟ್ಟಿಯಾದೆ ಮತ್ತು ಭಕ್ತನು ದೇವರ ದರ್ಶನವನ್ನು ತೆಗೆದುಕೊಳ್ಳುವಂತೆ ನಾನು ನಿಮ್ಮ ದರ್ಶನ ತೆಗೆದುಕೊಂಡೆ ಪ್ರಾಚೀನ ಕಾಲದಿಂದ ಕುರುಕ್ಷೇತ್ರವು ಪುಣ್ಯ ಸ್ಥಳವು ಪರಮಾತ್ಮನು ಅರ್ಜುನನಿಗೆ ಭಗವದ್ಗೀತೋಪದೇಶವನ್ನು ಮಾಡಿದ ಸ್ಥಳವಿದು ಬ್ರಹ್ಮ ಪ್ರವರ್ತಿತ ಕರ್ಮಚಕ್ರವನ್ನು ಮುಂದೆ ಸಾಗಿಸದೆ ಇದ್ದ ಮನಜೀವನವು ಪಾಪದ ರೂಪ ಎಂಬ ವಿಷಯವನ್ನು ಭಗವದ್ಗೀತೆಯು ಒತ್ತಿ ಹೇಳಿದೆ. ಆದುದರಿಂದ ಊಟ ಮಾಡುವವರೆಲ್ಲ ಕೆಲಸಮಾಡಲಿಕ್ಕೆ ಬೇಕಾದುದು ಅವಶ್ಯ. ಇಲ್ಲಿರುವ ಜನರು ಅನೇಕ ತಿಂಗಳಿಂದ ಪುಕ್ಕಟೆ ಸೇವಾ ಪಡೆಯುತ್ತಿರುವರು ಪ್ರಾರಂಭದಲ್ಲಿ ಇದರ ಹೊರತು ಕದಾಚಿತ್ ನಿರ್ವಾಹವಿರಲಿಕ್ಕಿಲ್ಲ. ಆದರೆ ಇದೇ ಪದ್ಧತಿಯನ್ನು ಮುಂದುವರಿಸಿದ್ದಾದರೆ ಅದರಿಂದ ಕೊಡುವವನಿಗೂ ಪುಣ್ಯವಿಲ್ಲ ತಕ್ಕೊಳ್ಳುವವರದೂ ಕಲ್ಯಾಣವಾಗದು ಜನರು ಬೀಸಿದ ಹಿಟ್ಟನ್ನೇ ತೆಗೆದುಕೊಳ್ಳುತ್ತಿರುವರು. ಹಿಟ್ಟನ್ನು ತೆಗೆದುಕೊಳ್ಳದೆ ಧಾನ್ಯ ತೆಗೆದುಕೊಂಡು ನೀವೇ ಬೀಸಿಕೊಳ್ಳಿರೆಂದು ನಾನು ಹೇಳಬಯಸುತ್ತೇನೆ ಅದರಿಂದ ತಾಜಾ ಹಿಟ್ಟು ನಿಮಗೆ ಸಿಕ್ಕುವದು ಮತ್ತು ಸಾರ್ವಜನಿಕ ಹಣದ ಉಳಿತಾಯವೂ ಆಗುವದು. ಗಿರಣಿಯಲ್ಲಿ ತಯಾರಾದ ಹಳೆಯ ಹಿಟ್ಟಿಗಿಂತ ಬೀಸುಕಲ್ಲಿನಲ್ಲಿ ಬೀಸಿದ ತಾಜಾ ಹಿಟ್ಟು ಹೆಚ್ಚು ಪೌಷ್ಟಿಕವಾದುದು ಗುರಗಾಂವದಲ್ಲಿ ಒಟ್ಟಬ್ಬರು ಹೆಣ್ಣು ಮಕ್ಕಳು ಬೀಸುವದನ್ನು ನೋಡಿದೆ, ನನಗೆ ಸಂತೋಷವಾಯಿತು, ಅಲ್ಲಿದ್ದ ಹೆಣ್ಣು ಮಕ್ಕಳಿಗೆ ನಾನು ಈ ವಿಷಯವನ್ನು ಹೇಳಿದೆ, ನೂರರಷ್ಟು ಬೀಸೂಕಲ್ಲುಗಳನ್ನು ಕೊಡಿರೆಂದು ಅವರು ನನಗೆ ಬಿನ್ನವಿಸಿದರು. ಕುರುಕ್ಷೇತ್ರದಲ್ಲಿಯೂ ನೀವು ಬೀಸುವದನ್ನು ಪ್ರಾರಂಭಿಸಿರಿ.

ಕುರುಕ್ಷೇತ್ರದಲ್ಲಿಯ ಔದ್ಯೋಗಿಕ ಶಾಖೆಯನ್ನೂ ನಾನು ಸಂದರ್ಶಿಸಿದೆ ಒಂದು ಗಾಣ ತಿರುಗುತ್ತಿರುವದನ್ನು ನಾನು ನೋಡಿದೆ. ಪ್ರತಿಯೊಬ್ಬರು ಒಂದು ತೊಲಿಗಿಂತ ಹೆಚ್ಚು ಎಣ್ಣೆಯನ್ನು ತಿನ್ನದಿದ್ದರೂ ಒಂದು ಗಾಣವಲ್ಲ ಬಹಳಾದರೆ ೨೦೦೦ ಜನರಿಗೆ ಸಾಕಾಗುವಷ್ಟು ಎಣ್ಣೆಯ ಹೊರಡಬಹುದು. ಆದರೆ ಕುರುಕ್ಷೇತ್ರದಲ್ಲಿಯ ಜನಸಂಖ್ಯೆ ಸುಮಾರು ಎರಡು ಲಕ್ಷವಿದೆ. ಆದುದರಿಂದ ನೂರಕ್ಕಿಂತ ಕಡಿಮೆಯಲ್ಲದಷ್ಟು ಗಾಣಗಳು ಇಲ್ಲಿನಡೆಯಲು ಅವಕಾಶವಿದೆ. ಈ ಪರಿಸ್ಥಿತಿಯಲ್ಲಿ ಒಂದು ಗಾಣ ತಿರುಗುವದೆಂದರೆ ಕೇವಲ ಪ್ರಾರಂಭ ಹೇಳಬಹುದು

ಹರಕು ಬಿಂದಿಯನ್ನು ಜನರು ನನಗೆ ತೋರಿಸಿದರು. ನೂಲು ತೆಗೆಯಬಲ್ಲಿರೊ ಎಂದು ನಾನವರಿಗೆ ಕೇಳಿದೆ. ನೂಲಲು ಸಿದ್ಧರಿದ್ದರೆ ನಿಮ್ಮ ಬಟ್ಟೆಗಳೆ ನಿಮಗೆ ದೊರೆಯುವವು. ಈ ರೀತಿ ಜನ ತಮಗೆ ಬೇಕಾದ ಖಾದಿ ವಸ್ತ್ರಗಳನ್ನು ಸಿದ್ಧಪಡಿಸಿದ್ದಾದರೆ ಸರಕಾರದ ಮೇಲಿದ್ದ ಭಾರವು ಬಹಳಮಟ್ಟಿಗೆ ಕಡಿಮೆಯಾಗುವದು. ಸಾವಿರಾರು ಜನರು ಉತ್ಪಾದನೆಯ ಯಾವ ಕಾರ್ಯವನ್ನೂ ಮಾಡದೆ ಹೋದರೆ ದೇಶವು ಅವರಿಗೆ ಆಹಾರ ಮತ್ತು ಇತರ ಅವಶ್ಯಕ ಪದಾರ್ಥಗಳನ್ನು ಪೂರೈಸಲು ಸಮರ್ಥವಾಗಲಾರದು ಆದುದರಿಂದ ಜೀವನಕ್ಕೆ ಅವಶ್ಯವಾದ ಕಾರ್ಯವನ್ನು ಮಾಡಲಿಕ್ಕೆ ನೀವು ಸಿದ್ಧರಾಗುವದು ಕರ್ತವ್ಯವಾಗಿದೆ

ಸಮಸ್ಯಾತ್ರಯ

[ಈ ಕೆಳಗೆ ಕೊಟ್ಟಿರುವದು ೧೫—೩—೪೮ ರಂದು ಶ್ರೀ ವಿನೋಬಾ ಅವರು ಸೇವಾಗ್ರಾಮ ಸಮ್ಮೇಲನದ ಬಹಿರಂಗಾಧಿವೇಶನದಲ್ಲಿ ಮಾಡಿದ ಪ್ರಾರಂಭಿಕ ಭಾಷಣದ ಒಂದಂಶದ ಸಂಕ್ಷೇಪಾನುವಾದ—ಸಂ. ಹ.]

ನನ್ನ ಮೊದಲನೆ ಸಮಸ್ಯೆಯನ್ನು ಅಧ್ಯಕ್ಷರು (ಡಾ ರಾಜೇಂದ್ರ ಪ್ರಸಾದರು) ತಮ್ಮ ಪ್ರಾರಂಭ ಭಾಷಣದಲ್ಲಿಯೆ ಪ್ರಸ್ತಾವಿಸಿದ್ದಾರೆ. ನಮ್ಮ ಈ ಮಹಾ ಭೂಮಿ ಸ್ವಾತಂತ್ರ್ಯ ಸಂಪಾದನೆಯಾದೊಡನೆ ಇಷ್ಟು ಹೀನ ಸ್ಥಿತಿಗೆ ಹೇಗೆ ಇಳಿಯಿತು? ಜಗತ್ತಿನ ಇತರ ಭಾಗಗಳಲ್ಲಿಯೂ ಹೀಗೆಯೆ ಆಗಿದೆ; ಇದೆಲ್ಲ ಮಹಾ ಯುದ್ಧದ ಫಲ ಎಂದು ಕೆಲವರು ಸಮಾಧಾನ ಹೇಳಲು ಹವಣಿಸುತ್ತಾರೆ. ಆದರೆ ಈ ಸಮಾಧಾನ ಸಾಲದು, ಏಕೆಂದರೆ ನಾವು ಸ್ವಾತಂತ್ರ್ಯ ಸಂಪಾದನೆಗೆ ಉಪಯೋಗಿಸಿದ ಸಾಧನಗಳು ಬೇರೆ ದೇಶಗಳು ಬಳಸಿದವುಗಳಿಗಿಂತ ಭಿನ್ನವಾಗಿದ್ದವೆಂದು ನಾವು ಹೇಳಿಕೊಳ್ಳುತ್ತೇವೆ; ನಾವು ಆ ಸಾಧನವನ್ನು ಪ್ರಯೋಗಿಸುವದರಲ್ಲಿ ದೌರ್ಬಲ್ಯವನ್ನ ತೋರಿದ್ದರೂ ನಮಗೆ ಅದು ವಿಜಯವನ್ನು ತಂದುಕೊಟ್ಟಿದೆಯೆಂದೂ ಅನ್ನುತ್ತೇವೆ. ನಮ್ಮ ಈ ವಾದವನ್ನು ಜಗತ್ತು ಅಂಗೀಕರಿಸಿದೆ. ಹೀಗಿರುವಾಗ ನಾವಿಷ್ಟು ಹೀನತನಕ್ಕೆ ಅದೂ ಇಷ್ಟು ಬೇಗ ಹೇಗೆ ಇಳಿದೆವು? ಇದೀಗ ಸಮಸ್ಯೆ. ನಾನು ಇದಕ್ಕೆ ಸರಿಯಾದ ಉತ್ತರವನ್ನು ಹುಡುಕಿಯೇ ಹುಡುಕಿದೆ. ಆದರೆ ನನಗೆ ಯಶಸ್ಸು ಸಿಕ್ಕಲಿಲ್ಲ. ನಮಗೆ ಕಾರಣ ತಿಳಿದರೆ ಪರಿಹಾರವನ್ನು ಹುಡುಕುವ ವಿಚಾರ ಮಾಡಬಹುದು.

ನನ್ನ ತಲೆಗೆ ಹೊಕ್ಕಿದ್ದ ಎರಡನೆ ಸಮಸ್ಯೆಯೆಂದರೆ ಪ್ರಾಂತೀಯತೆಯ ಬೆಳವಣಿಗೆ ನಾನು ಓದಿದ ಸಂಸ್ಕೃತ ಸಾಹಿತ್ಯದಲ್ಲಿ ಎಲ್ಲೆಲ್ಲಿ ದೇಶಭಕ್ತಿಯ ಭಾವನೆಗಳು ಅಭಿವ್ಯಕ್ತವಾಗಿವೆಯೋ ಅಲ್ಲೆಲ್ಲ “ದುರ್ಲಭಂ ಭಾರತೇ ಜನ್ಮ” (ಭಾರತದಲ್ಲಿ ಜನ್ಮ ದೊರಕುವದೇ ದುರ್ಲಭ) ಎಂಬ ಅಭಿಪ್ರಾಯ ಸೂಚಿಸಲ್ಪಟ್ಟಿದೆ. ಬಂಗಾಲದಲ್ಲೋ, ಮಹಾರಾಷ್ಟ್ರದಲ್ಲೋ, ಗುರ್ಜರ ದೇಶದಲ್ಲೋ, ಇನ್ನಾವ ಪ್ರಾಂತದಲ್ಲೋ ಜನ್ಮ ದೊರೆಯುವದು ದುರ್ಲಭವೆಂದು ಎಲ್ಲಿಯೂ ಹೇಳಲ್ಪಟ್ಟಿಲ್ಲ ಈ ಸಾಹಿತ್ಯ ರೇಲ್ವೆ, ಟಪಾಲು ಮೊದಲಾದ ಯಾವ ಆಧುನಿಕ ಸಾಧನ ಕೂ ಇಲ್ಲದಿದ್ದ ಕಾಲಕ್ಕೆ ಸೇರಿದ್ದು. ಆ ಪ್ರಾಚೀನ ಕಾಲದಲ್ಲಿಕೂಡ, ಜನರು ಭಾರತವೆಲ್ಲ ಒಂದು, ಅಲ್ಲಿ ಜನ್ಮ ತಳೆಯುವದು ದುರ್ಲಭಯೋಗವೆಂದು ಬಗೆಯುತ್ತಿದ್ದರು. ಆ ಮಹಾ ಭೂಮಿಯನ್ನು ಬಂಧಮುಕ್ತಗೊಳಿಸುವದಕ್ಕಾಗಿ ನಾವೆಲ್ಲ ಹೋರಾಡಿದೆವು. ಅದರಲ್ಲಿ ಪ್ರತಿಯೊಂದು ಪ್ರಾಂತದ ಜನ ಒ ಸಹಕರಿಸಿದರು. ಅಂದ ಮೇಲೆ ಸ್ವಾತಂತ್ರ್ಯ ಸಿಕ್ಕೊಡನೆ ಪ್ರಾಂತೀಯತೆ ದಿನದಿನವೂ ಬಲಿಷ್ಠವಾಗುತ್ತಿರುವದೇಕೆ? ಅದನ್ನು ತಡೆಯುವ ಬಗೆ ಹೇಗೆ? ಏಕೆಂದರೆ, ಅದನ್ನ ಹಿಡಿತದಲ್ಲಿಟ್ಟುಕೊಳ್ಳುವದು ನಮ್ಮಿಂದಾಗದಿದ್ದರೆ, ಹಿಂದೂ ಮುಸ್ಲಿಂ ವಿವಾದದಿಂದೊದಗಿದ ಗಂಡಾಂತರಗಳನ್ನೆ ಇದೂ ಉಂಟು ಮಾಡದಿರದು.

ಮೂರನೆ ಮಹಾ ಪ್ರಶ್ನೆ ಸಾಧನಶುದ್ಧಿಯದು. ಹಿಂದುಸ್ಥಾನದಂಥ ದೊಡ್ಡ ದೇಶದಲ್ಲಿ ಎಲ್ಲರೂ ಒಪ್ಪುವಂಥ ಒಂದೇ ಧ್ಯೇಯವಿರುವದು ಶಾಧ್ಯವೇ ಎಂಬ ಬಲುಗಾಲದಿಂದ ನಾನು ಶಂಕಿಸುತ್ತಿರುವೆ. ಬೇರೆ ಬೇರೆ ಧ್ಯೇಯಗಳನ್ನಿಟ್ಟುಕೊಂಡ ಬೇರೆ ಬೇರೆ ವಿಚಾರ ಪ್ರವೃತ್ತಿಗಳ ಗುಂಪುಗಳಿರುವದು ಅನಿವಾರ್ಯವಾದರೆ ಅವೆಲ್ಲವೂ ಒಂದು ವಿಷಯದಲ್ಲಾದರೂ— ಅಂದರೆ ತಮ್ಮ ವಿಚಾರಗಳ ಪ್ರಚಾರ ಮಾಡುವಾಗ ಅಸತ್ಯ ವಿಧಾನಗಳನ್ನೂ ಹಿಂಸಾತ್ಮಕ ಸಾಧನಗಳನ್ನೂ ಉಪಯೋಗಿಸತಕ್ಕದ್ದಲ್ಲವೆಂದಾದರೂ—ಒಪ್ಪಿಕೊಳ್ಳಬೇಕಾದುದು ಉಚಿತ ಅವಶ್ಯವಲ್ಲವೆ? ಬಾಪೂ ಅವರು ತಮ್ಮ ಜೀವಮಾನವೆಲ್ಲ ಸಾಧನದಂತೆ ಧ್ಯೇಯ ಎಂಬ ಮಾತನ್ನು ನಮಗೆ ಕಲಿಸಲು ಪ್ರಯತ್ನಿಸಿದರು. ಅಂದರೆ, ಸಾಧನಗಳು ಶುದ್ಧವೂ ಘನವೂ ಆಗಿರದಿದ್ದರೆ ನಮ್ಮ ಸಾಧ್ಯ ಅಥವಾ ಧ್ಯೇಯದಲ್ಲೂ ಆ ಗುಣಗಳಿರುವದು ಅಶಕ್ಯ. ಆದುದರಿಂದ ಯಾವುದಾದರೊಂದು ಗುಂಪು ತನ್ನ ಧ್ಯೇಯಗಳು ಘನವೂ ಉದಾತ್ತವೂ ಇವೆಯೆಂದು ಹೇಳಿಕೊಳ್ಳುತ್ತಿದ್ದರೆ, ಅದು ಅದಕ್ಕೊಪ್ಪುವ ಸಾಧನಗಳನ್ನೇ ಅರಿಸಿಕೊಳ್ಳುವದು ಕ್ರಮಪ್ರಾಪ್ತವಾಗುತ್ತದೆ. ಗಾಂಧೀಜಿಯ ಕೊಲೆಯನ್ನೆ ತೆಗೆದುಕೊಳ್ಳೋಣ. ಈ ಕೊಲೆಯ ಹಿಂದೆ ಒಂದು ದೊಡ್ಡ ಗುಂಪಿನ ಚಾಲನೆಯಿದೆ. ಅದು ಕೊಲೆಯ ಹಂಚಿಕೆಯನ್ನು ಸಿದ್ಧಗೊಳಿಸಿದ್ದಲ್ಲದೆ, ಅದು ನೆರವೇರಿದೊಡನೆ ಹಬ್ಬವನ್ನು ಆಚರಿಸುವ ವ್ಯವಸ್ಥೆಗಳನ್ನೂ ಮಾಡಿಟ್ಟಿತ್ತು. ಎಲ್ಲ ಹಂಚಿಕೆಗಳು ಎಷ್ಟು ಗುಟ್ಟಾಗಿ ನಡೆದಿದ್ದವೆಂದರೆ ನಮಗೆ ಅವುಗಳ ಸುಳಿವು ಕೂಡ ಹತ್ತಿರಲಿಲ್ಲ. ಈಗ ನಾವು ಯಾವುದೊಂದು ಗುಂಪನ್ನು ಕೈಗೊಂಡಿಸಿಕೊಳ್ಳದೇ ಶಾಸಕರಿಂದ ಸಾಧನಗಳನ್ನೇ ಉಪಯೋಗಿಸುವದಕ್ಕೆಂದು ಒಪ್ಪಿಕೊಳ್ಳದೆ ಹೋದರೆ, ಈ ಕೊಲೆಗಡುಕ ಗುಂಪೂ ನಮ್ಮ ಪ್ರಶಂಸೆಗೆ ಪಾತ್ರವಾಗದೇಕಿಲ್ಲವೆ? ತಮ್ಮ ಗುರಿಯನ್ನು ಸಾಧಿಸಲು ಬೇಕುಬೇಕಾದ ಸಾಧನಗಳನ್ನು ಉಪಯೋಗಿಸುವದು ಉಚಿತವೆಂದು ಅಂಗೀಕರಿಸಿದರೆ, ಯಾವುದೊಂದು ವಿಶಿಷ್ಟ ಧ್ಯೇಯ ಯೋಗ್ಯವೋ ಅಯೋಗ್ಯವೋ ಎಂದು ನಿಸ್ಸಂದಿಗ್ಧವಾಗಿ ನಿರ್ಣಯಿಸಬಲ್ಲವರಾರು? ಏಕೆಂದರೆ ಪ್ರತಿಯೊಬ್ಬನೂ ತನ್ನ ತನ್ನ ಧ್ಯೇಯ ಯೋಗ್ಯವೆಂದೇ ಭಾವಿಸುತ್ತಾನಲ್ಲವೆ? ಆದರೆ ನಾವೆಲ್ಲರೂ ನಮ್ಮ ಭಿನ್ನಭಿನ್ನ ಧ್ಯೇಯಗಳಿಗಾಗಿ ಅಸತ್ಯ ಹಾಗು ಹಿಂಸಾತ್ಮಕ ಸಾಧನಗಳನ್ನು ಉಪಯೋಗಿಸದಿರಲು ಒಪ್ಪಿಕೊಂಡರೆ, ದೃಢವಾದ, ಅಖಂಡವಾದ ಒಂದು ನೈತಿಕ ವ್ಯೂಹ ರಚಿತವಾದೀತು. ನಾವು ಕೆಲ ಕಾಲದವರೆಗೆ ಹೊಸ ಯೋಜನೆ, ಹೊಸ ವ್ಯವಸ್ಥೆ ಮೊದಲಾದ ಕಲ್ಪನೆಗಳನ್ನು ಬದಿಗಿರಿಸಿ, ನಮ್ಮ ಹೊಸ ಯೋಜನೆಗಳೂ ಧ್ಯೇಯಗಳೂ ಏನೇ ಇರಲಿ, ಅವುಗಳನ್ನು ಶುದ್ಧವಾದ ಸಾಧನಗಳಿಂದಲೇ ಸಾಧಿಸುವೆವೆಂದು ನಿರ್ಧರಿಸಿಕೊಳ್ಳೋಣ. ಇದಕ್ಕೆ ಸಮ್ಮತಿಯುಳ್ಳವರೆಲ್ಲರೂ ನಮ್ಮ ಸಹಕಾರ್ಯಕರ್ತರೇ ಸರಿ.

(೮ ನೇ ಪುಟದಿಂದ ಮುಂದರಿದುದು)

ವಾದಗಳಿಗೆ ಸಮರ್ಥನೆಗಳು ಸಿಗಬಹುದೆಂದು ಅವರು ಹೇಳುತ್ತಾರೆ. ದ್ವೇಷದ ನೆನಪುಗಳನ್ನು ಕಾಯ್ದಿಡಬಾರದೆಂಬದು ಉಚಿತವೇ ಆಗಿದ್ದರೂ ರಕ್ತಸಿಕ್ತ ವಸ್ತ್ರಗಳನ್ನು ಕಂಡಾಕ್ಷಣ ತಮ್ಮ ಮನಸ್ಸಿನಲ್ಲಿ ದ್ವೇಷಭಾವ ಉದ್ಭವಿಸಲಾರದು. ಬದಲಿಗೆ ತಮ್ಮಲ್ಲಿ ಗಾಂಧೀಜಿಯನ್ನು ಕುರಿತು ಕೃತಜ್ಞತೆ ಸ್ಫುರಿತವಾಗಿ ಅವರಂತೆ ತಾವೂ ಹೃದಯದಿಂದ ಎಲ್ಲ ದ್ವೇಷವನ್ನು ಹೊಡೆದೋಡಿಸಬೇಕೆಂಬ ಭಾವನೆಯುಂಟಾಗಬಹುದೆಂದು ಕಾಕಾ ಕಾಲೇಲಕರರು ಅಭಿಪ್ರಾಯಪಟ್ಟರು.

ರಕ್ತಸಿಕ್ತ ವಸ್ತ್ರಗಳು ಅಶುದ್ಧವೆಂದು ಹಿಂದೂಗಳ ಭಾವನೆಯಾಗಿದ್ದರೂ ವಸ್ತು ಸಂಗ್ರಹಾಲಯದಲ್ಲಿ ಮಲಿನ ಸ್ಥಿತಿಯಲ್ಲಿ ಅವನ್ನು ಕಾದಿಟ್ಟರೆ ತಪ್ಪಿಲ್ಲವೆಂದೂ ಭಾವೀ ಪೀಳಿಗೆಗಳು ಅದನ್ನು ಕಂಡಾಗ ಅವರಲ್ಲಿ ಗಾಂಧೀಜಿಯ ಬಗ್ಗೆ ಗೌರವ ಭಾವನೆ ಮೂಡಬಹುದೆಂದೂ ಅವರ ಅಂಬೋಣ.

ಒಂದು ದೃಷ್ಟಿಯಿಂದ ನೋಡಿದರೆ ಉದಾತ್ತ ಭಾವನೆಗಳನ್ನು ಜಾಗರಿಸುವಂಥ ಈ ಸಾಧನಗಳನ್ನು ಉಪಯೋಗಿಸುವ ದು ಅಪೇಕ್ಷಾರ್ಹವಲ್ಲೆಂದು ಅನಿಸುತ್ತಿದೆ. ಅದನ್ನೊಂದು ಬಗೆಯಾಗಿ ವಿಚಾರಿಸಿದರೆ, ಅಂಥವುಗಳನ್ನು ಉಪಯೋಗಿಸುವದರಿಂದ ಯಾವ ಹಾನಿಯೂ ಇಲ್ಲೆಂದೂ ತೋರುತ್ತದೆ.

ಶ್ರೀ ಕಾಕಾ ಸಾಹೇಬರ ಮನಸು ಇತ್ತಂಡವಾಗಿದೆ. ಈ ವಸ್ತ್ರಗಳ ದರ್ಶನದಿಂದ ದರ್ಶಕನ ಹೃದಯದಲ್ಲಿ ಕೊಲೆ ಪಾತಕನ ಪ್ರೇಮ ಉದ್ಭವಿಸುವದೆಂದೇನೂ ಅವರು ಸಾಧಿಸುವದಿಲ್ಲ. ಅದರಿಂದ ಕ್ರೋಧವೇ ಉತ್ಪನ್ನವಾಗುವ ಸಂಭವವಿದೆ ಏಕೆ, ಆ ವಸ್ತ್ರಗಳನ್ನು ನೋಡಿದನ್ನೆ ಕೊಲೆಗಡುಕನು ಬ್ರಾಹ್ಮಣನೆಂಬ ಅರಿವಿನಿಂದಲೇ ಅವನ ಮೇಲೆ ಮಾತ್ರವಲ್ಲ ಅವನ ಇಡಿ ಜಾತಿಯ ಮೇಲೆ ದ್ವೇಷ ಎದ್ದಲ್ಲವೆ?

ನನ್ನ ಮನಸ್ಸೇನೂ ಇತ್ತಂಡವಾಗಿಲ್ಲ ಆದರೆ ನನ್ನ ವಿನಮ್ರ ಅಭಿಪ್ರಾಯದಲ್ಲಿ, ಮನಸ್ಸು ಇತ್ತಂಡವಾದಾಗ, ಕೆಡುಕನ್ನು ಹಟ್ಟಿಸಲಾರದ ದಾರಿಯನ್ನೆ ಅನುಸರಿಸುವದು ಯೋಗ್ಯ.

ವರ್ಧಾ ಕಿ. ಘ. ಮಶ್ರುವಾಲಾ.
೧೩—೪—೪೮

ಹಿಮಾಚಲ ಪ್ರದೇಶದ ಹೊಸ ಪ್ರಾಂತ

೨೧ ಸಂಸ್ಥಾನಗಳ ಒಕ್ಕೂಟ

ಪೂರ್ವ ಪಂಜಾಬ ತಿಬೇಟ ಮತ್ತು ಕಾಶ್ಮೀರದಿಂದ ಸುತ್ತುವರಿಯಲ್ಪಟ್ಟ ೧೧ ಸಾವಿರ ಚದುರ ಮೈಲು ಇರುವ ೨೧ ಸಂಸ್ಥಾನಗಳನ್ನೊಳಗೊಂಡ ಹಿಮಾಚಲ ಪ್ರಾಂತವೊಂದು ಹೊಸದಾಗಿ ರಚಿಸಲ್ಪಟ್ಟಿತು. ಈ ಪ್ರದೇಶದ ಜನಸಂಖ್ಯೆ ೧೦ ಲಕ್ಷಕ್ಕಿಂತ ಹೆಚ್ಚಿಗಿದ್ದು ಇದನ್ನು ಸದ್ಯಕ್ಕೆ ಲೆಫ್ಟನೆಂಟ ಗವರ್ನರರ ಪ್ರಾಂತವೆಂದು ಪರಿಗಣಿಸಲಾಗುವದು. ಕೇಂದ್ರ ಸರಕಾರದವರು ಈ ಪ್ರಾಂತದ ಅಭಿವೃದ್ಧಿಗಾಗಿ ಸ್ವತಃ ಲಕ್ಷ ನೀಡುವರು. ಹಿಂದುಸ್ತಾನದ ಘಟನೆ ಸಿದ್ಧವಾಗುವ ವರೆಗೆ ಚೀಫ ಕಮಿಶನರ ಮುಖಾಂತರ ಆಡಳಿತವನ್ನು ಸಾಗಿಸಲಾಗುವದು. ಬೇರೆ ಒಕ್ಕೂಟಗಳಿಗಿಂತ ಇದು ಸ್ವಲ್ಪ ಭಿನ್ನವಾಗಿದೆ. ಬಾಹ್ಯ ಜಗತ್ತಿನಿಂದ ಬೇರ್ಪಡಿಸಲ್ಪಟ್ಟ ಈ ಭಾಗದಲ್ಲಿ ಭಾವಿಕತೆ ಅಂಧಶ್ರದ್ಧೆ ಮನೆಮಾಡಿದ್ದವು. ರಜಪೂತರು ಇದನ್ನ ಪ್ರವೇಶಿಸಿದನಂತರ ಗಾಯನ ನೃತ್ಯ ಮೊದಲಾದವು ಬೆಳೆಯುತ್ತಿವೆ.

ವ್ಯಾಪಾರ ಪ್ರಪಂಚ

ಮುಂಬಯಿ ಪೇಟೆ ಧಾರಣೆ

ಮುಂಬಯಿ ೨೮. ೩೦

ಬಂಗಾರ

[illegible]	೧೧೫—೧೨—೦
[illegible]	೧೧೩—೨—೦
[illegible]	೬೯—೪—೦

ಬೆಳ್ಳಿ

[illegible]	೧೩೯—೪—೦
[illegible]	೧೩೯—೧೨—೦
[illegible]	೧೩೯—೪—೦

ಎಣ್ಣೆ ಕಾಳುಗಳು

[illegible]	೧೬೧—೦—೦
[illegible]	೧೩೦—೬—೦
[illegible]	೩೬೦—೦—೦
[illegible] ಎಣ್ಣೆ	೧೫—೧೨—೦

ಶೇರುಗಳು

[illegible]	೫೩೫—೦—೦
ಮುಂಬಯಿ [illegible]	೧೧೨೩—೪—೦
[illegible]	೩೩೬—೦—೦
[illegible]	೫೧೨—೪—೦
[illegible]	೧೫೦—೦—೦
[illegible]	೩೩೧—೮—೦
[illegible]	೦೩೪—೦—೦
[illegible]	೩೩೦—೦—೦
[illegible]	೪೫೫—೧೨—೦
[illegible]	೫೪೩೦—೦—೦
[illegible]	೨೩೩—೦—೦
[illegible]	೬೯೩—೦—೦
[illegible]	೩೦೨—೮—೦
[illegible]	೧೪೪೨—೦—೦
[illegible]	೧೫೩—೮—೦
[illegible]	೧೩೫೭—೦—೦
[illegible]	೩೨೩—೦—೦
[illegible]	೨೦೦—೦—೦
[illegible]	೨೯—೩—೦
[illegible]	೩—೧—೦
[illegible]	೨—೧೧—೦
[illegible]	೧೩೨—೦—೦
[illegible]	೩೨—೦—೦
[illegible]	೨೫—೦—೦
[illegible] ([illegible])	೫೨೦—೪—೦
[illegible] ([illegible])	೨೦೦೫—೦—೦
[illegible]	೨೫೪—೦—೦
[illegible]	೧೧೧—೦—೦

ಅರಳೆ

[illegible]	೬೫೫—೮—೦
[illegible]	೬೩೨—೦—೦
[illegible]	೬೩೭—೪—೦

ಸಾಂಗಲಿ ಪೇಟೆ

ತಾ. ೧೫

[illegible]	೨೧೧—೨೧೯
[illegible]	೨೩೦—೨೬೦
[illegible]	೪೦—೬೩
[illegible]	೨೨೬—೨೩೭
[illegible]	೯೭೩೦

ಶಿವಮೊಗ್ಗ

ತಾ. ೨೧

ಶಿವಮೊಗ್ಗ [illegible] ಧಾರಣೆ [illegible] ೧ [illegible]—

[illegible] ನಂ. ೧ [illegible] ೧ ಕ್ಕೆ	೩೨—೩೪
,, ,, ೨	೩೦—೩೨
,, ,, ೩	೨೬—೨೮
[illegible]	೨೦—೨೨
[illegible]	೩೦—೩೩
[illegible]	೨೬—೨೮
[illegible]	೧೬—೧೯
[illegible]	೨೧
[illegible]	೩೩

[illegible]
[illegible]

ಹುಬ್ಬಳ್ಳಿ

[illegible]	೧	೪೦೩—೪೪೪
,,	೨	೦೩೫—೪೦೦
,,	೩	೪೬೨—೪೫೦
[illegible]	೧	೪೩೮—೪೫೦
,,	೨	೪೨೦—೪೩೦
[illegible]		೩೩೫ ೩೪೫
[illegible]		೩೨೦—೩೪೦
[illegible]		[illegible]
[illegible]		[illegible]

ಮೈಸೂರು ಘಟನಾ ಸಮಿತಿ ಉಪಸಮಿತಿಗಳ ನೇಮಕ

ತಾ. ೨೦ ರಂದು ಮೈಸೂರು ಘಟನಾಸಮಿತಿಯು ವಿವಿಧ ಉಪಸಮಿತಿಗಳಿಗೆ ಆದ ಚುನಾವಣೆಯ ಫಲಿತಾಂಶವನ್ನು ಅಧ್ಯಕ್ಷ ಶ್ರೀ ಟಿ. ಸುಬ್ರಹ್ಮಣ್ಯಂ ಅವರು ಪ್ರಸಿದ್ಧಗೊಳಿಸಿದರು.

ಘಟನಾ ಸಮಿತಿಯ ಉಪಾಧ್ಯಕ್ಷ ಪದಕ್ಕೆ ದಾವಣಗೆರೆಯ ಶ್ರೀ ಗಂಜಿ ವೀರಪ್ಪನವರು ಆರಿಸಲ್ಪಟ್ಟಿದ್ದಾರೆ.

ಆ ಮೇಲೆ ಮೇ ೩ ರ ವರೆಗೆ ಘಟನಾ ಸಮಿತಿ ಮುಂದುವರಿಸಲ್ಪಟ್ಟಿತು.

ವಿವಿಧ ಉಪಸಮಿತಿಗಳ ಸದಸ್ಯತ್ವ ಹೀಗಿದೆ:

ಮಾರ್ಗದರ್ಶನ ಸಮಿತಿ: ಶ್ರೀ ಕೆ. ಹನುಮಂತಯ್ಯ, ಬಿ. ಎಚ್. ಚಂದ್ರಶೇಖರಯ್ಯ, ಎಂ. ಡಿ. ರಾಮರಾವ, ಮಹಮ್ಮದ ವಾಲಿಲ್ಲಾ, ಎಚ್. ಸಿದ್ಧವೀರಪ್ಪ, ಟಿ. ಚನ್ನಯ್ಯ, ಕೆ. ಆರ್. ಮಾಧವರಾವ್.

ಗೃಹಸಮಿತಿ: ಎಚ್. ಆರ್. ಗುರು, ಎಂ. ವಿ. ಕೃಷ್ಣಪ್ಪ, ಎಂ. ಹನುಮಂತಯ್ಯ, ಶ್ಯಾಮಣ್ಣಗೌಡ, ಎಚ್. ವಿ. ಕೊರ್ಲನಾರಾಯಣ ಸೆಟ್ಟಿ.

ಅಧಿಕಾರ ಹಾಗು ಸಿಬಂದಿ ಸಮಿತಿ: ವಿ. ವೆಂಕಟಪ್ಪ, ಎಚ್. ಎಂ. ಮಲ್ಲಿಕಾರ್ಜುನಪ್ಪ, ಜಿ. ಚನ್ನಪ್ಪಗೌಡ, ಎಂ. ಸಿ. ನಂಜುಂಡಯ್ಯ, ಗೋವಿಂದದಾಸ.

ಮೂಲಭೂತ ಹಕ್ಕುಗಳ ಸಮಿತಿ: ಸಯ್ಯದ ಅಬ್ದುಲ ರಹಮಾನ, ಎಚ್. ಸಿ. ಲಿಂಗರೆಡ್ಡಿ, ಕೆ. ಹಿಂಗಾರಪ್ಪ, [illegible], ಡಿ. ಆರ್. [illegible], ಎಚ್. ರಂಗೇಗೌಡ, ಎಚ್. ಸಿ. ದಾಸಪ್ಪ, ಎ. ಜಿ. ರಾಮೇಗೌಡ, ಬಿ. ಎನ್. ಬೋರಣ್ಣ.

ಅಲ್ಪಸಂಖ್ಯಾತರ ಹಕ್ಕುಗಳ ಸಮಿತಿ: ಕೆ. ಸಿ. ರೆಡ್ಡಿ, [illegible], ಧೀರಪ್ಪ [illegible], ಆರ್. ಚೆನ್ನಿಗರಾಮಯ್ಯ, ಮಹಮದ ಹನೀಫ, ಎಂ. ಎಸ್. [illegible], ಎಚ್. ಬಿ. ಗುಂಡಪ್ಪಗೌಡ, ಟಿ. ಮರಿಯಪ್ಪ, [illegible], ಎಚ್. ಸಿದ್ದಯ್ಯ.

ಅರ್ಚಕರೇಕೆ ಗರ್ಭಗುಡಿ ಪ್ರವೇಶಿಸಬೇಕು

ಮಂದಿರ ಪ್ರವೇಶ ಕಾಯಿದೆ ಅನ್ವಯ ಮೊದಲನೆ ಖಟ್ಲೆ

ಮಂದಿರ ಪ್ರವೇಶ ಕಾಯಿದೆಯು ಅನ್ವಯಿಸುವ ಹರಿಜನರನ್ನೊಳಗೊಂಡು ಹಿಂದುಗಳೆಲ್ಲ ಮಂದಿರ ಪ್ರವೇಶಿಸಿ ದೇವರನ್ನು ಮುಟ್ಟಿ ಪೂಜೆ ಮಾಡಬಹುದೆ ಎಂಬ ಮಹತ್ವದ ಪ್ರಶ್ನೆಯು ವಿಚಾರಕ್ಕೆ [illegible] ಶ್ರೀ [illegible] ದೇವರ ಸಂಬಂಧದ ಖಟ್ಲೆಯಲ್ಲಿ ಶ್ರೀ [illegible] ಮುಂದೆ ಬಂದು ಅರ್ಚಕರ ಹೊರತು ಉಳಿದ ಯಾವ ಹಿಂದುಗಳೂ ಗರ್ಭಗುಡಿಯನ್ನು ಪ್ರವೇಶಿಸಿ ದೇವರನ್ನು ಮುಟ್ಟಬಾರದೆಂದು ಮಹತ್ವದ ತಾತ್ಕಾಲಿಕ ನಿರ್ಣಯವನ್ನು ಕೊಡಲಾಯಿತು. [illegible] ಮಂದಿರವನ್ನು ಪ್ರವೇಶಿಸಿ ದೇವರನ್ನು ಪೂಜೆ ಮಾಡಿದ್ದನ್ನು ವಿರೋಧಿಸಿ ಆ ಗುಡಿಯ [illegible] ಅರ್ಚಕರ ಹೊರತು ಬೇರೆ ಯಾರೂ ದೇವರನ್ನು ಮುಟ್ಟಬಾರದೆಂದು ಈ ದಾವೆಯನ್ನು [illegible] ಇದರ ವಿಚಾರಣೆಯಾಗಿ ಪ್ರತಿವಾದಿಗಳಿಗೆ ತಾತ್ಕಾಲಿಕ [illegible] ಮಾಡಲಾಯಿತು.



ಏಪ್ರಿಲ ೧೪ ಕ್ಕೆ ಮುಂಬಯಿ ಗವರ್ನರರ ಪತ್ನಿ ರಾಣಿ ಮಹಾರಾಜಸಿಂಗರು ಮಾಟುಂಗ (ಮುಂಬಯಿ) ದಲ್ಲಿ ಕೂಲಿಕಾರ ಹಿತ ಕೇಂದ್ರದ ಶಿಶು ಶಾಲೆಯನ್ನು ಉದ್ಘಾಟಿಸಿದರು.



ಕೆಲ ವಾರಗಳ ಹಿಂದೆ ಹಿಂದೀ ಸಾಮ್ಯವಾದಿ ಮುಂದಾಳಾದ ಜಯಪ್ರಕಾಶ ನಾರಾಯಣರು ಮದ್ರಾಸಿಗೆ ಹೋದಾಗ ತೆಗೆದ ಚಿತ್ರ.



ವಿಜಾಪುರದಲ್ಲಿ ಮಾನ್ಯ ಮೊರಾರಜಿಯವರು

ಹೋಮಗಾರ್ಡ್ಸ ದಳದ ಸಾಮೂಹಿಕ ವಂದನೆಯನ್ನು ಸ್ವೀಕರಿಸುತ್ತಿರುವರು



ಬ್ರಿಟನ್ನಿನ ಹೊಸ [illegible] ವಿಮಾನದ ಪಂಜರ: ೯೦ ಜನರನ್ನು ಹೊರಬಲ್ಲ ಈ ವಿಮಾನದಲ್ಲಿ ಪ್ರವಾಸಿಗರಿಗೆ ಸಿನೆಮಾ ತೋರಿಸುವ ವ್ಯವಸ್ಥೆಯಿದೆ. ವಿಮಾನದ ಭಾರ: ೧೫೩ ಟನ್.

ಇಂದಿನ ಕಾಶ್ಮೀರದ ಕೆಲ ನೆನಪು—ನೋಟಗಳು

(೩ ನೇ ಪುಟದಿಂದ ಮುಂದುವರಿದುದು)

ಕಾಯು ಮಾಡುತ್ತಲಿರುವರು. ಮತ್ತಿತರರು ತಮ್ಮ ಮನೆಗಳನ್ನು ಕಟ್ಟುತ್ತಲಿರುವರು. ಕಾಶ್ಮೀರ ಸರಕಾರವು ಅವರಿಗೆ ಬೇಕಾದ ಎಲ್ಲಾ ಸಹಾಯ ಕೊಟ್ಟಿರುವದು. ಸರ್ವಸ್ವವನ್ನೂ ಕಳಕೊಂಡಿರುವರಾದರೂ ತಮ್ಮ ದೇಶವನ್ನು ದರೋಡೆಗಾರರಿಂದ ಉಳಿಸಿಕೊಂಡು ತಮ್ಮ ದೇಶದ ಪುನರುಜ್ಜೀವನಕ್ಕಾಗಿ ಎಲ್ಲರೂ ಕರ್ತವ್ಯನಿರತರಾಗಿರುವದು ಒಂದು ದೃಶ್ಯ. ಮುಂದಕ್ಕೆ ಹೋದೆವು.

ಚರ್ಚ ಮತ್ತು ಒಂದು ಕಾನ್ವೆಂಟ ಲೂಟಿ

ಬಾರಾಮುಲ್ಲಾ ಪಟ್ಟಣವನ್ನು ಸೇರಿದೆವು. ಇಲ್ಲಿ ದರೋಡೆಗಾರರು ಮಾಡಿದ ಅತ್ಯಾಚಾರವನ್ನು ಹೇಳಲಸಾಧ್ಯ. ಬಾರಾಮುಲ್ಲಾದ ಜನಸಂಖ್ಯೆ ಸುಮಾರು ೨೫,೦೦೦ ಈಗ ಸಾಧಾರಣ ೭,೦೦೦ ಜನರಿರುವರು ಝೀಲಮ್‌ನದಿಯು ಈಪಟ್ಟಣದ ಮಧ್ಯದಲ್ಲಿ ಹಾದು ಹಾಗುತ್ತಿದೆ. ಅಲ್ಲಿದ್ದ ಒಂದು ಕ್ರೈಸ್ತ ದೇವಾಲಯ ಮತ್ತು ಕಾನ್ವೆಂಟನ್ನು ದರೋಡೆಗಾರರು ಲೂಟಿ ಮಾಡಿರುವರು. ಹಿಂದುಗಳ ಮೇಲೆ ದ್ವೇಷ ಹೊತ್ತ ಈ ದರೋಡೆಗಾರರು ಕ್ರೈಸ್ತದೇವಾಲಯವನ್ನು ನಾಶಮಾಡಿದ್ದರ ಕಾರಣವೇನಿರಬಹುದೆಂಬ ಆಲೋಚನೆ ನನಗೆ ಹುಟ್ಟಿತು. ಆಗ ಅಲ್ಲಿನ ನಿವಾಸಿಗಳಲ್ಲೊಬ್ಬನು ಕಾರಣ ಹೇಳಿದನು. ದರೋಡೆಗಾರರು ಅದಷ್ಟು ಲೂಟಿ ಮಾಡಿ ಸಿಕ್ಕಿದ್ದನ್ನು ಹೊತ್ತುಕೊಂಡು ಹೋಗಲು ಬಂದಿದ್ದರು. ಅವರು ಮಿಂಚುತ್ತಿದ್ದದ್ದೆಲ್ಲ ಬಂಗಾರ ಎಂದೆಣಿಸಿ ಆ ಕ್ರೈಸ್ತ ದೇವಾಲಯದ ಮೂರ್ತಿಗಳನ್ನೆಲ್ಲ ಒಡೆದು ಬಂಗಾರವನ್ನು ಹುಡುಕಿದರಂತೆ !! ಅವು ಬರೀ ಮಣ್ಣಿನ ಮೂರ್ತಿಗಳಾಗಿದ್ದವು. ಅತಿ ನಿರಾಶೆಯಾಯ್ತು— ಅಲ್ಲಿದ್ದ ಫೋಟೋಗಳನ್ನೆಲ್ಲ ಕಿತ್ತು ಅದರ ಹೊಳಪಿನ ಅಂಚುಕಟ್ಟುಗಳನ್ನು ಒಡೆದು ಚಿನ್ನ ಹುಡುಕಿದರು! ಚಿನ್ನ ದೊರೆಯಲಿಲ್ಲ. ಕ್ರೈಸ್ತಧರ್ಮ ಗ್ರಂಥದಲ್ಲಿ ಹೇಳಿರುವ ‘‘All that glitters is not gold’’ ಎಂಬ ಬೋಧನೆಯನ್ನು ಆ ಮೂರ್ತಿಗಳು ಈ ದುಷ್ಟ ದರೋಡೆಗಾರರಿಗೆ ಕಲಿಸಿದಂತಾಯ್ತು ಎಂದು ನಾನೇ ಮನಸ್ಸಿನಲ್ಲಿ ಅಂದುಕೊಂಡೆ. ಅವರ ಹೃದಯ ಇದರಿಂದಾದರೂ ಪರಿವರ್ತನೆಯಾದೀತೆ ?

ದುರಂತದ ಕತೆಗಳು

ಪಟ್ಟಣದೊಳಗೆ ಹೋದೆವು. ನೂರಾರು ಜನರು ಬಂದು ತಮ್ಮ ದುರಂತ ಕತೆಗಳನ್ನು ಹೇಳಿದರು. ದರೋಡೆಗಾರರು ಈ ಪಟ್ಟಣವನ್ನಾಕ್ರಮಿಸಿಕೊಂಡಿದ್ದ ನಾಲ್ಕೈದು ದಿನಗಳ ಚರಿತ್ರೆಯನ್ನು ಹೇಳಿದರು ಅತ್ಯಾಚಾರ ಈ ಮಟ್ಟ ಮೀರುವದ ಸಾಧ್ಯ. ನಗರದಿಂದೀಚೆಗೆ ಬಂದೆವು ಅಲ್ಲೆಲ್ಲ ದರೋಡೆಗಾರರು ಬಂದಿತ್ತ ಮೋಟಾರು, ಬಸ್ಸುಗಳು ಇನ್ನೂ ಬಿದ್ದಿವೆ. ನಮ್ಮ ಸೈನ್ಯದ ಶಾಖೆ ಆ ಪ್ರದೇಶದಲ್ಲೆಲ್ಲ ಇರುವದು. ಮುಂದಕ್ಕೆ ಮಹೋರಾ. ಚಿಕ್ಕ ಗ್ರಾಮ. ಅಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಒಂದು ದೊಡ್ಡ ಯಂತ್ರಾಲಯವಿದೆ. ಇದನ್ನು ದರೋಡೆಗಾರರು ಕೆಡಿಸಿದ್ದರು. ಶ್ರೀನಗರಕ್ಕೆ ವಿದ್ಯುಚ್ಛಕ್ತಿ ಇಲ್ಲಿಂದಲೇ ಹೋಗಬೇಕು. ಈಗ ಎಲ್ಲವೂ ಸರಿಯಾಗಿರುವದು. ಮಹೋರಾದಿಂದ ಊರಿಗೆ ಹೋಗುವ ರಸ್ತೆ ಪರ್ವತ ಸಾಲುಗಳ ಮಧ್ಯೆ ಹಾದುಹೋಗುವದು. ಆ ಪರ್ವತ ಸಾಲುಗಳ ಮೇಲೆಲ್ಲಾ ದರೋಡೆಗಾರರು ಇನ್ನೂ ಇರುವರು ಅಲ್ಲಿಂದ ಅವರು ಈ ರಸ್ತೆಯಲ್ಲಿ ಹೋಗುವ ವಾಹನ ಮತ್ತು ಜನರಿಗೆ ಗುಂಡಿನ ಸುರಿಮಳೆಗರೆಯುವರು. ನಾವು ಹೊರಡುತ್ತಲೇ ನಮ್ಮ ಡ್ರೈವರನಿಗೆ ಅಲ್ಲಿನ ಸೈನ್ಯಾಧಿಕಾರಿಯು ವೇಗವಾಗಿ ಹೋಗುವಂತೆ ಸೂಚನೆಯಿತ್ತನು. ನಮಗೆ ಏನೂ ತೊಂದರೆಯಾಗಲಿಲ್ಲ.

ಬ್ರಿಗೇಡಿಯರ ಸೇನ ನಮ್ಮನ್ನು ಸ್ವಾಗತಿಸಿದರು

ಊರಿಗೆ ಮಧ್ಯಾಹ್ನ ೧॥ ಗಂಟೆಗೆ ತಲಪಿದೆವು. ಊರಿಗೆ ಸಮೀಪ ಝೀಲಮ್ ನದಿಗೆ ಅಡ್ಡ ಇದ್ದ ದೊಡ್ಡ ಸೇತುವೆಯನ್ನು ದರೋಡೆಗಾರರು ಮುರಿದು ಹಾಕಿರುವರು ನಮ್ಮ ಸೈನಿಕರು ಒಂದು ತಾತ್ಕಾಲಿಕ ಸೇತುವೆ ಮಾಡಿರುವರು. ನಮ್ಮನ್ನು ಮೊದಲು ಬ್ರಿಗೆಡಿಯರ್ ಸೇನ್ ಬಂದು ಸ್ವಾಗತಿಸಿದರು ಊರಿ ಚಿಕ್ಕ ಗ್ರಾಮ. ಜನಸಂಖ್ಯೆ ೩೦೦೦ ಇದ್ದಿರಬೇಕು ಅಷ್ಟೆ. ಸುಮಾರು ೩೦೦ ಮನೆಗಳಲ್ಲಿ ಈಗ ೩ ಮಾತ್ರ ಉಳಿದಿವೆ! ಪಂಡಿತ ಜವಾಹರಲಾಲರನ್ನು ಹಿಂದೊಮ್ಮೆ ಕಾಶ್ಮೀರ್ ಸರಕಾರವು ಸೈದು ಮಾಡಿದ್ದಾಗ ಇಲ್ಲಿ ಒಂದು ಡಾಕ್ ಬಂಗ್ಲೆಯಲ್ಲಿ ಅವರನ್ನು ಒಂದು ದಿವಸ ಇಟ್ಟಿದ್ದರಂತೆ. ಆ ಡಾಕ್ ಬಂಗ್ಲೆ ಈಗ ಬೆಂಕಿ ನೆಲಸಮವಾಗಿರುವದು. ಈ ಪ್ರದೇಶದಲ್ಲಿ ಆಗಿಂದಾಗ್ಗೆ ಕಾಳಗವ ಗುತ್ತಲಿರುವದು ದರೋಡೆಗಾರರು ಸುತ್ತಮುತ್ತಲಿನ ಬೆಟ್ಟ ಸಾಲುಗಳಲ್ಲಿ ಅಡಗಿಕೊಂಡಿರುವರು ಹಗಲೆಲ್ಲ ನಮ್ಮ ಸೈನ್ಯದ ಚಟುವಟಿಕೆಗಳನ್ನು ನೋಡುತ್ತಾ ಇರುವರು ರಾತ್ರಿ ಕೆಳಗಿಳಿದು ಬಂದು ಗುಂಡು ಹಾರಿಸುವರು. ದುರ್ಬಿನುಗಳ ಸಹಾಯದಿಂದ ದರೋಡೆಗಾರರು ಬೆಟ್ಟದ ಮೇಲೆ ಕುಳಿತಿರುವದನ್ನು ನಾವು ನೋಡಿದೆವು ಅವರನ್ನು ಹತೆಗಟ್ಟಲು ಬೇಕಾದ ಎಲ್ಲಾ ಏರ್ಪಾಡುಗಳನ್ನು ಮಾಡಲಾಗಿದೆ. ಇಲ್ಲಿಯೂ ಭಾರತದ ಎಲ್ಲಾ ಪ್ರಾಂತಗಳಿಂದ ಬಂದ ನಮ್ಮ ಸೈನಿಕರಿರುವರು. ಅವರೊಡನೆ ಸಂತೋಷದಿಂದ ಸ್ವಲ್ಪ ಸಮಯ ಕಳೆದೆವು. ಮಧ್ಯಾಹ್ನದ ಊಟ ಅಲ್ಲೇ ಆಯ್ತು.

ನಮ್ಮ ಜವಣೆ, ಸೈನಿಕರ ಶಿಸ್ತು

ಬ್ರಿಗೆಡಿಯರ್ ಸೆನ್‌ರವರು ತುಂಬಾ ಅನುಭವಸ್ಥ ಯೋಧರು. ೩೭ ವರ್ಷ ಪ್ರಾಯ. ಅವರೊಡನೆ ಇರುವ ನಮ್ಮ ಇತರ ಸೈನ್ಯಾಧಿಕಾರಿಗಳೂ ಅವರಂತೇ ತುಂಬಾ ಉತ್ಸಾಹದಲ್ಲಿರುವರು. ನಮ್ಮ ಸೈನಿಕರ ಈ ಉತ್ಸಾಹವನ್ನು ಕಂಡು ನಮಗೆಲ್ಲರಿಗೂ ತುಂಬಾ ಹೆಮ್ಮೆಯಾಯಿತು. ಇಷ್ಟೇ ಅಲ್ಲ ಅವರಲ್ಲಿ ನಿಶ್ಚಲವಾದ ಶಿಸ್ತು ಕೂಡ ಇರುವದು ಇದಕ್ಕೊಂದು ನಿದರ್ಶನವಿದೆ. ಊರಿಯಿಂದ ಹಿಂತಿರುಗಿ ಬರುವಾಗ ಬೆಟ್ಟ ಏರಿ ಬರಬೇಕು. ಬಾರಾಮುಲ್ಲಾಕ್ಕೆ ಸಮೀಪ ಪೆಟ್ರೋಲು ಮುಗಿದು ಹೋಗಿ ನಮ್ಮ ಮೋಟಾರ ನಿಂತು ಹೋಯಿತು. ಸಾಯಂಕಾಲದ ಸಮಯ. ನಮ್ಮ ಮುಂದೆ ಹೋಗುತ್ತಿದ್ದ ಎರಡು ಮೋಟಾರುಗಳೂ ಮುಂದೆ ಸಾಗಿಬಿಟ್ಟವು. ಏನು ಮಾಡುವದೆಂದು ಯೋಚಿಸುತ್ತಿದ್ದಂತೆ ಬೇರೆಯೊಂದು ಮಿಲಿಟರಿ ಲಾರಿ ಎದುರಾಗಿ ಬರುತಿತ್ತು. ನಮ್ಮ ಜೊತೆಯಲ್ಲಿದ್ದ ಕೆಪ್ಟನ್ನರು ಅದನ್ನು ನಿಲ್ಲಿಸಿದರು. ಒಳಗಿನಿಂದ ಒಬ್ಬ ಸೈನಿಕ ಡ್ರೈವರು ಇಳಿದು ನಿಯಮ ರೀತಿಯಿಂದ ‘‘ಸೆಲ್ಯೂಟ’’ ಮಾಡಿದ ಕ್ಯಾಪ್ಟನರು ಪೆಟ್ರೋಲು ಕೇಳಿದರು ಟ್ಯಾಂಕಿನಲ್ಲಿ ೩೦ ಗೆಲನು ಪೆಟ್ರೋಲ ಇರುವದಾದರೂ ಒಂದು ತೊಟ್ಟು ಕೊಡಲಾಗುವದಿಲ್ಲವೆಂದನು ಆ ಸಿಪಾಯಿ. ಅವರ ಸಂಭಾಷಣೆ ಇದು—

ಕೆಪ್ಟನ್— ‘‘ನಾನು ಅಧಿಕಾರಿ. ನಿನ್ನನ್ನು ದಸ್ತಗಿರಿ ಮಾಡುವ ಅಧಿಕಾರ ಕೂಡ ನನಗಿದೆ. ನನ್ನ ಅಜ್ಞೆಯಂತೆ ೩ ಗೆಲನ್ ಪೆಟ್ರೋಲು ಕೊಡು ನಿನಗೆ ಬರವಣಿಗೆಯಲ್ಲಿ ನಾನು ಅಜ್ಞೆಯನ್ನು ಕೊಡುತ್ತೇನೆ ನಿನಗೇನೂ ತೊಂದರೆ ಬರುವದಿಲ್ಲ’’

ಸಿಪಾಯಿ— ‘‘ಹೌದು, ನೀವು ದಸ್ತಗಿರಿ ಮಾಡಿದರೆ ನನಗೇನೂ ಮಾಡಲಾಗುವದಿಲ್ಲ. ಆದರೆ ನನ್ನ ಕಂಪನಿ ಕಮಾಂಡರು ಒಂದು ತೊಟ್ಟು ಪೆಟ್ರೋಲು ಯಾರಿಗೂ ಕೊಡಕೂಡದೆಂದು ಕಟ್ಟಾಜ್ಞೆ ಇತ್ತಿರವರು. ಒಂದು ತೊಟ್ಟು ಪೆಟ್ರೋಲು ಕೊಡಲಾಗುವದಿಲ್ಲ’’

ನಮ್ಮವರ ಶಿಸ್ತಿಗೆ ಹೆಮ್ಮೆ ಎನಿಸಿತು

ಈ ಸಿಪಾಯಿ ಮದ್ರಾಸ್ ಪ್ರಾಂತದವನು. ಅವನ ಈ ನಿಶ್ಚಲ ಕರ್ತವ್ಯ ದಕ್ಷತೆ ಮತ್ತು ಶಿಸ್ತಿನ ನಿಯಮವನ್ನು ನೋಡಿ ನಮ್ಮ ತೊಂದರೆ ಏನಿದ್ದರೂ ಅವನ ಮೇಲೆ ನಮಗೆಲ್ಲಾ ತುಂಬಾ ಅಭಿಮಾನವುಂಟಾಯಿತು. ಅಷ್ಟರಲ್ಲಿ ಮುಂದೆ ಹೋಗುತ್ತಿದ್ದ ನಮ್ಮ ಮೋಟಾರು ನಮ್ಮನ್ನು ಹುಡುಕಿಕೊಂಡು ಬಂತು ಇದೊಂದು ಅಶ್ಚರ್ಯವಾದ ದೃಶ್ಯ. ಅನಂತರ ಒಂದು ತಾಸಿನ ವರೆಗೆ ನಾವೆಲ್ಲರೂ ಆ ಸಿಪಾಯಿಯ ವಿಚಾರವಾಗಿ ಮಾತಾಡಿದೆವು. ರಾತ್ರಿ ಶ್ರೀ ನಗರಕ್ಕೆ ತಲಪಿದೆವು. ಕಾಶ್ಮೀರಿನ ಈಗಿನ ಸರಕಾರದ ಮಂತ್ರಿಗಳಲ್ಲೊಬ್ಬರಾದ ಶ್ರೀ ಶಾಮಲಾಲ್ ಸರಾಫರು ನಮ್ಮನ್ನು ಕಾಣಲು ಬಂದಿದ್ದರು. ಅವರೊಡನೆ ತುಂಬಾ ಮಾತುಕತೆಯಾಯಿತು

ಉಪ್ಪಿಲ್ಲದ ಊಟ; ಬಂಗಾರ ಉಪ್ಪಿನ ಬೆಲೆಗೆ ನಾಚಿದೆ

ಮಾರನೆ ದಿನ ಶ್ರೀನಗರದ ಇನ್ನನೇಕ ಸ್ಥಳಗಳನ್ನು ನೋಡಿ ಅನೇಕ ಮಹನೀಯರುಗಳೊಡನೆ ಸಂಭಾಷಣೆ ಮಾಡಿದೆವು. ಕಾಶ್ಮೀರಿನ ಜನರು ಬಹಳ ಕಷ್ಟದಲ್ಲಿರುವರು. ದಿನ ನಿತ್ಯದ ಅವಶ್ಯಕ ವಸ್ತುಗಳಾದ ಉಪ್ಪು, ಸಕ್ಕರೆ, ಸಾಬೂನು, ಪೆಟ್ರೋಲು ಇತ್ಯಾದಿ ಅಲ್ಲಿ ದುರ್ಲಭವಾಗಿರುತ್ತವೆ. ಕಾಶ್ಮೀರಿನ ಜನರು ಕಳೆದ ಮೂರು ತಿಂಗಳಿಂದ ಉಪ್ಪನ್ನು ಉಪಯೋಗಿಸದೇ ಜೀವನ ಕಳೆದಿರುವರು. ಪ್ರತಿಯೊಬ್ಬನಿಗೆ ವಾರಕ್ಕೆ ೧ ಔನ್ಸ್ ಉಪ್ಪು ಕೂಡ ದೊರೆಯದು ಶ್ರೀ ೫. ೧ ಸೇರು ಉಪ್ಪಿಗೆ ೩ ರಿಂದ ೪ ರೂಪಾಯಿ ಬೆಲೆಯಿದೆ! ಸಕ್ಕರೆ ಪೌಂಡಿಗೆ [illegible] ಉಪ್ಪು [illegible].

ಪಾಕಿಸ್ತಾನಿಗಳ ಅಪಪ್ರಚಾರದ ಒಂದು ಮಾದರಿ

ಪಾಕಿಸ್ತಾನದವರು ‘‘ಭಾರತದ ಸಮುದ್ರ ಉಪ್ಪನ್ನು ತಿಂದರೆ ಗಂಡಸರೆಲ್ಲ ನಪುಂಸಕರಾಗುವರು, ಕಾಶ್ಮೀರಿಗರನ್ನು ನಪುಂಸಕರನ್ನಾಗಿ ಮಾಡಲು ಭಾರತವು ಉಪ್ಪು ಕಳುಹಿಸುತ್ತಿದೆ. ಅದನ್ನು ಉಪಯೋಗಿಸಬೇಡಿರಿ. ನಾವು (ಪಾಕಿಸ್ತಾನ) ಬೆಟ್ಟದ (ಕಲ್ಲುಪು) ಉಪ್ಪನ್ನು ಕಳುಹಿಸುತ್ತೇವೆ.’’ ಎಂದು ಪ್ರಚಾರ ಮಾಡುತ್ತಿರುವರು!! ಇಷ್ಟಾದರೂ ಕಾಶ್ಮೀರಿನ ಜನರು ತಮ್ಮ ದೇಶದ ಸಲುವಾಗಿ ಅದ್ಭುತ ರೀತಿಯಲ್ಲಿ ಸಂಘಟಿತರಾಗಿರುವರು. ಬಾಲಕರು, ಹೆಂಗಸರು, ಗಂಡಸರು ಎಲ್ಲಾ ತಮ್ಮ ದೇಶವನ್ನು ರಕ್ಷಿಸಲು ಮುಂದೆ ಬಂದಿರುವರು. ಶೇಖ್ ಅಬ್ದುಲ್ಲಾ ಮತ್ತು ಅವರ ಸಹಪಾಠಿಗಳ ಮೇಲೆ ಅಪೂರ್ವವಾದ ನಂಬಿಕೆ ಎಲ್ಲರಿಗೂ ಇರುವದು.

೫ ವಯಸ್ಸಿನಿಂದ ಮೇಲ್ಪಟ್ಟ ಬಾಲಕರೆಲ್ಲರೂ ‘‘ವಾನರ ಸೇನೆ’’ಗಳಲ್ಲಿ ಸೇರಿ ದಿನ ನಿತ್ಯ ಕವಾತು ಹಿಂದೂ-ಮುಸ್ಲೀಮ ಐಕ್ಯ ಮತ್ತು ನಗರ ನೈರ್ಮಲ್ಯ ಕಾರ್ಯಗಳಲ್ಲಿ ನಿರತರಾಗಿರುತ್ತಾರೆ. ಎಲ್ಲರೂ ಮರದ ಕೋವಿಗಳನ್ನು ಹೆಗಲ ಮೇಲಿಟ್ಟುಕೊಂಡು ಸಾಲು ಸಾಲಾಗಿ ಕವಾಯತು ಮಾಡುತ್ತಲಿರುವ ದೃಶ್ಯ ಅಪೂರ್ವವಾದದ್ದು. ಅದೇ ರೀತಿ ಮಹಿಳೆಯರೂ ಮುಂದೆ ಬಂದಿರುವರು. ಇವರು ಮಹಿಳೆಯರ ಹೋಮ್‌ಗಾರ್ಡ ದಳಗಳಲ್ಲಿ ಹಿಂದೂ-ಮುಸ್ಲೀಮ್ ಎಂಬ ಭೇದ ಭಾವನೆಯಿಲ್ಲದೆ ತಮ್ಮ ದೇಶದ ಸೇವೆಗಾಗಿ ಸೇರಿರುವರು.

ನ್ಯಾಶನಲ್ ಕಾನ್ಫರನ್ಸ

ದಿನಾ ಅವರಿಗೆಲ್ಲಾ ಸರಿಯಾದ ಸೈನ್ಯ ಕ್ರಮಕ್ಕನುಗುಣವಾಗಿ ಕವಾಯತು ನಡೆಯುತ್ತಿದೆ ಕಾಶ್ಮೀ[illegible]

ನಮ್ಮ ನಿರ್ಗಮನ ಮತ್ತು ನವಿನೆನಪು

ನಾವು ಆ ದಿನವೇ ದಿಲ್ಲಿಗೆ [illegible] ವಿಮಾನ [illegible] ನಾವು ವಿಮಾನವನ್ನೇರಿದ್ದು ವಿಮಾನವು ಶ್ರೀನಗರದ ಸುತ್ತಲೂ [illegible] ಶ್ರೀ ನಗರದ [illegible] ದೃಶ್ಯವಾಗಿ ಕಂಡುಬಂತು. [illegible] ದಿನದ ಈ ಅಲ್ಪ ಅವಧಿಯಲ್ಲಿ ಕಂಡ [illegible] ದೃಶ್ಯಗಳನ್ನು ಅದ ಅನುಭವಗಳನ್ನು ಮನಸ್ಸಿನಲ್ಲಿ ಆಲೋಚಿಸುತ್ತಿದ್ದಂತೆ ಹಾಗೆ ನಮ್ಮ ವಿಮಾನ ಹಿಮಾಲಯ ಪರ್ವತ ಶ್ರೇಣಿಗಳ ಮೇಲೆ ಹಾರಿ ಹೋಗುತಿತ್ತು. ಕಣ್ಣಿಗೆ ಮರೆಯಾಗುವ ವರೆಗೆ ಆ ನೋಟಗನ್ನೇ ನಾವೆಲ್ಲ ನೋಡುತ್ತಿದ್ದೆವು

ಬಾಗಲಕೋಟೆಯಲ್ಲಿ ಸಿಮೆಂಟ ಕಾರಖಾನೆ

ಮುಂಬಯಿ ಸರಕಾರದ ಸಹಾಯ

ಹಿಂದುಸ್ತಾನ ಈ ವರೆಗೆ ಅನೇಕ ವಿಷಯಗಳಿಗೆ ಪರದೇಶಗಳನ್ನು ಅವಲಂಬಿಸಬೇಕಾಗಿತ್ತು. ಆದರೀಗ ದೇಶವು ಸ್ವಾತಂತ್ರ್ಯವನ್ನು ಪಡೆದದ್ದರಿಂದ ಒಂದೊಂದೆ ವಿಷಯದಲ್ಲಿ ಸ್ವಾವಲಂಬಿಯಾಗತ್ತಿದೆ. ಸಿಮೆಂಟು ಇತ್ತೀಚೆಗೆ ಅತ್ಯವಶ್ಯವಾದ ಪದಾರ್ಥವೆಂದು ಪರಿಗಣಿಸಲಾಗುತ್ತಿದೆ ಹಿಂದುಸ್ತಾನದಲ್ಲಿ ಒಟ್ಟಿಗೆ ಪ್ರತಿ ವರುಷ ೫೦ ಲಕ್ಷ ಟನ್ನು ಸಿಮೆಂಟು ಬಳಕೆಗೆ ಬೇಕೆಂದು ತಜ್ಞರು ಅಭಿಪ್ರಾಯಪಡುತ್ತಿರುವರು. ಈ ಸಿಮೆಂಟು ಸಾಕಷ್ಟು ಇಲ್ಲದ್ದರಿಂದ ಸರಕಾರದ ಯುದ್ಧೋತ್ತರ ಯೋಜನೆ ಅದರಂತೆ ಅಣೆಕಟ್ಟುಕಟ್ಟುವದು, ವಿದ್ಯುಚ್ಛಕ್ತಿ ಉತ್ಪತ್ತಿಯ ಕೇಂದ್ರಗಳನ್ನು ನಿರ್ಮಿಸುವದು, ಮನೆಗಳ ರಚನೆ, ನಗರಗಳ ವಿಸ್ತರಣೆ ಮೊದಲಾದ ಅನೇಕ ಯೋಜನೆಗಳನ್ನು ತಡೆಹಿಡಿಯಬೇಕಾಗಿದೆ. ಈಗ ಹಿಂದುಸ್ತಾನದ ಸಿಮೆಂಟ ಕಾರಖಾನೆಗಳಲ್ಲಿ ಕೇವಲ ೨೮ ಲಕ್ಷ ಟನ್ನ ಸಿಮೆಂಟು ಉತ್ಪಾದಿಸಲಾಗಬಲ್ಲದು. ಆದರೆ ಪ್ರತ್ಯಕ್ಷವಾಗಿ ಈ ಉತ್ಪಾದನೆಯಾದುದು ೧೯೪೩ರಲ್ಲಿ ೨೨ಲಕ್ಷ ಮಾತ್ರ ಆ ರಲ್ಲಿಯೂ ಇದು ಉಳಿದ ವರುಷಗಳಿಗಿಂತ ಹೆಚ್ಚಿನ ಉತ್ಪತ್ತಿ. ೧೯೪೫-೪೬ರಲ್ಲಿ ೧೮ ಲಕ್ಷ ಟನ್ನು ೧೯೪೬—೪೭ ರಲ್ಲಿ ೧೫ಲಕ್ಷ ಟನ್ನ ಮಾತ್ರ ಉತ್ಪತ್ತಿಯಾದದ್ದು ಕಂಡು ಬರುವದು.

ಈ ಕೊರತೆಯನ್ನು ಹೋಗಲಾಡಿಸುವದಕ್ಕಾಗಿ ಹಿಂದುಸ್ತಾನ ಸರಕಾರದವರು ಬೇರೆ ಬೇರೆ ಪ್ರಾಂತಗಳಲ್ಲಿ ಸಿಮೆಂಟ ಕಾರಖಾನೆಗಳನ್ನು ತೆಗೆಯಲು ಅಪ್ಪಣೆ ಕೊಟ್ಟಿರುವರು. ನಮ್ಮ ಪ್ರಾಂತದಲ್ಲಿ ಬಾಗಲಕೋಟೆಯಲ್ಲಿ ಇಂಥದೊಂದು ಕಾರಖಾನೆಯನ್ನು ತೆರೆಯಲು ಇದೀಗ ಮುಂಬಯಿ ಸರಕಾರವು ಅಪ್ಪಣೆ ಕೊಟ್ಟಿದೆ. ಇನ್ನೊಂದು ಕಾರಖಾನೆ ಗುಜರಾಥದಲ್ಲಿ ಹೊರಡುವದು. ಬಾಗಲಕೋಟೆಯಲ್ಲಿ ಸಿಮೆಂಟ ಕಾರಖಾನೆಯನ್ನು ಡೆಕ್ಕನ ಸಿಮೆಂಟ ಕಂಪನಿಯವರು ತೆರೆಯುತ್ತಾರೆ. ಡಾ. ಎ. ಜಿ. ಕಂದು ಲಕರರು ಈ ವಿಷಯದಲ್ಲಿ ಬಹಳ ಪರಿಶ್ರಮ ಪಟ್ಟು ಸರಕಾರದ ಮನ್ನಣೆಯನ್ನು ಪಡೆದಿದ್ದಾರೆ.

ಬಾಗಲಕೋಟೆಯು ಸಿಮೆಂಟ ಕಾರಖಾನೆಗೆ ಯೋಗ್ಯವಾದ ಸ್ಥಳವಾಗಿದೆ. ಕಪಪಾಪದಲ್ಲಿ ದೊರೆಯುವಂಥ ಕಲ್ಲು ಇಲ್ಲಿ ವಿಪುಲವಾಗಿ ದೊರೆಯುತ್ತವೆ. ಸಮೀಪದ ಮುಧೋಳ ಜಮಖಂಡಿ ಸಂಸ್ಥಾನಗಳಲ್ಲಿಯೂ ಈ ಬಗೆಯ ಕಲ್ಲು ಸಿಕ್ಕುತ್ತದೆ. ರೇಲ್ವೆ ಸ್ಟೇಶನ ಸಮೀಪದಲ್ಲಿಯೆ ಈ ಕಾರಖಾನೆ ಸ್ಥಾಪಿತವಾಗುವದರಿಂದ ಸರಕುಗಳ ಸಾಗಾಟಕ್ಕೆ ಒಳ್ಳೆ ಅನುಕೂಲವಾಗುವದು ಅಲ್ಲಿರುವ [illegible] ಪ್ರಭಾ ನದಿಯ ನೀರು [illegible] ದೇಹುಗೆಯಲ್ಲಿಯೂ [illegible] ರುವದರಿಂದ ಕಾರಖಾನೆಗೆ ನೀರಿನ [illegible] ತೊಂದರೆಯಿಲ್ಲ. ಈ ಕಾರಖಾನೆಯಲ್ಲಿ [illegible] ವರುಷ ೧ ಲಕ್ಷ ಟನ್ನು ಸಿಮೆಂಟನ್ನು [illegible] ಲಾಗುವದು. ಎಂ. ಎಸ್. ಎಂ [illegible] ರೇಲ್ವೆ ಹಾದಿರುವ ಪ್ರದೇಶದಲ್ಲಿಯೆ ಇದ[illegible]ಟು ದೇಕಾಗುವದು. ಈಗ ೧ ಲಕ್ಷ [illegible] ಟನ್ನ ಸಿಮೆಂಟು ಈ ಭಾಗಕ್ಕೆ ಬರುತ್ತದೆ.

ಒಂದು ಕೋಟಿ ರೂಪಾಯಿ [illegible] ಹಾಕಿ ಈ ಭಾರೀ ಉದ್ಯೋಗವನ್ನು [illegible]ಟಿಯಲ್ಲಿ ಹೊರಡಿಸಲಾಗುವದು ಇದರಿಂದ [illegible] ನದಿ ಕೊಯನಾ ನದಿಗೆ ದೊಡ್ಡ ದೊಡ್ಡ [illegible]ನೆಗಳನ್ನು ತೆರೆಯಲು ಅನುಕೂಲವಾಗುವದು. ಇವಲ್ಲದೆ ಇನ್ನೂ ಹಲವು ಸಣ್ಣ ದೊಡ್ಡ [illegible] ಯೋಜನೆಗಳಿಗೆ ಇದು ಅನುಕೂಲವಾಗುವದು. ಒಂದು ಕೋಟಿ ರೂಪಾಯಿ [illegible] ಯೋಜನೆಯಲ್ಲಿ ಹಣವನ್ನು ಹಾಕಲು [illegible] ಮುಂದೆ ಬರುವದಿಲ್ಲ. ಅದುದರಿಂದ [illegible] ಸರಕಾರದವರು ಕಲ್ಪರಿಂದ ಇದರ [illegible] ನಡೆಯಿಸಿ ಮಹತ್ವದ ಆರ್ಥಿಕ ಸಹಾಯ [illegible] ಮುಂದೆ ಬಂದಿದ್ದಾರೆ. ಈ ಕೋಟಿ [illegible] ಬಂಡವಾಲಿನ ಶೇರುಗಳ ಮೇಲೆ [illegible] ವರ್ಷಕ್ಕೆ ೩ ರೂಪಾಯಿ. ಗಳಂತೆ ಶೇರು [illegible] ಕಾರೀಕಿನಿಂದ ಮೊದಲಿನ ಐದು [illegible] ಧಿಯ ವರೆಗೆ [illegible] ಹೊಣೆ ಹೊತ್ತಿದ್ದಾರೆ. ಸರಕಾರದವರು [illegible] ಡಾಯರೆಕ್ಟರರನ್ನು ನಿಯಮಿಸಿ [illegible] ಕವನ್ನು [illegible] ಸುವರು [illegible] ಕಂಪನಿಗೆ ಸರಕಾರದವರು [illegible] ರೂಪಾಯಿ ಸಹಾಯ ಮಾಡುವರು. [illegible] ವರು ಶೇರುದಾರರಿಗೆ ನೂರಕ್ಕೆ ೩ ರಂತೆ [illegible] ಕೊಟ್ಟು ಲಾಭದ ಲಾಭದಿಂದ [illegible] ಲಾಭದಲ್ಲಿ ಶೇರುದಾರರಿಗೆ ನೂರಕ್ಕೆ [illegible] ನೂರಕ್ಕೆ ೫೦ ರಷ್ಟು ಲಾಭವನ್ನು [illegible] ವರೆಗೆ ಸರಕಾರಕ್ಕೆ ಸಲ್ಲಬೇಕು. ಅಥವಾ [illegible]



ಹಳ್ಳಿಗರ ಉದ್ಧಾರದ ಪುಣ್ಯಕಾರ್ಯ

ಸುಶಿಕ್ಷಿತ ತರುಣರು ಇದಕ್ಕೆ ಮುಂದೆ ಬರಲಿ

(ಮುಂಬಯಿ ಆಕಾಶವಾಣಿಯಲ್ಲಿ ಶ್ರೀ ರಂ. ರಾ. ದಿವಾಕರರ ಭಾಷಣ)

ಸಾಂಘಿಕ,

ಹಳ್ಳಿಗಳೇ ಹಿಂದುಸ್ತಾನದ ಜೀವ ಜೀವಾಳ ಎಂಬ ಮಾತು ಕನ್ನಡಿಯಂತೆ ಸ್ಪಷ್ಟವಿದೆ. ನೂರರಲ್ಲಿ ೮೦ ರಷ್ಟು ನಮ್ಮ ಜನರು ಸಣ್ಣ ಪುಟ್ಟ ಹಳ್ಳಿಗಳಲ್ಲಿಯೇ ವಾಸಿಸುವರು. ಅವರ ಅಭಿವೃದ್ಧಿ, ಅವರ ಸುಧಾರಣೆ, ಇದೇ ನಮಗೆ ಮುಖ್ಯ. ನಾಲ್ಕು ಅಂದ ಚಂದವಾದ ಪಟ್ಟಣಗಳನ್ನು ಕಟ್ಟಿಕೊಂಡು ಅದರಿಂದ ನಾವು ಸಮಾಧಾನಪಡುವದು ತಪ್ಪು. ಸತ್ತಿಂಟು ಮುಕ್ಕಳ್ಳಿ ಒಬ್ಬನಿಗೆ ನಾಲು ಸಕ್ಕರೆಕೊಟ್ಟು ಇತರರಿಗೆ ಮಣ್ಣಿಗೆ ಕುಡಿಸಿದಂತೆ ಅದು ಪಂಕ್ತಿಪ್ರಪಂಚ ವಾಗುವದು. ಈ ಮಾತಿನ ತಿಳುವಳಿಕೆಯಾದವರೆ ಹಳ್ಳಿಗಳ ಸೇವೆ ಮಾಡಬಲ್ಲರು.

ಗ್ರಾಮಸೇವಕನ ಯೋಗ್ಯತೆಗಳು

ಹಳ್ಳಿಗಳ ಸೇವೆ ಚನ್ನಾಗಿ ನಡೆಯಬೇಕಾದರೆ ಹಳ್ಳಿಗಳಲ್ಲಿಯೇ ಹುಟ್ಟಿ, ಬೆಳೆದು, ವಿದ್ಯಾಬುದ್ಧಿ ಕಲಿತ ಸೇವಕರು ಬೇಕು. ಆಯಾ ಹಳ್ಳಿಯಲ್ಲಿಯೇ ಇದ್ದ ಜನರು ಕೆಲಸವನ್ನು ಕೈಕೊಂಡರೆ ಹೆಚ್ಚು ಹಿತ. ಈಗ ದೊಡ್ಡ ಹಳ್ಳಿಯಲ್ಲಿಯಂತೂ ಮುಲಕೀ ಪರೀಕ್ಷೆ ಪಾಸಾದವರು ಹಲವರು ಇದ್ದೇ ಇರುವರು. ಮೇಲಾಗಿ ಪ್ರಾಥಮಿಕ ಶಾಲೆಗಳ ಶಿಕ್ಷಕರೂ ಕೆಲವರು ಇರುವರು. ಅವರೇ ಹಳ್ಳಿಗರ ಹೆಚ್ಚಿನ ಸೇವೆಯನ್ನು ಮಾಡುವ ನಿರ್ಧಾರ ಮಾಡಿದರೆ ಉಚಿತವಾಗುವದು. ಹೊರಗಿನವರು ಹೋಗಿ ಹಳ್ಳಿಗಳಲ್ಲಿ ನೆಲೆಸಿ ಅಲ್ಲಿ ಸೇವೆಯನ್ನು ಕೈಕೊಳ್ಳುವದು ಕಠಿಣವಾಗುವದು. ಯಾರು ಹಳ್ಳಿಗರ ಸೇವೆಯನ್ನು ಕೈಕೊಂಡರೂ ಅದು ಅತ್ಯಂತ ಶ್ರೇಷ್ಠವಾದ ಪುಣ್ಯಕಾರ್ಯ ಎಂಬಲ್ಲಿ ಸಂಶಯವಿಲ್ಲ. ಆದರೆ ಆ ಕಾರ್ಯವನ್ನು ಕೈಕೊಳ್ಳುವವರು ಸೇವಾಬುದ್ಧಿಯಿಂದ ಪ್ರೇರಿತರಾಗಬೇಕು. ಹಳ್ಳಿಗರ ಮೇಲೆ ದೊಡ್ಡ ಉಪಕಾರ ಮಾಡಲು ಹೊರಟಿದ್ದೇವೆಂದು ತಿಳಿದು ಯಾರಾದರೂ ಈ ಕೆಲಸಕ್ಕೆ ಕೈಹಾಕುತ್ತಿದ್ದರೆ ಅವರಿಂದ ಬಹಳ ಘಾತವಾಗುವದು. ಸೇವಾಭಾವನೆ ನಮ್ಮನ್ನು ಹಳ್ಳಿಗರ ಅಂತಃಕರಣದ ವರೆಗೆ ಒಯ್ದು ಮುಟ್ಟಿಸಬಲ್ಲದು. ಆ ಸೇವಾಭಾವವು ಕೂಡ ನಿಷ್ಕಾಮವಿರಬೇಕು.

ಇದಲ್ಲದೆ ಹಳ್ಳಿಯ ಸೇವೆ ಮಾಡುವವರು ನಿಷ್ಕಳಂಕರೂ ಸದಾಚಾರಿಗಳೂ ನುಡಿದಂತೆ ನಡೆಯುವವರೂ ಇರುವದು ಅತ್ಯವಶ್ಯ. ಹಾಗೆ ಇಲ್ಲದೆ ಹೋದರೆ ಪ್ರತಿಷ್ಠೆ ಉಳಿಯದು, ಮಾತು ನಡೆಯದು, ಕೆಲಸವು ಮುಂದರಿಯದು. ಹಳ್ಳಿಗರು ಬಹಳ ಸಾದಾವೃತ್ತಿಯವರು ಇರುವದರಿಂದ ಅವರ ಎದುರು ನಾವು ಯಾವ ಆದರ್ಶವನ್ನು ಇಡುವೆವೋ ಆ ಆದರ್ಶದಂತೆ ಅವರು ನಡೆಯಲು ಯತ್ನಿಸುವರು. ಆದರ್ಶವೇ ಕೆಟ್ಟಿದ್ದರೆ, ಅವರು ಸ್ವಾಭಾವಿಕವಾಗಿ ಕೆಡಲಾಗುವರು. ವಾಡಿಕೆಯಾಗಿ ಅವರು ಪಟ್ಟಣಿಗರ ವ್ಯಸನಾದಿಗಳನ್ನು ಕಲಿಯುವರು. ಹಳ್ಳಿಗರಲ್ಲಿ ಹೋಗುವಾಗ ನಾವು ಇನ್ನೊಂದು ಮಹತ್ವದ ಸಂಗತಿಯನ್ನು ಲಕ್ಷ್ಯದಲ್ಲಿಡಬೇಕು. ಅದೇನೆಂದರೆ ಸಾಮಾನ್ಯವಾಗಿ ಹಳ್ಳಿಗಳಲ್ಲಿ ಬಣಗಳಿರುವವು. ಆ ಬಣಗಳಲ್ಲಿ ಯಾವದೇ ಒಂದು ಬಣಕ್ಕೆ ಅಂಟಿಕೊಳ್ಳದೆ ಕೆಲಸ ಮಾಡುವದು ಅವಶ್ಯವು. ಇದಲ್ಲದೆ ತನ್ನ ಕೆಲಸದ ಮೇಲಿನ ಶ್ರದ್ಧೆ, ಕರ್ತವ್ಯನಿಷ್ಠೆ, ಉತ್ಸಾಹ, ಕಾರ್ಯಕ್ಷಮತೆ, ಅಧ್ಯಯನಶೀಲತೆ, ಸ್ವಚ್ಛತೆ, ಅಚ್ಚುಕಟ್ಟುತನ, ಎಲ್ಲರ ಬಗ್ಗೆ ಪ್ರೇಮ ಇತ್ಯಾದಿ ಗುಣಗಳು ಆವಶ್ಯಕವಾದವು ಅತ್ಯವಶ್ಯಕ. ಇದಲ್ಲದೆ ಒಳ್ಳೇ ಅಕ್ಷರ, ಒಳ್ಳೇಮಾತು, ಮಧುರವಾದ ಮಾತುಗಳು, ಸಣ್ಣವರಲ್ಲಿ ದೊಡ್ಡವರಲ್ಲಿ ಬೆರೆತುಕೊಂಡು ಹೋಗುವ ಸ್ವಭಾವ ಇವು ಇರುವದು ಅವಶ್ಯ.

ಇಷ್ಟೆಲ್ಲ ಗುಣಗಳು, ಸಾಧನಗಳು ಸೇವಕನಲ್ಲಿರಬೇಕು. ಅವನು ಸದ್ಗುಣಶೀಲನಾಗಿ ತನ್ನಲ್ಲಿ ಇರುವ ಬಲ ಕೌಶಲ್ಯಗಳನ್ನು ಇಲ್ಲಿ ಆದರ್ಶ ಸೇವಕನ ಚಿತ್ರ

ವನ್ನು ನಾನು ಕೊಟ್ಟಿರುವೆ. ಇವುಗಳಲ್ಲಿ ಆದರ್ಶ ಗುಣಗಳು ತಮ್ಮಲ್ಲಿ ಇರುವಂತೆ ಸೇವಕರು ಪ್ರಯತ್ನ ಪಡುವದು ಅವಶ್ಯವು. ಅಭ್ಯಾಸದಿಂದ ಫಲಂ.

ಒಂದು ಹಳ್ಳಿ ಎಂಬುದು ಒಂದು ಘಟಕ. ಆ ಘಟಕದಲ್ಲಿರುವವರೆಲ್ಲರೂ ಪರಸ್ಪರ ಸುಖ ದುಃಖಗಳನ್ನು ನೋಡಿಕೊಳ್ಳುವ ವಲ್ಲದೆ ಇಡೀ ಘಟಕದ ಹಿತಾಹಿತಗಳನ್ನು ನೋಡಿಕೊಳ್ಳಬೇಕು ಎಂಬ ಭಾವನೆ ಪ್ರತಿಯೊಂದು ಹಳ್ಳಿಯಲ್ಲಿ ಉಂಟಾಗುವದು ಅವಶ್ಯ. ಈ ಭಾವನೆ ಉಂಟಾಗದೆ ಹೋದರೆ ಯಾವದೇ ಸಾಮೂಹಿಕವಾದ ಇಲ್ಲವೆ ಸಂಘಟಿತವಾದ ಪ್ರಯತ್ನವು ನಡೆಯುವದು ಅಸಾಧ್ಯ. ಸದ್ಯಕ್ಕೆ ಈ ಭಾವನೆ ಹಳ್ಳಿಗಳಲ್ಲಿ ಜಾಗ್ರತವಿಲ್ಲ. ವ್ಯಕ್ತಿಗಳು, ಗುಂಪುಗಳು, ಬಣಗಳು, ತಮ್ಮ ತಮ್ಮ ಹಿತವನ್ನು ಸಾಧಿಸಲೆತ್ನಿಸುವವೆ ಹೊರತು ಇಡೀ ಹಳ್ಳಿಯ ದೃಷ್ಟಿಯಿಂದ ಯಾವದೇ ಪ್ರಯತ್ನ ನಡೆಯಲು ಈಗ ಆಸ್ಪದವಿಲ್ಲ. ಈ ಪರಿಸ್ಥಿತಿ ಬದಲಾಗಿ ಸಹಕಾರಿ ತತ್ವದ ಮೇಲೆ ಇಡೀ ಹಳ್ಳಿಯ ಹಿತಾಹಿತಗಳ ಹಾಗೂ ಲಾಭಾಲಾಭಗಳ ವಿಮರ್ಶೆ ನಡೆದು ಯೋಜನೆಗಳಾಗಲಿಕ್ಕೆಬೇಕು. ಅಂದರೆ ಮಾತ್ರ ಹಳ್ಳಿಗಳ ಅಭಿವೃದ್ಧಿ ಆಗಬಲ್ಲದು.

ಅಜ್ಞಾನ ಭಾಂಡಾರ

ಹಳ್ಳಿಗಳಲ್ಲಿ ಬೇರು ಬಿಟ್ಟುಕೊಂಡು ನಿಂತಿರುವ ಅನೇಕ ದೋಷಗಳ ವಿರುದ್ಧ ನಾವು ಈಗೊಂದು ಪ್ರಚಂಡವಾದ ಹೋರಾಟವನ್ನೇ ಹೂಡಬೇಕಾಗಿದೆ ಎಂದು ಹೇಳಿದರೆ ಅದು ತಪ್ಪಾಗಲಿಕ್ಕಿಲ್ಲ. ಅಜ್ಞಾನ, ಬಡತನ, ಚಿಕ್ಕಪುಟ್ಟ ರೋಗಗಳು, ವ್ಯಸನಗಳು, ಪುಂಡಗಾರಿಕೆ ಇವೆಲ್ಲವುಗಳ ನಿರ್ಮೂಲನವೇ ಸೇವಕನ ಇತಿಕರ್ತವ್ಯವೆಂದು ಹೇಳಬಹುದು. ಇವೆಲ್ಲ ಸ್ವಾವಲಂಬನಪೂರ್ವಕವಾಗಿಯೇ ಆಗಬಲ್ಲವು. ಎಂಬ ವಿಶ್ವಾಸವನ್ನು ಹಳ್ಳಿಗರಲ್ಲಿ ಹುಟ್ಟಿಸುವದು ಮೊದಲನೆ ಕೆಲಸವು.

ಹಳ್ಳಿಗರು ಎಲ್ಲ ಮಾತುಗಳ ಬಗ್ಗೆ ಅಜ್ಞಾನಿಗಳಿರುವರೆಂದು ತಿಳಿಸುವದು ನಮ್ಮ ಅಜ್ಞಾನವನ್ನೇ ತೋರಿಸುವದು. ಒಕ್ಕಲತನ ಹಾಗೂ ತಾವು ಮಾಡುತ್ತಿರುವ ಸಣ್ಣ ಪುಟ್ಟ ವ್ಯವಹಾರ ಇವುಗಳ ಜ್ಞಾನವು ಅವರಿಗೆ ಚನ್ನಾಗಿ ಇರುವದು. ಆದರೆ ಇನ್ನೂ ಅನೇಕ ಮಾತುಗಳ ಜ್ಞಾನವು ಅವರಿಗೆ ಅವಶ್ಯ.

ಆರೋಗ್ಯ, ಸ್ವಚ್ಛತೆ, ಇವುಗಳ ಅನೇಕ ನಿಯಮಗಳು ಅವರಿಗೆ ಗೊತ್ತಿರುವದಿಲ್ಲ. ತಮ್ಮ ಹಳ್ಳಿ ಬಡವಾಗುತ್ತಾ ಏಕೆ ನಡೆಯಿತು ಎಂಬುದರ ಜ್ಞಾನ ಅವರಿಗೆ ಇರುವದಿಲ್ಲ ತಾವು ಒಂದು ಪ್ರಚಂಡ ರಾಷ್ಟ್ರದ ಭಾಗವಿರುವರು ಎಂಬ ಮಾತು ಅವರಿಗೆ ಅರಿತಿರುವದಿಲ್ಲ. ಹೀಗೆ ಅನೇಕ ಆವಶ್ಯಕ ಮಾತುಗಳ ಬಗ್ಗೆ ಅವರಿಗೆ ಜ್ಞಾನವಿರುವದಿಲ್ಲ. ಅದನ್ನು ಸರಿಯಾಗಿ,ವ್ಯವಸ್ಥಿತವಾಗಿ ನಾನಾ ರೀತಿಯಿಂದ ಸಹಜವಾಗಿ ಅವರಿಗೆ ತಿಳಿವಂತೆ ಹೇಳುವದು ಒಂದು ದೊಡ್ಡ ಕೆಲಸವಾಗಿದೆ. ಅವರಲ್ಲಿ ಬಹುಶಃ ಅನೇಕರು ನಿರಕ್ಷರರಿರುವದರಿಂದ ಚಿತ್ರಗಳ ಮುಖಾಂತರ, ಮಾತುಗಳ ದ್ವಾರಾ, ರೇಡಿಯೊ, ಭಜನೆ, ಕೀರ್ತನೆ, ಕಥೆ ಮುಂತಾದವುಗಳ ಮೂಲಕ ಅವರಿಗೆ ಎಲ್ಲ ಜ್ಞಾನವನ್ನು ಕೊಡುವದು ಅವಶ್ಯವು.

ಹೊಟ್ಟೆ ಮೊದಲನೆಯ ಮಾತೆಂದರೆ ಅವರ ಬಡತನವನ್ನು ನೀಗಿಸುವ ದಾರಿಯನ್ನು ಅವರಿಗೆ ಹೇಳಿಕೊಡುವದು. ಆಯಾ ಹಳ್ಳಿಯಿಂದ ಹಣವು ಹೊರಗೆ ಎಷ್ಟು, ಹೇಗೆ, ಹೋಗುತ್ತಿರುವದು, ಅದನ್ನು ಹೇಗೆ ತಡೆಯಬೇಕು, ಇದೊಂದು ಮಾತು. ಆಯಾ ಹಳ್ಳಿಯಲ್ಲಿ ಉತ್ಪಾದನೆ ಯಾವ ಯಾವ ರೀತಿ ಆಗುತ್ತಿರುವದು, ಅದನ್ನು ಹೆಚ್ಚಿಸುವ ಸಾಧನಗಳಾವು, ಯಾವ ಇದ್ದ ಉದ್ಯೋಗಗಳನ್ನು ಬೆಳೆಸುವದು ಸಾಧ್ಯ, ಯಾವ ಹೊಸ ಉದ್ಯೋಗಗಳನ್ನು ಅಲ್ಲಿ ಪ್ರಾರಂಭಿಸುವದು ಶಕ್ಯ ಈ ಮಾತುಗಳ ಅಭ್ಯಾಸ ಮಾಡಿ ಅದನ್ನು ಹಳ್ಳಿಗರಿಗೆ ತಿಳಿಸಿ ಹೇಳುವದು ಎರಡನೆಯದು. ಯಾಕೆಂದರೆ ಒಂದು ಹಳ್ಳಿಯು ಈಗ ಇದ್ದುದಕ್ಕಿಂತ ಹೆಚ್ಚು ಹಣವಂತವಾಗಬೇಕಾದರೆ ಹೊರಗೆ ಹರಿದು ಹೋಗುವ ಸಂಪತ್ತು ಅದಷ್ಟು ಹಳ್ಳಿಯಲ್ಲಿಯೆ ಉಳಿಯಬೇಕು,ಹೆಚ್ಚು ಉತ್ಪಾದನೆ ನಡೆಯಬೇಕು,ಇವೇ ಎರಡು ಮಾರ್ಗಗಳು.

ಒಂದು ಮಾದರಿ

ಒಂದು ಪೂರ್ತಿ ಒಕ್ಕಲತನ ಮಾಡುವ ಹಳ್ಳಿ ಇದೆ ಎಂದು ಕಲ್ಪಿಸುವ. ಸದ್ಯಕ್ಕೆ ಅದರ ಉತ್ಪಾದನೆ ಎಷ್ಟು ಆಗುತ್ತಿರುವದು? ಅದನ್ನು ಹೆಚ್ಚು ಹೇಗೆ ಮಾಡಬೇಕು? ನೀರಾವರಿ, ಗೊಬ್ಬರ, ಒಳ್ಳೆ ಬೀಜದ ದನಗಳು, ಈ ಮುಂತಾದವುಗಳ ಸಾಮೂಹಿಕ ಅಭ್ಯಾಸವಾಗುವದು ಅವಶ್ಯ.

ಬಳಿಕ ಆದ ಉತ್ಪಾದನೆಯ ಬಗ್ಗೆ ಯೋಗ್ಯವಾದ ದರವು ಸಿಕ್ಕುವದೊ ಇಲ್ಲವೊ, ಆದ ಲಾಭವೆಲ್ಲ ರೈತರಿಗೆಯೆ ದೊರೆಯುವದೊ ಇಲ್ಲವೊ ಈ ಮಹತ್ವದ ಮಾತಿನ ಅಭ್ಯಾಸವಾಗಲಿಕ್ಕೆಬೇಕು. ಲಾಭವು ರೈತರಿಗೆ ಕೈತಪ್ಪಿ ಹೆರವರ ಪಾಲಿಗೆ ಹೋಗಕೂಡದು. ಹೀಗೆ ಅನೇಕ ರೀತಿಯಿಂದ ಹಳ್ಳಿಗಳ ಆರ್ಥಿಕ ಪರಿಸ್ಥಿತಿಯ ಪರ್ಯಾಲೋಚನೆ ನಡೆದು ಹಳ್ಳಿಗರಿಗೆ ಮಾರ್ಗದರ್ಶನವಾಗಲಿಕ್ಕೆ ಬೇಕು.

ಹಳ್ಳಿಯ ಆರೋಗ್ಯ ಹಾಗೂ ಚಿಕ್ಕಪುಟ್ಟ ರೋಗಗಳು ಇವುಗಳ ಬಗ್ಗೆಯೂ ಆಯಾ ಸೇವಕನು ಚನ್ನಾಗಿ ಅಭ್ಯಾಸಮಾಡಿ ಹಳ್ಳಿಗರಿಗೆ ಯೋಗ್ಯ ಉಪಾಯ ಕೈಕೊಳ್ಳಲು ಸಹಾಯ ಮಾಡಲಿಕ್ಕೆಬೇಕು ಚಳಿಜ್ವರ,ನಾರು ಹುಣ್ಣು ಕಜ್ಜಿ, ತಲೆನೋವು, ಹೊಟ್ಟೆನೋವು, ಮುಂತಾದ ಸಣ್ಣಪುಟ್ಟ ರೋಗಗಳ ಮೂಲಕ ಸದ್ಯಕ್ಕೆ ಹಳ್ಳಿಗರಿಗೆ ಅಪಾರವಾದ ಹಾನಿಯಾಗುತ್ತಿದೆ! ಒಂದು ಹಳ್ಳಿಯಲ್ಲಿ ಒಮ್ಮೊಮ್ಮೆ ಮನೆಗೊಬ್ಬನು ಮಲಗಿದವನು ಕಂಡುಬರುವದು, ಒಮ್ಮೊಮ್ಮೆ ಒಂದೇ ಹಳ್ಳಿಯಲ್ಲಿ ನೂರಾರು ಜನರು ನಾರಿನಿಂದ ನರಳುವನು ಕಂಡುಬರುವದು. ಕೆಲಸ ಮಾಡುವ ೫೦೦ ಗಂಡಾಳು ಹೆಣ್ಣಾಳುಗಳಲ್ಲಿ ಒಂದು ನೂರು ಮಂದಿ ದಿನ ಜ್ವರದಿಂದ ಮಲಗಿದರೆ ೨೪೦೦ ತಾಸುಗಳು ವ್ಯರ್ಥ ಹೋದಂತಾಯಿತು. ಇಷ್ಟೇ ಅಲ್ಲ. ಅವರ ದುಃಖ, ಕಷ್ಟ, ಚಿಂತೆ, ಅವರ ಔಷಧೋಪಚಾರಕ್ಕೆ ಹಣ ಇವೆಲ್ಲ ಬೆನ್ನುಹತ್ತುವವು ರೋಗಾದಿಗಳ ಪರಿಹಾರಕ್ಕಿಂತ ನಿವಾರಣೆಯೆ ಲೇಸು ಎಂಬುದು ಸ್ಪಷ್ಟವು.

ಇನ್ನು ವ್ಯಸನಗಳ ಸಂಗತಿಯೂ ಹೀಗೆಯೆ ಬಹಳ ಮಹತ್ವದ್ದಿದೆ. ಕೆಲಕೆಲವು ದಿನಗಳ ವ್ಯಸನಗಳಂತೂ ಭಯಾನಕವಾದವುಗಳು. ಅವು ಯಾವದೇ ಹಳ್ಳಿಗೆ ಅಪಮಾನಕಾರಕವಾದವುಗಳು. ಒಂದು ಹಳ್ಳಿಯಲ್ಲಿ ಒಬ್ಬನೇ ಕುಡಿಯುವನಿದ್ದರೂ ಅದು ಅಪಮಾನಕಾರಕವಾದ ಸಂಗತಿ. ಅದೊಂದು ಕಲಂಕ. ಸುದೈವದಿಂದ ಕಾಂಗ್ರೆಸ ಸರಕಾರದವರು ಮದ್ಯಪ್ರತಿಬಂಧವನ್ನು ಕೈಕೊಂಡು ಅದನ್ನು ಇಡೀ ದೇಶಕ್ಕೆ ಅನ್ವಯಿಸುವಂತೆ ಮಾಡಲು ಯತ್ನಿಸುತ್ತಿರುವರು, ಆದರೆ ಜನರು ಈ ಮಾತನ್ನು ತಮ್ಮದಾಗಿ ಮಾಡಿಕೊಂಡು ಯತ್ನಿಸಲಿಕ್ಕೆಬೇಕು. ಅದರಿಂದಲೆ ಪೂರ್ತಿ ಯಶಸ್ಸು ದೊರೆಯಬಲ್ಲದು.

ಸಣ್ಣಪುಟ್ಟ ವ್ಯಸನಗಳೇನೂ ಕಡಿಮೆ ಹಾನಿಕರವೆಂದು ಹೇಳಲಿಕ್ಕಾಗುವದಿಲ್ಲ. ಚಹಾ,ಕಾಫಿ, ಚುಟ್ಟಾ ಸಿಗರೇಟು, ನಶ್ಯ ತಂಬಾಕು, ಇವು ಸಹ ನಮ್ಮ ಆರೋಗ್ಯವನ್ನು ಹಾಳುಮಾಡಲು ಸಮರ್ಥವಿರುವವು ಈ ಬಗ್ಗೆಯೂ ಸೇವಕನು ಒಳ್ಳೆ ವಿಚಾರ ಪೂರ್ವಕವಾಗಿ ಪ್ರಯತ್ನ ಮಾಡಲಿಕ್ಕೆ ಬೇಕು.

ಪುಂಡರ ಭಯ

ಹಳ್ಳಿಗಳಲ್ಲಿ ಎಲ್ಲಕ್ಕೂ ಹೆಚ್ಚಿನ ಭಯವೆಂದರೆ ಪುಂಡುಗಾರಿಕೆಯ ಭಯವು. ನಾಲ್ಕು ಜನ ಸೋಟರು ಗೌಡನ ಇಲ್ಲವೆ ಕುಲಕರ್ಣಿಯ ಇಲ್ಲವೆ ಅದರಂಥವರ ಬೆಂಬಲದಿಂದ ಊರಲ್ಲಿ ಒಮ್ಮೊಮ್ಮೆ ಬೇಕಾದ ಪುಂಡುಗಾರಿಕೆಯನ್ನು ನಡೆಸಿ ಬಿಡುವರು. ಅವರನ್ನು ಹೇಳುವವನು ಕೇಳುವವರು ಇಲ್ಲ ಎಂಬಂಥ ಪರಿಸ್ಥಿತಿ ಒಮ್ಮೊಮ್ಮೆ ಉಂಟಾಗಿಬಿಡುವದು ಆ ಸಂದರ್ಭದಲ್ಲಿ ಜನರು ಸಾಮೂಹಿಕವಾಗಿ ಇಂಥ ಪುಂಡರನ್ನು ಎದುರಿಸಬೇಕಾಗುವದು. ಅಂಥವರಿಗೆ ಅಧಿಕಾರಿಗಳ ಬೆಂಬಲವಿದ್ದರೆ ಆ ಅಧಿಕಾರಿಗಳನ್ನು ಕೂಡ ಎದುರಿಸಿ ನ್ಯಾಯವನ್ನು ಪಡೆಯಲು ಹೆಣಗಬೇಕಾಗುತ್ತಿದೆ. ಆ ಬಗ್ಗೆ ಜನರಲ್ಲಿ ಸಾಕಷ್ಟು ಧೈರ್ಯವನ್ನು ತುಂಬುವ ಕೆಲಸವನ್ನು ಸಮಾಜ ಸೇವಕರೆ ಮಾಡಬೇಕಾಗುವದು.

ಈ ರೀತಿ ಒಂದು ಹಳ್ಳಿಯನ್ನು ವ್ಯಸನಗಳಿಂದ ರೋಗಗಳಿಂದ, ಅಜ್ಞಾನದಿಂದ, ಬಡತನದಿಂದ, ಪುಂಡರಿಂದ ಮುಕ್ತಗೊಳಿಸುವ ದೀಕ್ಷೆಯನ್ನು ಪಡೆದು ಸಮಾಜ ಸೇವಕರು ಸ್ವಾರ್ಥತ್ಯಾಗಪೂರ್ವಕವಾಗಿ ದುಡಿಯ ಲಾರಂಭಿಸಿದರೆ ಮಾತ್ರ ನಮ್ಮಲ್ಲಿಯ ಲಕ್ಷಾಂತರ ಹಳ್ಳಿಗಳ ಉದ್ಧಾರವಾಗಬಲ್ಲದ . ಈ ಕೆಲಸವು ಬಹಳ ದೊಡ್ಡದು,ಗೌರವಾಸ್ಪದವು, ದೈವೀ ಕೆಲಸವು ಎಂದು ಹೇಳಿದರೂ ಚಿಂತೆ ಇಲ್ಲ ಈ ಕೆಲಸಕ್ಕಾಗಿ ನಮ್ಮಲ್ಲಿಯ ಲಕ್ಷಾಂತರ ಸುಶಿಕ್ಷಿತ ತರುಣರು ಸಿದ್ಧವಾಗುವದು ಅವಶ್ಯವು. ಆ ರೀತಿ ತಯಾರಾಗುವರೆ ?

ಬಾಗಲಕೋಟೆಯಲ್ಲಿ ಸಿಮೆಂಟ ಕಾರಖಾನೆ

(೧೧ ನೇ ಪುಟದಿಂದ ಮುಂದರಿದುದು)

ರೂಪಾಯಿ ಉಪಯೋಗಿಸಿದ ಅವಧಿಯ ಮೇಲೆ ನೂರಕ್ಕೆ ವರ್ಷಕ್ಕೆ ೩ ಯಂತೆ ಬಡ್ಡಿ ಲೆಕ್ಕಮಾಡಿ ಕೊಡಬೇಕು.

ಸರಕಾರದವರು ಈ ರೀತಿ ಡಿವಿಡೆಂಡಿನ ಬಗ್ಗೆ ಹೊಣೆ ಹೊತ್ತದ್ದು ಇದೇ ಮೊದಲನೆಯದು. ಎಲ್ಲರೂ ಇದರಲ್ಲಿ ಶೇರು ಹಾಕಬೇಕೆಂದು ಶೇರಿನ ಹಣವನ್ನು ಕೇವಲ ಹತ್ತು ರೂಪಾಯಿ ಗೊತ್ತು ಮಾಡಲಾಗಿದೆ. ೧೯೩೪ರ ರಲ್ಲಿಯೆ ಡಾ ತೆಂಡುಲಕರರು ಈ ಯೋಜನೆಯ ಪರಿಶೀಲನೆ ಮಾಡಿದ್ದು ಅಂದಿನಿಂದ ಇಂದಿನ ವರೆಗೆ ತಜ್ಞರ ಅಭಿಪ್ರಾಯ ಪಡೆದು ಹಿಂದುಸ್ತಾನದ ಎಲ್ಲ ಯೋಜನೆಗಳಲ್ಲಿ ಇದು ಸರ್ವಶ್ರೇಷ್ಠವೆಂದು ನಿರ್ಧರಿಸಿದ್ದಾರೆ.

ಸದ್ಯಕ್ಕಿರುವ ಸಿಮೆಂಟ ಕಾರಖಾನೆಗಳು

೧೯೪೭ ರಲ್ಲಿ ಹಿಂದುಸ್ತಾನದಲ್ಲಿ ಒಟ್ಟು ೧೩ ಸಿಮೆಂಟ ಕಾರಖಾನೆಗಳೂ ಸಂಸ್ಥಾನಗಳಲ್ಲಿ ಒಟ್ಟು ಆರು ಸಿಮೆಂಟ ಕಾರಖಾನೆಗಳೂ ಇದ್ದವು. ಈಗ ೨೩ ಕಾರಖಾನೆಗಳಿವೆ. ಈ ಎಲ್ಲ ಕಾರಖಾನೆಗಳಲ್ಲೂ ಸೇರಿ ಸುಮಾರು ಹತ್ತು ಸಾವಿರ ಜನ ಕೆಲಸಗಾರರಿದ್ದಾರೆ.

ಭಾರತ ದೇಶದ ವಿಭಜನೆಯಾಗುವ ಮುನ್ನ ವರ್ಷಂಪ್ರತಿ ನಮ್ಮ ಸಿಮೆಂಟ ತಯಾರಿಕೆಯು ಈ ರೀತಿ ಇತ್ತು.

೧೯೪೩—೪೪	೨೧ ಲಕ್ಷ ೮೩ ಸಾವಿರ ಟನ್ನು
೧೯೪೪—೪೫	೨೦ ಲಕ್ಷ ೪೮ ಸಾವಿರ ಟನ್ನು
೧೯೪೫—೪೬	೨೦ ಲಕ್ಷ ೭೫ ಸಾವಿರ ಟನ್ನು
೧೯೪೬—೪೭	೨೦ ಲಕ್ಷ ೧೬ ಸಾವಿರ ಟನ್ನು

ವಿಭಜನೆಯಾದ ನಂತರ ಹಿಂದುಸ್ತಾನದ ಸಿಮೆಂಟು ತಯಾರಿಕೆಯು ೨೦ ಲಕ್ಷ ೭೫ ಸಾವಿರ ಟನ್ನುಗಳೆಂದು ಅಂದಾಜು ಮಾಡಲಾಗಿದೆ.

ಸಿಮೆಂಟ ತಯಾರಿಕೆಯು ಈಗ ಸಂಯುಕ್ತ ಪ್ರಾಂತ, ಬಿಹಾರ ಮತ್ತು ಮದ್ರಾಸ ಪ್ರಾಂತಗಳಲ್ಲಿ ಹೆಚ್ಚು ಕೇಂದ್ರೀಕೃತವಾಗಿದೆ. ಬಿಹಾರ್ ೫ ಲಕ್ಷ ೯೮ ಸಾವಿರ ಟನ್ನ ಸಿಮೆಂಟು ತಯಾರಿಸುತ್ತಿದೆ. ಮಧ್ಯಪ್ರಾಂತ ಮತ್ತು ಮುದರಾಸು ಪ್ರಾಂತಗಳು ೩ ಲಕ್ಷ ೬೦ ಸಾವಿರ ಮತ್ತು ೨ ಲಕ್ಷ ೫೦ ಸಾವಿರ ಟನ್ನುಗಳ ಸಿಮೆಂಟನ್ನು ಉತ್ಪಾದಿಸುತ್ತವೆ ಸಂಸ್ಥಾನಗಳೆಲ್ಲ ಸೇರಿ ಒಟ್ಟು ೮ ಲಕ್ಷ ೬೬ ಸಾವಿರ ಟನ್ನು ಸಿಮೆಂಟನ್ನು ಉತ್ಪಾದಿಸುತ್ತವೆ.

ಹಿಂದುಸ್ಥಾನ ಸರಕಾರವು ತಮ್ಮ ಪುನರ್ರಚನಾ ಯೋಜನೆಯ ಪ್ರಕಾರ ಇನ್ನೂ ಹದಿನೆಂಟು ಹೊಸ ಕಾರಖಾನೆಗಳನ್ನು ಸ್ಥಾಪಿಸಬೇಕೆಂದಿದ್ದಾರೆ. ೧೯೫೧—೫೨ ರ ಹೊತ್ತಿಗೆ ನಮ್ಮ ಸಿಮೆಂಟ ತಯಾರಿಕೆಯು ೫೧ ಲಕ್ಷ ಟನ್ನುಗಳಷ್ಟು ಎಂದು ಅಂದಾಜು ಮಾಡಲಾಗಿದೆ. ಆಗಿನ ನಮ್ಮ ಸಿಮೆಂಟ ಬೇಡಿಕೆಯು ೪೧ ಲಕ್ಷ ಟನ್ನುಗಳಿರುತ್ತದೆ.

ಹಿಂದುಸ್ಥಾನದ ಯೋಜನೆಯ ಪ್ರಕಾರ ಮುಂದೆ ಪ್ರತಿ ಪ್ರಾಂತವೂ ಈ ಕೆಳಗಿನಂತೆ ಹೆಚ್ಚು ಸಿಮೆಂಟನ್ನು ಉತ್ಪಾದಿಸಬೇಕಾಗುತ್ತದೆ.

ಬಂಗಾಲ	೫೦ ಸಾವಿರ ಟನ್ನು
ಬಿಹಾರ	೨ ಲಕ್ಷ ಟನ್ನು
ಮುಂಬಯಿ	೩ ಲಕ್ಷ ಟನ್ನು
ಓಡಿಸಾ ಮತ್ತು ಆಸಾಮು	೧ ಲಕ್ಷ ಟನ್ನು
ಸಂಸ್ಥಾನಗಳು	೬ ಲಕ್ಷ ಟನ್ನು



ಮುಂಬಯಿ

ಪುಣೆ ವಿಶ್ವವಿದ್ಯಾಲಯದ ಮೊದಲನೇ ಉಪಕುಲಗುರುಗಳೆಂದು ಡಾ. ಎಂ. ಆರ್. ಜಯಕರರನ್ನು ನೇಮಿಸಲಾಗಿದೆ. ಇವರ ಅಧಿಕಾರಾವಧಿ ಎರಡುವರ್ಷ.

೫ ರಿಂದ ೬೦ ಅಶ್ವಶಕ್ತಿ ಎಷ್ಟು ಎಂಜಿನಗಳ ಮೇಲಿದ್ದ ನಿರ್ಬಂಧವನ್ನು ಮುಂಬಯಿ ಸರಕಾರದವರು ರದ್ದುಪಡಿಸಿದ್ದಾರೆ. ಇವುಗಳ ಪೂರಾಟಕ್ಕಾಗಿ ಅಪ್ಪಣೆ ಪಡೆಯುವ ಅವಶ್ಯಕತೆಯು ಇಲ್ಲ. ಆದರೆ ಇವುಗಳ ಬೆಲೆ ನಿಯಂತ್ರಣ ಹುಕುಮು ಮಾತ್ರ ಇನ್ನೂ ಜಾರಿಯಲ್ಲಿ ಇದೆ.

ಗುಜರಾಥ ಪ್ರಾಥಮಿಕ ಶಿಕ್ಷಕರ ಸಂಘದವರಿಗೂ ಗುಜರಾಥದಲ್ಲಿಯ ಸ್ಕೂಲಬೋರ್ಡಿನವರಿಗೂ ಕಳೆದ ಎರಡು ತಿಂಗಳುಗಳಿಂದ ನಡೆದ ತಂಟೆ ಈಗ ಬಗೆಹರಿಯಿತು. ಫೆಬ್ರುವರಿ ೨೦ ಕ್ಕೆ ಶಿಕ್ಷಕರ ದಿನಾಚರಣೆಯ ನಿಮಿತ್ತ ಗೈರಹಾಜರ ಉಳಿದಿದ್ದ ೧೦೦೦ ಶಿಕ್ಷಕರನ್ನು ಕೆಲಸದಿಂದ ತೆಗೆದು ಹಾಕಲಾಗಿತ್ತು. ಆದರೀಗ ಶಿಕ್ಷಕರು ಇನ್ನು ಮುಂದೆ ಹೀಗೆ ಗೈರಹಾಜರ ಉಳಿಯುವದಿಲ್ಲೆಂದು ಬರೆದುಕೊಟ್ಟರು. ಅವರನ್ನು ತಿರುಗಿ ಕೆಲಸದ ಮೇಲೆ ತೆಗೆದುಕೊಳ್ಳಬೇಕೆಂದೂ ಗೈರ ಹಾಜರಿದ್ದ ದಿವಸದ ಸಂಬಳ ಮುರಿಯುತಕ್ಕದ್ದೆಂದೂ ಎಂಬುದಕ್ಕೆ ಎರಡೂ ಪಕ್ಷದವರು ಒಪ್ಪಿದ್ದಾರೆ.

ಸೊಲ್ಲಾಪುರ ಪಂಢರಪುರ ಬಾರಶಿಗಳ ಹೊಟೆಲುಗಳಲ್ಲಿ ಹಾಲಿನ ಉಪಯೋಗದ ಮೇಲೆ ಇದ್ದ ನಿರ್ಬಂಧಕಾಜ್ಞೆಯನ್ನು ರದ್ದು ಪಡಿಸಿದ್ದಾರೆ.

ಪ್ರಾಂತಿಕ ಸರಕಾರಗಳ ಹೊಸ ಘಟನೆಯನ್ವಯ ನಡೆಯಬೇಕಾದ ಚುನಾವಣೆಗಳ ಸಲುವಾಗಿ ಎರಡು ತರದ ಪಟ್ಟಿಗೆಗಳನ್ನು ಸಿದ್ಧಪಡಿಸಬೇಕೆಂದು ಕಲೆಕ್ಟರರಿಗೆ ವಿಧಿಸಲಾಗಿದೆಂದು ತಿಳಿಯುತ್ತದೆ.

ಗೋಧ್ರಾದಲ್ಲಿ ೧೭ ಕ್ಕೆ ಎರಡು ಗುಂಪುಗಳ ನಡುವೆ ಇಟ್ಟಂಗಿ ಕಲ್ಲುಗಳ ಕಾದಾಟವಾಗಿ ಮೂರು ಜನರು ಗಾಯಗೊಂಡರು. ಬೇರೆ ಬೇರೆ ಭಾಗಗಳಲ್ಲಿ ಮನೆಗಳಿಗೆ ಬೆಂಕಿ ಬಿದ್ದು ೭ ಮನೆ ಸಂಪೂರ್ಣ ಸುಟ್ಟವು. ರಾತ್ರಿ ಊರಿನಲ್ಲಿ ಶಾಂತತೆಯಿತ್ತು.

ಸೊಲ್ಲಾಪುರ ಜಿಲ್ಹೆಯ ಸೋನಾ ಎಂಬ ಗ್ರಾಮದ ಮೇಲೆ ರಜಕಾರರು ಮತ್ತು ಸಶಸ್ತ್ರ ಪುಂಡರು ದಾಳಿ ಮಾಡಿದ್ದರಿಂದ ಅನೇಕ ಹಳ್ಳಿಗರಿಗೆ ಗಾಯಗಳಾಗಿವೆ. ಹೈದರಾಬಾದ ಗಡಿಯ ಭಾಗದಿಂದ ರಜಕಾರರು ಬರುತಿರುವದನ್ನು ತಿಳಿದ ಕೂಡಲೆ ಹಳ್ಳಿಗರು ಅವರನ್ನು ಬಲವಾಗಿ ಪ್ರತಿಭಟಿಸಿದರು. ದಾಳಿಗಾರರು ಹಿಂದಿರುಗಿ ಓಡುವಾಗ ಬಂದೂಕು ಮತ್ತು ಇನ್ನಿತರ ಕೆಲ ಶಸ್ತ್ರಾಸ್ತ್ರಗಳನ್ನು ಬಿಟ್ಟುಹೋಗಿರುವರು.

ಅಹಮ್ಮದಾಬಾದದ ಗುಜರಾಥಿ ಪತ್ರಿಕೆ ಭಾರತದ ಸಂಪಾದಕರಾದ ಶ್ರೀ ಎಸ್. ಎಸ್. ದೇಸಾಯಿಯವರು ಮಾಡಿಕೊಂಡ ಹೇಬಸಕಾರ್ಪಸ್ ಅರ್ಜಿಯನ್ನು ಮುಂಬಯಿ ಹಾಯಕೋರ್ಟಿನವರು ಕಿತ್ತಿ ಹಾಕಿದರು.

ಕರಾಚಿಯಿಂದ ನ್ಯೂಯಾರ್ಕಿಗೆ ಸಾಗಿದ ವಿಮಾನವು ಶಾನನ (ಆಯರ್ಲಂಡ) ವಿಮಾನ ನಿಲ್ದಾಣದಲ್ಲಿ ಮುಗ್ಗರಿಸಿ ಬಿದ್ದು ಸುಟ್ಟು ಹೋಯಿತು. ಇದರಲ್ಲಿ ಇದ್ದ ೨೦ ಪ್ರಯಾಣಿಕರು ಹಾಗು ೧೦ ಜನ ವಿಮಾನ ನೌಕರರಲ್ಲಿ ಒಬ್ಬನೇ ಒಬ್ಬ ಜೀವದಿಂದ ಪಾರಾದನು. ಮುಂಬಯಿಯ ಪ್ರಸಿದ್ಧ ಶ್ರೀಮಂತರಾದ ಸರ್ ಹೋಮಿ ಮೋಥಾರವರೂ ಇದರಲ್ಲಿ ನಿಧನ ಹೊಂದಿದರು.

ಮಹಾತ್ಮರ ಕೊಲೆಯ ನಂತರದ ಗಲಭೆಗಳಲ್ಲಿ ದಕ್ಷಿಣ ಮಹಾರಾಷ್ಟ್ರ ಮತ್ತು ಉತ್ತರ ಕರ್ನಾಟಕದ ಸಂಸ್ಥಾನಗಳಲ್ಲಿ ಸುಮಾರು ೧೦ ಕೋಟಿಯ ವರೆಗೆ ಹಾನಿಯಾಗಿದ್ದು ಇದರಿಗೆ ಪರಿಹಾರ ಕೊಡುವ ಕಾರ್ಯವನ್ನು ಶ್ರೀ ಸೋಮಣರು ಕೈಕೊಂಡಿದ್ದಾರೆ. ಮುಂಬಯಿ ಗವರ್ನರರು ೫೦೦ ರೂ. ಗಳನ್ನು ಕೊಟ್ಟು ಈ ಕಾರ್ಯವನ್ನು ಪ್ರಾರಂಭಿಸಿದ್ದಾರೆ ಉದಾರಿಗಳು ಮುಕ್ತ ಹಸ್ತದಿಂದ ಸಹಾಯ ಮಾಡಬೇಕೆಂದು ಕೋರಲಾಗಿದೆ.

ಮುಂಬಯಿ ಸರಕಾರದವರು ವರ್ಷಕ್ಕಿರುವ ೨೧ ದಿನಗಳ ಸೂಟಿಯನ್ನು ಪುನರ್ವಿಮರ್ಶಿಸಿ ಅದನ್ನು ೧೨ ದಿನಗಳಿಗಿಳಿಸಬೇಕೆಂದು ನಿರ್ಧರಿಸಿದ್ದಾರೆ. ಪರದೇಶಗಳಲ್ಲಿ ಕೇವಲ ೮—೧೦ ಮಾತ್ರ ಸೂಟಿ ದಿನಗಳಿರುವದರಿಂದ ಈ ೧೨ ದಿನಗಳ ರಜೆಗೆ ಒಪ್ಪಬೇಕೆಂದು ಕೋರಲಾಗಿದೆ. ೧) ರಾಮನವಮಿ ೨] ಕೃಷ್ಣಾಷ್ಟಮಿ ೩] ಗಣೇಶ ಚತುರ್ಥಿ ೪] ದಸರೆ ೫] ದೀಪಾವಳಿ ಮುಸಲ್ಮಾನ ೧] ರಮಜಾನ ೨] ಬಕರಈದ. ಪಾರ್ಶಿ ೧] ಝುರಾರತೋಷ್ತ ೨] ಜೀಲದಾದರಾಲ ಜೈನ ೧) ಮಹಾವೀರ ಜಯಂತಿ ಇದರ ಹೊರ್ತು ಜನವರಿ ೩೦ ಮಹಾತ್ಮರ ದಿನ ಮತ್ತು ಅಗಷ್ಟ ೧೫ ಸ್ವಾತಂತ್ರ್ಯ ದಿನ ಹೀಗೆ ೧೨ ದಿನಗಳಿವೆ.

ಹೊಸದಿಲ್ಲಿ

ಮಹಾತ್ಮರ ಕೊಲೆಯ ಪ್ರಕರಣದ ವಿಚಾರಣೆ ಕೆಂಪು ಕೋಟೆಯಲ್ಲಿ ಮೇ ತಿಂಗಳ ಮೊದಲನೇ ವಾರದಿಂದ ಪ್ರಾರಂಭವಾಗುವದು. ಇದಕ್ಕಾಗಿ ವಿಶೇಷ ನ್ಯಾಯಾಲಯವನ್ನು ಸ್ಥಾಪಿಸಿದ್ದು ಯುಕ್ತಪ್ರಾಂತದಲ್ಲಿ ಸೆಶನ್ಸ ಜಜ್ಜರಾಗಿರುವ ಶ್ರೀ. ರಾಮಚರಣ ಇವರನ್ನು ನ್ಯಾಯ ಮಂಡಲದ ಅಧ್ಯಕ್ಷರೆಂದು ನೇಮಿಸಿದೆ. ೧೦ ಜನ ಒಟ್ಟು ಆರೋಪಿಗಳಿರುವರು. ನಥುರಾಮ ಗೋಡಸೆ ಬಿರ್ಲಾಭವನದ ಬಾಂಬು ಪ್ರಕರಣದ ಆರೋಪಿ ಮದನಲಾಲ ಇವರಲ್ಲದೆ ವಿ. ಡಿ. ಸಾವರಕರ ಗೋಪಾಲ ಗೋಡಸೆ, ಆಪಟೆ, ಖರಕರೆ ಪರಚುರೆ ಶಂಕರ ಬಾಜಿ ಹಾಗೂ ಧನವತೆ ಇವರೂ ಇರುವರು.

ಬ್ರಹ್ಮದೇಶದ ಪ್ರಥಮ ಮುಖ್ಯ ಮಂತ್ರಿ ಥಕಿಂಗ ಅಂಗಸಾನರ ಪತ್ನಿ ಶ್ರೀಮತಿ ಅಂಗಸಾನರು ದಿಲ್ಲಿಗೆ ಬಂದಾಗ ದಿಲ್ಲಿ ಮಹಿಳಾ ಸಂಘದವರು ಅವರನ್ನು ಸ್ವಾಗತಿಸಿದರು. ಅವರಿಗಾಗಿ ಒಂದು ಸಂತೋಷಕೂಟವನ್ನೇರ್ಪಡಿಸಲಾಗಿತ್ತು.

ಸ್ಟರ್ಲಿಂಗ ಮಾತುಕತೆಗಳಿಗಾಗಿ ಹಿಂದುಸ್ಥಾನ ಸರಕಾರದ ಅರ್ಥ ಸಚಿವರಾದ ಶ್ರೀ. ಷಣ್ಮುಖಂ ಚೆಟ್ಟಿಯವರು ಮೇ ೨ಂಕ್ಕೆ ಲಂಡನಿಗೆ ಹೋಗಲಿರುವರು. ಇವರೊಡನೆ ಶಿಷ್ಟಮಂಡಳವೊಂದು ಹೋಗಲಿದೆ.

ಹಿಂದುಸ್ಥಾನ ಗವರ್ನರ ಜನರಲ್ ಲಾರ್ಡ ಮೌಂಟಬ್ಯಾಟನ್ನರು ಜೂನ ತಿಂಗಳಲ್ಲಿ ನಿವೃತ್ತರಾಗುವರೆಂದು ಅಧಿಕಾರಿ ವರ್ಗಗಳಿಂದ ತಿಳಿದು ಬರುತ್ತದೆ.

ಅ. ಭಾ. ಚರಕ ಸಂಘದಿಂದ ಮನ್ನಣೆ ಪಡೆದ ಕೈನೂಲು ಅಥವಾ ಅವರಿಂದ ಪ್ರಮಾಣಿಸಲ್ಪಟ್ಟ ಖಾದಿಯನ್ನು ಬೇಕಾದಷ್ಟು ಪ್ರಮಾಣದಲ್ಲಿ ಹೊರಗೆ ಕಳಿಸಬಹುದೆಂದು ಸರಕಾರದವರು ಪ್ರಕಟಿಸಿದ್ದಾರೆ.

ದಿಲ್ಲಿಯ ವಿಶ್ರಾಂತಿ ಭವನದಲ್ಲಿ ಕಳೆದ ತಿಂಗಳಿಂದ ಸ್ಥಾನಬದ್ಧತೆಯಲ್ಲಿದ್ದ ರೇವಾದ ಹಿಂದಿನ ಮಹಾರಾಜರು ಪೋಲೀಸರ ಅಪ್ಪಣೆ ಇಲ್ಲದೆ ರೇವಾಕ್ಕೆ ಹೋಗಿರುವರೆಂದು ತಿಳಿಯುತ್ತದೆ.

ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿಯ ಆಡಳಿತವನ್ನು ಧರ್ಮದರ್ಶಿಗಳ ಮಂಡಲಕ್ಕೆ ಒಪ್ಪಿಸಲಾಗುವದೆಂದು ಬಾಬು ರಾಜೇಂದ್ರ ಪ್ರಸಾದರು ಹೇಳಿದರು.

ಬಟ್ಟೆ ಬೆಲೆಯನ್ನು ಅಂಕಿತದಲ್ಲಿಡಲು ವಿನಿಯಂತ್ರಣದ ಕಾಲಕ್ಕೆ ಸರಕಾರ ಮತ್ತು ಗಿರಣಿ ಯೊಡೆಯರಲ್ಲಿ ಆದ ಒಡಂಬಡಿಕೆ ಯಶಸ್ವಿಯಾಗಲಿಲ್ಲಾದ್ದರಿಂದ ಪರಿಸ್ಥಿತಿಯನ್ನು ಎದುರಿಸಲು ಯಾವ ಉಪಾಯಗಳನ್ನು ಕೈಕೊಳ್ಳಬೇಕೆಂದು ಸರಕಾರ ವಿಚಾರಮಾಡಹತ್ತಿದೆ. ಕೆಲ ದಿನಗಳಲ್ಲಿ ಇದರ ನಿರ್ಣಯ ಹೊರಬೀಳಬಹುದು.

೧೯೪೭—೪೮ ನೇ ಇಸ್ವಿಯಲ್ಲಿ ಹಿಂದುಸ್ಥಾನದ ಹತ್ತಿಬೆಳೆಯ ಅಂದಾಜು ಪ್ರಕಟಿಸಲ್ಪಟ್ಟಿದ್ದು ಒಟ್ಟು ೭೨೩೯೦೦೦ ಎಕರೆ ಭೂಮಿಯಲ್ಲಿ ಹತ್ತಿಯನ್ನು ಬಿತ್ತಲಾಗಿದೆ. ಅಂದರೆ ಹಿಂದಿನ ವರುಷಕ್ಕಿಂತ ನೂರಕ್ಕೆ ೮ ರಷ್ಟು ಹತ್ತಿಕ್ಷೇತ್ರ ಕಡಿಮೆಯಾದಂತಾಯಿತು. ಬಂಗಾಲ ೬೧೯೦೦೦ ಎಕರೆ ಉಮರಾ ೩೬೯೯೦೦೦ ಎಕರೆ, ಅಮೇರಿಕನ್ ೨೧೯೦೦೦ ಎಕರೆ ಮತ್ತು ಇತರ ೨೪೭೨೦೦೦ ಎಕರೆ.

ಜುನಾಗಡದ ನವಾಬರ ಆಡಳಿತ ಸೆಕ್ರೆಟರಿಯೆಟದಲ್ಲಿ ನೌಕರಿಯಾಗಿದ್ದವನೊಬ್ಬನನ್ನು ಸೆರೆ ಹಿಡಿಯಲಾಗಿದೆ. ಜುನಾಗಡದಲ್ಲಿಯ ಸೈನ್ಯಬಲವೆಷ್ಟು ಮುಂತಾದ್ದನ್ನು ಇವನು ರಜಕಾರರಿಗೆ ತಿಳಿಸುತಿದ್ದನೆಂದೂ ಅಲ್ಲಿನ ಪರಿಸ್ಥಿತಿಯನ್ನು ತಪ್ಪಾಗಿ ತಿಳಿಸುತ್ತಿದ್ದನೆಂದೂ ಆರೋಪ. ಇವನ ಮನೆಯಲ್ಲಿ ತಪಾಸ ಮಾಡಲಾಗಿ ಮುದ್ದು ಕಾಡತೂಸುಗಳು ದೊರೆತವು.

ಹಿಂದುಸ್ಥಾನದಲ್ಲಿ ಕೇಂದ್ರ ರಾಷ್ಟ್ರೀಯ ಗ್ರಂಥಾಲಯವೊಂದನ್ನು ಸಂಸ್ಥಾಪಿಸುವ ಅವಶ್ಯಕತೆಯನ್ನು ಕುರಿತು ವಿಚಾರಮಾಡಿ ವರದಿಯನ್ನೊಪ್ಪಿಸಲು ಹಿಂದುಸ್ಥಾನ ಸರಕಾರದ ಶಿಕ್ಷಣ ಸಲಹೆಗಾರರಾದ ಡಾ. ತಾರಾಚಂದರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ನೇಮಿಸಲಾಗಿದೆ. ಕಳೆದವಾರ ಸಮಿತಿಯ ಮೊದಲನೆ ಸಭೆ ಸೇರಿದ್ದಿತು.

ಮದ್ರಾಸ

ಬಿಝುವಾಡದಿಂದ ೮ ಮೈಲಿನ ಮೇಲೆ ಇರುವ ಪೆನಮೂರಲ್ಲಿ ಭಕ್ತಮಸೂಲಿಗೆ ಹೋಗಿದ ಪೋಲೀಸರು ಮತ್ತು ಸಶಸ್ತ್ರತಂಡದಲ್ಲಿ ೧೭ ಕ್ಕೆ ಬಡೆದಾಟವಾಗಿ ಪೋಲೀಸರು ಗುಂಡು ಹಾಗು ಅಶ್ರುವಾಯುವನ್ನು ಉಪಯೋಗಿಸಿದರು. ೨೨ ಜನರಿಗೆ ಗಾಯಗಳಾಗಿವೆ.

ರೇಲ್ವೆ ಧಾನ್ಯ ಅಂಗಡಿಗಳ ವಿಚಾರಣೆಗಾಗಿ ನೇಮಿಸಲ್ಪಟ್ಟ ಸಕ್ಸೆನಾ ಸಮಿತಿಯ ಶ್ರೀ ಮೋಹನಲಾಲ ಸಕ್ಸೆನಾ ಕೆ. ಸಂತಾನಂ ಮತ್ತು ಖಂಡೂಭಾಯಿ ದೇಸಾಯಿ ಇವರು ೧೮ ಕ್ಕೆ ನಾಗಪೂರದಲ್ಲಿ ಕೆಲವು ಗಂಟೆ ನಿಂತು ಮರುದಿನ ಬಿಜವಾಡದಲ್ಲಿ ಉಳಿಯುವರು. ೨೦ ಕ್ಕೆ ಮದ್ರಾಸಕ್ಕೆ ಬಂದು ೬ ದಿನ ಆ ಪ್ರಾಂತದಲ್ಲಿ ಸಂಚರಿಸುವರು.

ಮಲಬಾರದಲ್ಲಿ ಕಮ್ಯುನಿಸ್ಟರ ಚಟುವಟಿಕೆಗಳು ಜೋರಾಗಹತ್ತಿವೆ. ಇದೇ ೧೫ ಕ್ಕೆ ಅವರು ಕಿಲ್ಲಂಚೇರಿಯಲ್ಲಿ ಸಶಸ್ತ್ರರಾಗಿ ಪೋಲೀಸರ ಮೇಲೆ ಏರಿಹೋಗಲು ಅವರು ಗೋಳೀಬಾರು ಮಾಡಿದರು. ೬ ಜನರು ಮಡಿದರು ನಾಲ್ವರಿಗೆ ಗಾಯಗಳಾಗಿವೆ.

ಮದ್ರಾಸದಲ್ಲಿ ಸೈನಿಕರು ರೇಲ್ವೆ ಪಾರ್ಸಲ್ ಕಚೇರಿಯಲ್ಲಿ ರಾತ್ರಿ ನುಗ್ಗಿ ಅಲ್ಲಿ ಕೆಲಸ ಮಾಡುತ್ತಿದ್ದವರ ಮೇಲೆ ಗುಂಡು ಹಾರಿಸಿದರಂತೆ. ಅದರೆ ಸುದೈವದಿಂದ ಗುಂಡು ಯಾರಿಗೂ ತಾಗಲಿಲ್ಲ. ಗುಂಡಿನ ಸಪ್ಪಳ ಕೇಳಿ ಕಾವಲುಗಾರರು ಓಡಿಬಂದರು. ಸೈನಿಕರಿಗೂ ಕಾವಲುಗಾರರಿಗೂ ಚಕಮಕಿ ನಡೆಯಿತು. ಪೋಲೀಸರು ಬಂದು ಸೈನಿಕರನ್ನು ಬಂಧಿಸಿದರು.

ಪ. ಬಂಗಾಲ

ಕಲಕತ್ತೆಯಿಂದ ೨೦ ಮೈಲುಗಳ ಮೇಲಿರುವ ಬರಾಕಪುರದ ಹತ್ತರ ಗಂಗಾ ನದಿಯ ದಂಡೆಯ ಮೇಲೆ ಸ್ನಾನದ ಘಾಟನ್ನು ಕಟ್ಟಿಸಿ ಅದಕ್ಕೆ ಗಾಂಧೀ ಘಾಟವೆಂದು ಹೆಸರಿಡಲು ನಿರ್ಧರಿಸಲ್ಪಟ್ಟಿದ್ದು ಅದರ ಶಂಕು ಸ್ಥಾಪನೆ ಗವರ್ನರ ರಾಜಗೋಪಾಲಾಚಾರ್ಯರ ಹಸ್ತದಿಂದ ಆಯಿತು. ಇದೇ ಸ್ಥಳದಲ್ಲಿ ಗಾಂಧೀಜಿಯ ಚಿತಾಭಸ್ಮ ಫೆಬ್ರುವರಿ ೧೨ ಕ್ಕೆ ವಿಸರ್ಜಿಸಲಾಗಿತ್ತು.

ರಾಷ್ಟ್ರಗೀತದ ಸಂಬಂಧದಲ್ಲಿ ವಾದವನ್ನು ಬಿಟ್ಟುಗೊಡಿರೆಂದು ಪಶ್ಚಿಮ ಬಂಗಾಲದ ಗವರ್ನರರಾದ ರಾಜಗೋಪಾಲಾಚಾರ್ಯರು ಕಲಕತ್ತಾ ವಿಶ್ವವಿದ್ಯಾಲಯದ ಕಾಲೇಜ ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಮಾಡುತ್ತ ಹೇಳಿದರು. ವಂದೇಮಾತರಂ ಪದವಿರಬೇಕೋ ಜನಗಣಮನ ಅಧಿನಾಯಕ ಪದಬೇಕೋ ಎಂಬವಾದ ಎತ್ತಿ ರವೀಂದ್ರನಾಥ ಮತ್ತು ಬಂಕಿಮಚಂದ್ರರಂಥ ವಿಭೂತಿಗಳ ಅಪಮಾನ ಮಾಡಬೇಡಿರೆಂದು ಅವರು ಹೇಳಿದರು.

ಕಲಕತ್ತದಲ್ಲಿ ಕಳೆದ ಮೂರು ವಾರಗಳಿಂದ ಪ್ರತಿವಾರ ೬೭ ಜನರು ಕ್ಷಯರೋಗಕ್ಕೆ ತುತ್ತಾಗುತಿದ್ದಾರೆ. ಇದನ್ನು ಹೇಗೆ ತಡೆಯಬೇಕೆಂಬು ಸರಕಾರದವರು ವಿಚಾರ ಮಾಡುತ್ತಿದ್ದಾರೆ.

ಕಲಬುರ್ಗಿ ಸೆಂಟ್ರಲ ಜೇಲಿನಲ್ಲಿ ಅಕಸ್ಮಾತ್ ಭಯಸೂಚಕ ಗಂಟೆ ಹೊಡೆದು ಲಾಠಿ ಪ್ರಹಾರ ಮಾಡಲಾಯಿತು. ೧೪ ಜನರು ಗಾಯಗೊಂಡರು ಬೆಣಕಲ ದೇಸಾಯರಾದ. ಭೀಮಸೇನರಾಯರು ಅದರಿಂದ ನಿಧನ ಹೊಂದಿದರು. ಕೈದಿಗಳು, ಬರಾಕುಗಳಲ್ಲಿ ಹೋಗಲು ನಿರಾಕರಿಸಿದರೆಂದೂ ಅದುದರಿಂದ ಲಾಠಿ ಪ್ರಹಾರ ಮಾಡಬೇಕಾಯಿತೆಂದೂ ನಿಜಾಮ ಸರಕಾರದ ಪ್ರಕಟನೆ. ಭೀಮಸೇನರಾಯರು ಗೀತಾಪಠನ ಮಾಡುವದನ್ನು ನಿಲ್ಲಿಸುವದಿಲ್ಲೆಂದು ಹೇಳಿದ್ದರಿಂದ ಅವರ ಮೇಲೆ ಗೋಳೀಬಾರು ಮಾಡಿತೆಂದೂ ಸುದ್ದಿ.

ಹೈದ್ರಾಬಾದ ಕಾಂಗ್ರೆಸ ಅಧ್ಯಕ್ಷರಾದ ಸ್ವಾಮಿ ರಮಾನಂದತೀರ್ಥ ಇವರು ೧೫ ನೇ ತಾರೀಕಿನಿಂದ ಕಲಬುರ್ಗಿ ಸೆರೆಮನೆಯಲ್ಲಿ ಅನ್ನಸತ್ಯಾಗ್ರಹವನ್ನು ಪ್ರಾರಂಭಿಸಿದ್ದು ಅವರ ಪ್ರಕೃತಿ ಚಿಂತಾಜನಕವಾಗಿದೆಯೆಂದು ತಿಳಿಯುತ್ತದೆ. ಸೆರೆಮನೆಯಲ್ಲಿರುವ ಸಹಬಂಧುಗಳನ್ನು ನಡೆಸಿಕೊಳ್ಳುವ ರೀತಿಯನ್ನು ನಿಷೇಧಿಸಲು ಅವರು ಅನ್ನಸತ್ಯಾಗ್ರಹ ಹೂಡಿದ್ದಾರೆ.

ಪಾಕಿಸ್ತಾನ

ಪಶ್ಚಿಮ ಪಂಜಾಬ ಸರಕಾರವು ಸಿನೇಮಾಗಳನ್ನು ರಾಷ್ಟ್ರೀಕರಿಸಿ ಬಂಡವಲಾಥದಿಂದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲು ಹವಣಿಸಿದ್ದಾರೆ. ಬೇಸಿಗೆಯಲ್ಲಿ ಪರ್ವತ ಪ್ರದೇಶಗಳಿಗೆ ಹೋಗುವದರಿಂದ ೬ ಲಕ್ಷ ರೂ. ವೆಚ್ಚವಾಗುತಿತ್ತು. ಈ ಸಲ ಈ ಹಣವನ್ನು ಉಳಿಸಬೇಕೆಂದು ಗೊತ್ತುಮಾಡಿದ್ದಾರೆ. ೨ ಲಕ್ಷರೂಪಾಯಿ ವೆಚ್ಚಮಾಡಿ ಕಚೇರಿಗಳಲ್ಲಿ ಬಿಸಿಲಿನ ಬೇಗೆ ತಾಕದಂತೆ ಯಂತ್ರಗಳನ್ನು ಕೂಡಿಸಲಿರುವರು.

ಸಿಂಧ ಮಂತ್ರಿ ಮಂಡಳದ ಖಾತೆಗಳಲ್ಲಿ ಬದಲಾವಣೆಯಾಗಿದೆ. ಎಂ. ಎ. ಖುರೆಷಿ ಮುಖ್ಯ ಮಂತ್ರಿ ಅರ್ಥಿಕ ರಾಜಕೀಯ ಪೌರನಿಗಸರ ಮತ್ತು ಸಾಮಾನ್ಯ ಆಡಳಿತ ಖಾತೆ ೨) ಪೀರ ಇಲಾಹಿಬಕ್ಷ ನವಾಜಅಲಿ ಗೃಹ, ಶಿಕ್ಷಣ, ಅರೋಗ್ಯ ಮತ್ತು ಸ್ಥಾನಿಕ ಸ್ವರಾಜ್ಯ ೩) ಪೀರ ಗುಲಾಮ ಅಲ್ಲಿಖಾನ ತಾಲಪುರ ಕಂದಾಯ ಮತ್ತು ಪಿ. ಡಬ್ಲ್ಯು. ಡಿ ೪) ಕಾಜಿಫಜುಲ್ಲಾ ಖಾದೇದುಲ್ಲಾ ಒಕ್ಕಲತನ ಉದ್ಯೋಗ ಅಹಾರ ನಾಗರಿಕ ಪೂರೈಕೆ ಕೂಲಿಕಾರ ಮತ್ತು ಕಾಯದೆ ಹೀಗೆ ಖಾತೆಗಳನ್ನು ಒಪ್ಪಿಸಿ ಕೊಡಲಾಗಿದೆ.

ಪಾಕಿಸ್ತಾನದ ಗಡಿಯ ಮೇಲಿರುವ ರಾಜಪಟ್ಟದಲ್ಲಿ ಪಾಕಿಸ್ತಾನಕ್ಕೆ ಹೊರಟಿದ್ದ ಗಾಡಿಗಳನ್ನು ಎರಡು ರಾತ್ರಿ ತಪಾಸಮಾಡಲಾಗಿ ಅವುಗಳಲ್ಲಿ ೫೦ ಲಕ್ಷ ರೂಪಾಯಿಗಳ ಸೀರೆ ಧೋತರ ಮುಂತಾದ ಬಟ್ಟೆಗಳು ದೊರೆತವು. ಪಾಕಿಸ್ತಾನಕ್ಕೆ ಅವನ್ನು ಕಳ್ಳತನದಿಂದ ಸಾಗಿಸಲಾಗುತ್ತಿತ್ತಂತೆ.

ಪಾಕಿಸ್ತಾನ ಗವರ್ನರ ಜನರಲ್‌ರಾದ ಬ್ಯಾ. ಜಿನ್ನಾ ಸಾಹೇಬರು ಸರಹದ್ದ ಸಂಚಾರವನ್ನು ಕೈಕೊಂಡದ್ದು ಪೇಶಾವರದಲ್ಲಿ ಖಾನ ಅಬ್ದುಲ್ ಗಫರಖಾನರನ್ನು ಭೆಟ್ಟಿಯಾದರು. ಮಾತುಕತೆ ಒಳೆ ಸೌಹಾರ್ದದಿಂದ ಸಾಗಿದವೆಂದು ಗಫಾರಖಾನರ ಸರಕಾರಿ ಭವನದಿಂದ ಹೊರಗೆ ಬಂದಬಳಿಕ ಹೇಳಿದರು.

ಜುಲೈ ಒಂದನೇ ತಾರೀಕಿನಿಂದ ಪಾಕಿಸ್ತಾನ ಬ್ಯಾಂಕನ್ನು ಸ್ಥಾಪಿಸಬೇಕೆಂಬ ಮಸೂದೆ ಪಾಕಿಸ್ತಾನ ಹಿರಿಯೊಳ್ಳುಗದ ಬರುವ ಅಧಿವೇಶನದಲ್ಲಿ ಮಂಡಿಸಲ್ಪಡುವದೆಂದು ತಿಳಿಯುತ್ತದೆ. ಹಿಂದುಸ್ತಾನದ ರಿಝುರ್ವ ಬ್ಯಾಂಕ ೫ ಕೋಟಿ ಬಂಡವಲಿನದಿದ್ದರೆ ಪಾಕಿಸ್ತಾನ ಬ್ಯಾಂಕು ೩ ಕೋಟಿ ಬಂಡವಲನ್ನು ಹಾಕುವದು. ರಿಝುರ್ವ ಬ್ಯಾಂಕಿನಿಂದ ಈ ಬ್ಯಾಂಕು ಚಲನ, ಸಾರ್ವಜನಿಕ ಸಾಲ ವಿನಿಮಯದ ನಿಯಂತ್ರಣ ಮೊದಲಾದ ಎಲ್ಲ ಅಧಿಕಾರವನ್ನು ಪಡೆದುಕೊಳ್ಳುವದು.

ಪಶ್ಚಿಮ ಪಂಜಾಬಕ್ಕೆ ಸಾಗಿಸಲ್ಪಡುವ ಅಕ್ಕಿಯ ಮೇಲೆ ಪ್ರತಿಮಣಕ್ಕೆ ೧-೮-೦ ಕರವನ್ನು ವಸೂಲ ಮಾಡಲು ಪಾಕಿಸ್ತಾನ ಸರಕಾರ ಸಿಂಧ ಸರಕಾರಕ್ಕೆ ಅಧಿಕಾರ ಕೊಟ್ಟಿದೆ. ಕಳ್ಳ ಪೇಟೆ ತಡೆಯಲು ಸಿಂಧದಲ್ಲಿ ದರಗಳು ಏರಬಾರದೆಂದು ಹೀಗೆ ಮಾಡಲಾಗಿದೆಯಂತೆ.

ಬರುವ ವರುಷಗಳೊಳಗಾಗಿ ಹಿಂದುಸ್ತಾನದ ಅಹಾರ ಉತ್ಪಾದನೆಯನ್ನು ೧ ಕೋಟಿ ಟನ್ ಹೆಚ್ಚಿಸಬೇಕೆಂದೂ ಸರ್ ಪುರುಷೋತ್ತಮದಾಸ ಠಾಕುರದಾಸರ ನೇತೃತ್ವದಲ್ಲಿ ಕೂಡಿದ ಅಹಾರಧಾನ್ಯ ಧೋರಣ ಸಮಿತಿಯವರು ಶಿಫಾರಸು ಮಾಡಿದ್ದಾರೆ. ಹಿಂದುಸ್ತಾನದ ಅಹಾರ ಪರಿಸ್ಥಿತಿ ಸುಧಾರಿಸಿ ಭದ್ರವಾದ ತಳಹದಿಯುಳ್ಳದಾಗಬೇಕಾದರೆ ಇಷ್ಟು ಉತ್ಪಾದನೆ ಅವಶ್ಯವೆಂದು ಅವರ ಅಭಿಪ್ರಾಯ.

ಕರ್ನಾಟಕ

ಧಾರವಾಡ

ಗುಂತಕಲ್—ಹುಬ್ಬಳ್ಳಿ ಗಾಡಿಯು ಬೆಳಗಿನ ೫ ಗಂಟೆಗೆ ಹುಬ್ಬಳ್ಳಿಗೆ ಬರುವದುಂಟು. ಆದರೆ ೧೪ ನೇ ತಾರೀಕು ನಿಜಾಮ ಹದ್ದಿಯಲ್ಲಿರುವ ಮಾನಿರಾಬಾದ ನಿಲ್ದಾಣದ ಹತ್ತರ ಅರಬ ಸೈನಿಕರಿಂದ ತೊಂದರೆಯಾದ್ದರಿಂದ ಗಾಡಿಯು ಮುಂಜಾನೆ ೯—೩೦ ಗಂಟೆಗೆ ಹುಬ್ಬಳ್ಳಿಗೆ ಬಂದಿತು. ಈ ಚಕಮಕಿಯಲ್ಲಿ ಓರ್ವನು ಸತ್ತಿರುವನೆಂದು ತಿಳಿಯುತ್ತದೆ.

ಕರ್ನಾಟಕ ಸ್ವದೇಶೀ ವಸ್ತು ಪ್ರದರ್ಶನವು ಗದುಗಿನಲ್ಲಿ ಇದೇ ೨೫ ನೇ ತಾರೀಕಿನಿಂದ ಧಾರವಾಡ ಜಿಲ್ಲಾ ಲೋಕಲ್ ಬೋರ್ಡಿನ ಪರವಾಗಿ ಪ್ರಾರಂಭವಾಗುವದು. ರೇಲ್ವೆ ಶಾಖೆಯ ಮಂತ್ರಿಗಳಾದ ಡಾ. ಜಾನಮಥಾಯಿ ಇವರು ಈ ಪ್ರದರ್ಶನದ ಉದ್ಘಾಟನ ಮಾಡಲಿರುವರು. ಜಿಲ್ಲಾ ಲೋಕಲ್ ಬೋರ್ಡಿನವರು ಏರ್ಪಡಿಸಿದ್ದ ಇದು ಮೂರನೆಯದು ಪ್ರದರ್ಶನ. ಈ ಮೊದಲು ಧಾರವಾಡ ಹುಬ್ಬಳ್ಳಿಗಳಲ್ಲಿ ಪ್ರದರ್ಶನಗಳು ಜರುಗಿದ್ದವು. ಇದರಲ್ಲಿ ಕರ್ನಾಟಕಸ್ಥರೆಲ್ಲ ಭಾಗವಹಿಸಿ ಇದನ್ನು ಯಶಸ್ವಿಗೊಳಿಸಬೇಕೆಂದು ಬೋರ್ಡಿನವರು ಬಿನ್ನವಿಸಿದ್ದಾರೆ.

ಹುಬ್ಬಳ್ಳಿಯ ಗರ್ಲ್ಸ ಇಂಗ್ಲಿಶ ಸ್ಕೂಲನ್ನು ಹಾಯಸ್ಕೂಲ ಮಾಡಲು ವಿದ್ಯಾಖಾತೆಯವರು ಅಪ್ಪಣೆ ಕೊಟ್ಟಿದ್ದು ಈ ವರುಷ ಜೂನದಿಂದ ಅಲ್ಲಿ ೬ ನೇ ಇಯತ್ತೆ ಪ್ರಾರಂಭವಾಗುವದು.

ಬೆಳಗಾವಿ

ಬೆಳಗಾವಿ ತಾಲೂಕಿನ ಕೋವಾಡ ದೇಸಾಯರಾದ ಶ್ರೀ. ಗಣಪತರಾವ ರಾಮಚಂದ್ರರಾವ ದೇಸಾಯಿ ಇವರು ಜಾತಿ ದ್ವೇಷವನ್ನು ಹಬ್ಬಿಸುವಂಥ ಭಾಷಣ ಮಾಡುವರೆಂಬ ಆರೋಪದ ಮೇಲೆ ಜಿಲ್ಲಾ ಮ್ಯಾಜಿಸ್ಟ್ರೇಟರು ನಿರ್ಬಂಧಕ ಹುಕುಮನ್ನು ಪ್ರಯೋಗಿಸಿ ಆರು ತಿಂಗಳ ವರೆಗೆ ಯಾವದೇ ಸಭೆಗೆ ಹೋಗಬಾರದು ಭಾಷಣ ಮಾಡಬಾರದು ವೃತ್ತಪತ್ರಿಕೆಗಳಲ್ಲಿ ಲೇಖ ಕೊಡಬಾರದೆಂದು ಅವರಿಗೆ ವಿಧಿಸಿದ್ದಾರೆ.

ಖಾನಾಪೂರ ತಾಲೂಕಿನ ಗುಂಡಪಿ ಗ್ರಾಮದ ಹತ್ತು ಜನ ಜಮೀನದಾರರು ಬೆಳಗಾವಿಯ ಕಲೆಕ್ಟರರಿಗೆ ಅಲ್ಲಿಯ ಕಮ್ಯುನಿಷ್ಟ ಪಕ್ಷದ ನಾಯಕರ ವಿರುದ್ಧ ದೂರಿಕೊಂಡಿದ್ದಾರೆ. ರಾಮಚಂದ್ರ ನಾಗೇಶ ಕುಲಕರ್ಣಿಯೆಂಬ ಶಾಲಾ ಮಾಸ್ತರರು ರೈತರಲ್ಲಿ ಜಮೀನದಾರರ ವಿರುದ್ಧ ಅಪಪ್ರಚಾರ ಮಾಡಿ ಭತ್ತ ಕೊಡಬೇಡಿರೆಂದು ಅವರಿಗೆ ಪ್ರಚೋದಿಸಿರುವರೆಂದೂ ಅವರು ಬರೆದಿದ್ದಾರೆ.

ಕಾರವಾರ ಜಿಲ್ಲೆಯಿಂದ ಗಡೀಪಾರಾಗಿ ಬಂದ ಕಮ್ಯುನಿಸ್ಟ ಕಾರ್ಯಕರ್ತರಾದ ಮ್ಹಾಳಸೇಕರ ಮತ್ತು ನಾಯಕ ಇವರಿಬ್ಬರೂ ಪೋಲೀಸರ ಕೈಗೆ ಸಿಕ್ಕಿರುವರೆಂದು ಸುದ್ದಿ ಬಂದಿತ್ತಷ್ಟೇ; ಆದರೆ ಈಗ ನಾಯಕ ಇವರು ಇನ್ನೂ ಸಿಕ್ಕಿಲ್ಲೆಂದು ತಿಳಿಯುತ್ತದೆ.

ಆರ್. ಎಸ್. ಎಸ್. ಕಾರ್ಯಕರ್ತರಾದ ಶ್ರೀ. ಜಿಗಜಿನ್ನಿ ವಕೀಲ, ಕಾಕಡೆ ಮತ್ತು ಬೇರೆ ಐವರು ಹಾಯಕೋರ್ಟಿನಿಂದ ಬಂಧಮುಕ್ತ ಮಾಡಲ್ಪಟ್ಟಿರುವರು.

ಬಳ್ಳಾರಿ

ಹೊಸಪೇಟೆಯ ಹತ್ತರ ಇರುವ ತುಂಗಭದ್ರಾ ಅಣೆಕಟ್ಟಿನ ಸ್ಥಳದಲ್ಲಿ ಒಂದು ಕಾಲು ದಾರಿ ಇದ್ದು ನಿಜಾಮ ಹದ್ದಿಯಿಂದ ಇಲ್ಲಿಗೆ ಬರುವವರು ಅದನ್ನು ಉಪಯೋಗಿಸುವದುಂಟು. ಇಲ್ಲಿಂದ ಹೋಗಬೇಕೆನ್ನುವವನನ್ನು ಮುಸಲ್ಮಾನ ಕಾವಲುಗಾರನು ತಡೆದು ಬಿಡುತ್ತಾನೆ ಎಂದು ಹೊಸಪೇಟೆಯ ಕೋಅಪರೇಟಿವ್ ಸೆಂಟ್ರಲ್ ಬ್ಯಾಂಕಿನ ಅಧ್ಯಕ್ಷ ಶ್ರೀ. ಎ. ಚನ್ನಬಸಪ್ಪನವರು ತಿಳಿಸುತ್ತಾರೆ. ಈ ಕಾಲು ದಾರಿಯ ಮಾರ್ಗವಾಗಿಯೆ ಅರಬರು ಪಠಾಣರು ಹಿಂದುಸ್ತಾನದ ಪ್ರದೇಶದಲ್ಲಿ ದಾಳಿ ಮಾಡುವದರಿಂದ ಇಲ್ಲಿ ಬಲವಾದ ಕಾವಲಿರುವದು ಅವಶ್ಯವೆಂದು ಅವರ ಅಭಿಪ್ರಾಯ.

ಕರ್ನಾಟಕ ಏಕೀಕರಣ ಮಹಾ ಸಮಿತಿಯ ಉಪಾಧ್ಯಕ್ಷ ಶ್ರೀ. ಬಿ. ಎಂ. ಮುನವಳ್ಳಿಯವರು ಏಕೀಕರಣದ ಪ್ರಚಾರಕ್ಕಾಗಿ ಆದವಾನಿ ತಾಲೂಕಿನಲ್ಲಿ ಸಂಚರಿಸಲಿರುವ ಶ್ರೀ ಉರುವಕೊಂಡ ಮಹಾಸ್ವಾಮಿಗಳ ಜೊತೆಯಲ್ಲಿ ಸಂಚರಿಸಲು ಹೋಗಿರುವರು

ಸೂಳಬೆಟ್ಟದಲ್ಲಿ ಶ್ರೀ ಗೋಪಾಲಕೃಷ್ಣ ದೇವಸ್ಥಾನದಲ್ಲಿ ಅಯುದು ವರುಷಗಳ ಲಾಗಾಯಿತು ಶ್ರೀ ರಾಮಭಜನಾ ಸಪ್ತಾಹ ನಡೆದುಕೊಂಡು ಬಂದಂತೆ ಈ ವರ್ಷವೂ ಇದೇ ೨೫ ರಿಂದ ಮೇ ೩ ರ ವರೆಗೆ ಸಪ್ತಾಹ ನಡೆಯುವದು. ಭಕ್ತರೆಲ್ಲ ಬಂದು ಭಜನೆಯಲ್ಲಿ ಭಾಗ ವಹಿಸಿ ತೀರ್ಥಪ್ರಸಾದ ಸ್ವೀಕರಿಸಬೇಕೆಂದು ಎಸ್. ವೀರೇಶ್ವರ ಭಟ್ಟ ಅರವಲೆಯವರು ಬಿನ್ನವಿಸುತ್ತಾರೆ.

ವಿಜಾಪುರ

ಮುಂಬಯಿ ಸರಕಾರದ ಗೃಹ ಮತ್ತು ಕಂದಾಯ ಮಂತ್ರಿಗಳಾದ ಮಾನ್ಯ ಮುರಾರಜಿ ದೇಸಾಯರು ೧೮ ಮತ್ತು ೧೯ ಎರಡು ದಿನ ವಿಜಾಪುರ ಜಿಲ್ಲೆಯ ದಕ್ಷಿಣ ಭಾಗದ ಕೆಲ ಹಳ್ಳಿಗಳನ್ನು ಸಂದರ್ಶಿಸಿದರು. ಬಾಗಲಕೋಟೆಯ ಸಾರ್ವಜನಿಕ ಸಭೆಯಲ್ಲಿ ೧೮ ನೇ ತಾರೀಕಿಗೆ ಮಾತಾಡುತ್ತ ತಾಳ್ಮೆಯಿಂದಿರಬೇಕೆಂದೂ ನೈತಿಕ ಸುಧಾರಣೆ ಮಾಡಿಕೊಂಡು ರಾಮರಾಜ್ಯವನ್ನು ಪ್ರಸ್ಥಾಪಿಸಲು ಸಹಾಯ ಮಾಡಬೇಕೆಂದೂ ಕೇಳಿಕೊಂಡು ಎಲ್ಲವೂ ಒಮ್ಮೆಲೆ ಬದಲಾಗದೆಂದೂ ಕೆಲ ಕಾಲ ಕ್ರಮಿಸಬೇಕಾಗುವದೆಂದೂ ಹೇಳಿದರು

ಗುಡೂರಿನಲ್ಲಿ ನಿರಾಶ್ರಿತನನ್ನುದ್ದೇಶಿಸಿ ಭಾಷಣ ಮಾಡುತ್ತ ಹಿಂದುಸ್ತಾನ ಸರಕಾರಕ್ಕೆ ನಿರಾಶ್ರಿತರ ಕಷ್ಟನಿಷ್ಠುರಗಳು ಗೊತ್ತಾಗಿವೆಂದೂ ಅವುಗಳ ನಿವಾರಣೋಪಾಯಗಳನ್ನು ಅವರು ಯೋಚಿಸುತ್ತಿರುವರೆಂದೂ ಆಶ್ವಾಸಿಸಿ ರಜಕಾರರು ಗುಂಡಗಿರಿ ಮಾಡುತ್ತಿರುವರೆಂದು ನೀವು ಅದಕ್ಕೆಳಸಬಾರದೆಂದು ಬಿನ್ನವಿಸಿದರು.

ಅಮರಾವತಿಯಲ್ಲಿ ಮಾನ್ಯ ಮಂತ್ರಿಗಳು ರೈತ ಪರಿಷತ್ತಿನ ಪ್ರಾರಂಭೋತ್ಸವವನ್ನು ಮಾಡುತ್ತ ಸರಕಾರವು ಕೇವಲ ರೈತರ ಇಲ್ಲವೆ ಕೂಲಿಕಾರರ ಸರಕಾರವಾಗಲಾರದೆಂದೂ ದೇಶದಲ್ಲಿರುವ ಎಲ್ಲ ವರ್ಗದವರ ಹಿತಸಂಬಂಧಗಳನ್ನು ಅದು ನೋಡಬೇಕಾಗುವದೆಂದೂ ಹೇಳಿದರು ಇನಾಮದಾರರಿಗೆ ಪರಿಹಾರವನ್ನು ಕೊಡದೆ ಅವರ ಹೊಲಗಳನ್ನು ಕಸಿದುಕೊಳ್ಳುವದೆಂದರೆ ಊಟ ಮಾಡಿದಂತೆಂದೂ ಆದುದರಿಂದ ಅವರಿಗೆ ಪರಿಹಾರ ಕೊಡಲಾಗುವದೆಂದು ಹೇಳಿ ಉಳುವ ರೈತನಿಗೆ ಹೊಲಸಿಕ್ಕುವಂತೆ ನೋಡಿಕೊಳ್ಳಲಾಗುವದೆಂದು ಹೇಳಿದರು.

ಭಗವತಿಯಲ್ಲಿ ಮಾನ್ಯ ಮಂತ್ರಿಗಳು ಅಂಬಲಿ ನೆಹರು ಸಭಾ ಭವನಗಳನ್ನು ಉದ್ಘಾಟಿಸಿ ಅಲ್ಲಿನ ರೈತರಲ್ಲಿನ ಐಕ್ಯವನ್ನು ಕೊಂಡಾಡಿದರು.

ಸುಕ್ಷೇತ್ರ ಬಂಥನಾಳ ಶಿವಯೋಗಿಗಳವರ ಉದಾರಾಶ್ರಯದಿಂದ ಸೋಲಾಪೂರ ಜಿಲ್ಲಾ ಪೈಕಿ ಲಚ್ಯಾಣ ಗ್ರಾಮದಲ್ಲಿ ದಿನಾಂಕ ೨೯—೪—೪೮ ನೇ ಗುರುವಾರ ದಿವಸ ಸರ್ವಧರ್ಮ ಪರಿಷತ್ತು ಜರಗುವದು. ಹಿಂದು, ಮುಸ್ಲೀಮ, ಶೀಖ, ಜೈನ, ಪಾರ್ಶಿ, ಕ್ರಿಸ್ತಿ, ವೀರಶೈವ, ಆರ್ಯ ಈ ಮೊದಲಾದ ಧರ್ಮಗಳ ವಿಷಯವಾಗಿ ಆಯಾ ಧರ್ಮದ ಪಂಡಿತರ ಭಾಷಣಗಳಾಗುವವು ಪ್ರಯುಕ್ತ ಸರ್ವರೂ ಬರಬೇಕಾಗಿ, ಕಾರ್ಯದರ್ಶಿಗಳು ಬಿನ್ನವಿಸುತ್ತಾರೆ.

ಬೆಂಗಳೂರ — ಮೈಸೂರು

ರಾಷ್ಟ್ರದ ತರುಣರ ಶೀಲ ಬಲಸಂವರ್ಧನೆ ಕಾಂಗ್ರೆಸ ಸೇವಾದಲದ ಗುರಿಯಾಗಿದ್ದು ಉತ್ತಮ ಆಡಳಿತದಾರರನ್ನು ನಿರ್ಮಿಸುವದು ಅದರ ಧ್ಯೇಯ; ಅದೇನು ಖಾಸಗಿ ಸೈನ್ಯವಲ್ಲ, ಶಿಸ್ತಿನಿಂದ ನಿಃಸ್ವಾರ್ಥಬುದ್ಧಿಯಿಂದ ದೇಶಕ್ಕೆ ಸೇವೆ ಸಲ್ಲಿಸುವದು ಹೇಗೆಂಬದನ್ನು ಅದು ಕಲಿಸುತ್ತದೆ. ಮಹಾತ್ಮರ ವಿಧಾಯಕ ಕಾರ್ಯಕ್ರಮವನ್ನು ಸಾಧಿಸಲು ಅಗತ್ಯವಿರುವ ಕಾರ್ಯಕರ್ತರನ್ನು ತರಬೇತುಗೊಳಿಸುದಕ್ಕಾಗಿ ಈ ಸಂಸ್ಥೆಯಿದೆ, ಆದುದರಿಂದ ಎಲ್ಲರೂ ಇದರ ಉಪಯೋಗ ಮಾಡಿಕೊಳ್ಳಬೇಕೆಂದು ಡಾ. ಎಸ್. ಎಸ್. ಹರ್ಡೀಕರರು ಬೆಂಗಳೂರಿನ ಸುದ್ದಿಗಾರರ ಸಭೆಯಲ್ಲಿ ಮಾತಾಡುತ್ತ ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತು ನಡೆಸಲಿರುವ ಗಮಕ ಅಧ್ಯಾಪಕರ ತರಬೇತಿ ವರ್ಗವು ಮೇ ೧೫ ರಿಂದ ಪ್ರಾರಂಭವಾಗಿ ನಾಲ್ಕು ತಿಂಗಳಿಗೆ ಕಡಮೆಯಿಲ್ಲದೆ ಬೆಂಗಳೂರಿನಲ್ಲಿ ನಡೆಯುವದು ವಿದ್ಯಾರ್ಥಿವೇತನ ಅಪೇಕ್ಷಿಸಿ ಬರೆದುಕೊಂಡವರಿಗೆ ವಿದ್ಯಾರ್ಥಿವೇತನ ಕೊಡುವದನ್ನು ನಿರ್ಧರಿಸಲು ಸಮಿತಿಯೊಂದನ್ನು ನೇಮಿಸಿದೆ. ವಿದ್ಯಾರ್ಥಿವೇತನ ಪಡೆದವರಲ್ಲದೆ. ಉಳಿದವರಿಗೂ ತರಗತಿಗಳಲ್ಲಿ ಪ್ರವೇಶದೊರೆವುದು. ಇವರಿಂದ ೧೦ ರೂ ಶುಲ್ಕ ಪಡೆಯಲಾಗುವದು.

ಮೈಸೂರು ಸರಕಾರದವರು ಬೆಂಗಳೂರು ಸೈನಿಕ ಶಿಬಿರಗಳನ್ನು ವಶಪಡಿಸಿಕೊಂಡು ಅವುಗಳನ್ನು ತಾವು ಉಪಯೋಗಿಸದಾಗಿ ತಿಳಿಯುತ್ತದೆ.

ಉತ್ತರ ಕನ್ನಡ

ಮುಂಬಯಿ ಗವರ್ನರರಾದ ಸರ್. ಮಹಾರಾಜಸಿಂಗರು ತಮ್ಮ ಹೆಂಡತಿಯೊಡನೆ ಕಾರವಾರದಲ್ಲಿ ಸಂಚರಿಸಿದರು. ಕಾರವಾರ ನಗರ ಸಭೆ, ಜಿಲ್ಲಾ ಲೋಕಲ್ ಬೋರ್ಡು ಜಿಲ್ಲಾ ಕಾಂಗ್ರೆಸ ಸಮಿತಿ ಮೊದಲಾದ ಅಧ್ಯಕ್ಷರಿಗೂ ಇತರ ಪ್ರಮುಖರಿಗೂ ಸಂದರ್ಶನವಿತ್ತರು. ಕಾರವಾರ ಮತ್ತು ಹುಬ್ಬಳ್ಳಿ ಅಥವಾ ಅಳ್ನಾವರ ಮತ್ತು ಸಿರಸಿಗಳನ್ನು ಹುಬ್ಬಳ್ಳಿಗೆ ಇಲ್ಲವೆ ಮೈಸೂರಿಗೆ ಜೋಡಿಸುವ ರೇಲ್ವೆ ಮಾರ್ಗದ ಅವಶ್ಯಕತೆಯನ್ನು ಈ ಸಂದರ್ಶಕರು ಹೇಳಿದರೆಂದು ತಿಳಿಯುತ್ತದೆ. ಪ್ರಾಂತಗಳ ಪುನರ್ಘಟನೆ ಅವಶ್ಯವಿಲ್ಲೆಂದು ಕೆಲವು ವಕ್ತಾರರು ಹೇಳಿದರಂತೆ.

ಜಿಲ್ಲೆಯ ಕೇಂದ್ರ ಅಬಕಾರಿ ಶಾಖೆಯ ಸುಮಾರು ೧೦೦ ಕ್ಕೆ ೬೦ ರಷ್ಟು ಶಿಬ್ಬಂದಿಯವರು ತಾ. ೧೨ ರಿಂದ ಸಂಪು ಹೂಡಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ. ಟಿ. ಟಿ. ಶರ್ಮರು ಉತ್ತರ ಕನ್ನಡ ಜಿಲ್ಲೆಯಲ್ಲಿ ಕಳೆದ ವಾರ ಸಂಚರಿಸಿ ಬಂದರು. ಕರ್ನಾಟಕ ಏಕೀಕರಣವಾಗದೆ ಕರ್ನಾಟಕದ ಉದ್ಧಾರವಿಲ್ಲೆಂದು ಅವರು ಸಾರ್ವಜನಿಕ ಭಾಷಣದಲ್ಲಿ ಹೇಳಿದರು. ಕಾರವಾರದ ಅರಣ್ಯ ಸಂಪತ್ತು ಹಾಳಾಗುತ್ತಿರುವದನ್ನು ನೋಡಿ ಮರುಗಿದರು.

ಉತ್ತರ ಕನ್ನಡ ಜಿಲ್ಲೆಯ ಲೋಕಲ್ ಫಂಡನ್ನು ಮೂರಾಣೆಗೆ ಏರಿಸಿದ್ದನ್ನು ಮೊದಲು ಆ ಜಿಲ್ಲೆಯ ಲೋಕಲ್ ಬೋರ್ಡಿನವರು ಪ್ರತಿಭಟಿಸಿದರು. ಆದರೀಗ ಬೇರೆ ಎಲ್ಲ ಬೋರ್ಡಿನವರು ಅದಕ್ಕೆ ಒಪ್ಪಿದ್ದರಿಂದ ಇವರೂ ಒಪ್ಪಬೇಕಾಯಿತು.

ದಕ್ಷಿಣ ಕನ್ನಡ

ಕಾಸರಗೋಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಸಭೆ ಶ್ರೀ ಕಡೆಂಗೋಡ್ಲು ಶಂಕರಭಟ್ಟರ ಅಧ್ಯಕ್ಷತೆಯಲ್ಲಿ ಸೇರಿತ್ತು. ಕಾರ್ಯದರ್ಶಿ ಶ್ರೀ ಬಿ. ಶ್ರೀಧರ ಕಕ್ಕಿಲ್ಲಾಯರು ಲೆಕ್ಕಪತ್ರವನ್ನು ಒಪ್ಪಿಸಿದ್ದರು. ಒಟ್ಟು ೨೨೧೩೯—೮—೫ ಜಮೆಯಾಗಿದ್ದು ೧೭೪೯೬—೭—೮ ವೆಚ್ಚವಾಯಿತೆಂದೂ ೪೬೪೨—೧೨—೯ ಗಳಷ್ಟು ಉಳಿದಿದೆಯೆಂದೂ ತಿಳಿದುಬಂತು. ಇನ್ನೂ ವಸೂಲಾಗಲಿರುವ ಮತ್ತು ತೆಂಕನಾಡಿನ ಮಾರಾಟದ ಲೆಕ್ಕದಿಂದ ವಸೂಲಾಗಲಿರುವ ಹಣವನ್ನು ಹಿಡಿದು ಒಟ್ಟು ೬ ಸಾವಿರದಷ್ಟು ಹಣ ಉಳಿಯುವದು. ಈ ಉಳಿತಾಯದ ಹಣವನ್ನೆಂತು ಉಪಯೋಗಿಸಬೇಕೆಂಬುದನ್ನು ಮುಂದಿನ ಸಭೆಯಲ್ಲಿ ಗೊತ್ತುಪಡಿಸಲಾಗುವದು.

ರಾಷ್ಟ್ರೀಯ ಸಪ್ತಾಹದ ನಿಮಿತ್ತ ಮಂಗಳೂರ ಮುನಸಿಪಾಲಟಿಯ ೨೧ ಶಾಲೆಗಳು ೭ ಕೇಂದ್ರಗಳು ಗಾಂಧಿಜಿ ಕಾಲದ ಸಾಹಿತ್ಯ ರಚನೆ ವಾಚನ ಭಾಷಣಗಳ ಸ್ಪರ್ಧೆಯನ್ನು ಏರ್ಪಡಿಸಿದ್ದವು. ಸ್ಪರ್ಧೆಯಲ್ಲಿ ಗೆದ್ದವರಿಗೆ ಪೌರ ಸಭೆಯ ಉಪಾಧ್ಯಕ್ಷ ಶ್ರೀ. ಬಿ. ಗಂಗಾಧರ ರಾಯರ ಅಧ್ಯಕ್ಷತೆಯಲ್ಲಿ ಪಾರಿತೋಷಕ ಸಮಾರಂಭ ನಡೆಯಿತು ಕೆ. ಸೂರ್ಯನಾರಾಯಣ ಅಡಿಗ, ಬಿ. ದಾಮೋದರ ಬಾಳಿಗಾ, ಮುರಳಿ ಭೀಮರಾವ, ಎನ್. ಎಸ್. ಕಿಲ್ಲೆ ಇವರು ಭಾಷಣ ಮಾಡಿದರು.

ಮಂಗಳೂರಿನ ಬೆಜವಾಡ ರಾಷ್ಟ್ರೀಯ ಬಾಲಿಕಾಪಾಠ ಶಾಲೆಯ ವಸಂತೋತ್ಸವ ೧೪ ನೇ ತಾರೀಕು ಸಂಜೆ ನಗರ ಸಭಾಧ್ಯಕ್ಷ ಶ್ರೀ. ಎಲ್. ಸಿ. ಪಾಯಸರ ಅಧ್ಯಕ್ಷತೆಯಲ್ಲಿ ಜರುಗಿತು. ಡಾ. ಎಂ. ಕೇಶವಪೈಯವರು ಸ್ವಾಗತ ಭಾಷಣ ಮಾಡುತ್ತ ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಹೊಣೆಯನ್ನು ಎಲ್ಲರೂ ಹೊರಬೇಕಾದುದು ಕರ್ತವ್ಯವೆಂದು ಹೇಳಿದರು. ಅಧ್ಯಕ್ಷರು ಸಮಯೋಚಿತ ಭಾಷಣ ಮಾಡಿದರು. ಬಹಾದ್ದೂರ ಗುಡಿ ಎಂಬ ನಾಟಕವನ್ನು ವಿದ್ಯಾರ್ಥಿಗಳು ಪ್ರದರ್ಶಿಸಿದರು.

ಮದ್ರಾಸ ಸರಕಾರದ ಪೂರೈಕೆ ಶಾಖೆಯ ಅಧಿಕಾರಿಗಳು ಮಂಗಳೂರಿಗೆ ಬಂದಾಗ ಆಹಾರ ಪರಿಸ್ಥಿತಿಯ ಬಗ್ಗೆ ವಿಚಾರವಿನಿಮಯವಾಯಿತು. ಸೀದಾ ಪ್ರಮಾಣವನ್ನು ಹೆಚ್ಚಿಸಬೇಕೆಂದು ವಾದಿಸಲಾಯಿತು. ಜಿಲ್ಲೆಗೆ ಬೇಕಾದ ಅಕ್ಕಿಯನ್ನು ಬೇಗ ಕಳಿಸಲಾಗುವದೆಂದು ಆಶ್ವಾಸನ ದೊರೆಯಿತು.

ಕನ್ನಡ ಸಂಸ್ಥಾನ

ಮುಂಬಯಿ ಶಾಸನಸಭೆಯ ಕಾಂಗ್ರೆಸ ಪಕ್ಷ ಕಾರ್ಯದರ್ಶಿಗಳಾದ ಶ್ರೀ ಡಿ. ಕೆ. ಗೋಸಾವಿಯವರು ಭಿನ್ನ ಜಾತಿ ಪಂಥಗಳಲ್ಲಿ ಸಹಕಾರ ಸೌಹಾರ್ದವನ್ನುಂಟು ಮಾಡಲು ದಕ್ಷಿಣ ಸಂಸ್ಥಾನ ಭಾಗಗಳಲ್ಲಿ ಸಂಚರಿಸಲು ಬಂದಿರುವರು. ಭಾರತ ಸೇವಕ ಸಮಾಜದ ಶ್ರೀ ಆರ್. ಆರ್. ಬಖಲೆಯವರೂ ಇದೇ ಉದ್ದೇಶಕ್ಕಾಗಿ ಸಾಂಗಲಿಗೆ ಬಂದಿರುವರು.

ಮುಧೋಳದಿಂದ ೮ ಮೈಲುಗಳ ಮೇಲಿರುವ ಬೆಳಗಲಿಯಲ್ಲಿ ಪ್ರತಿ ವರುಷದಂತೆ ಈ ವರುಷವು ಜಾತ್ರೆ ಕೂಡಿತು. ೧೪ ನೇ ತಾರೀಕು ಕುಸ್ತಿ ಕಣದಲ್ಲಿ ಪಂದ್ಯಾಟ ನಡೆದಾಗ ಮತ್ತು ಜಾತ್ರೆಯ ಬಂದೋಬಸ್ತಿಗಾಗಿ ಸಶಸ್ತ್ರ ೮-೧೦ ಜನ ಪೋಲೀಸರಿರುವಾಗ ಅಶ್ವಾರೂಢ ದರೋಡೆಗಾರರ ತಂಡವು ಒಮ್ಮೆಲೆ ಬಂದು ಎಲ್ಲರನ್ನು ಚದುರಿಸಿತು ಪೋಲೀಸರು ಅಡಗಿಕೊಂಡು ಕುಳಿತರು. ಈ ದರೋಡೆಗಾರರು ಹಾಗೆಯೆ ಮಹಾಲಿಂಗಪೂರಕ್ಕೆ ಹೋಗಿ ಮರಳಿ ಬೆಳಗಲಿಗೆ ಬಂದು ಗದ್ದಲಹಾಕಿದರಂತೆ. ಆದರೆ ಈ ಸಲ ಲೂಟಿ ಮುಂತಾದ್ದೇನು ನಡೆಯಲಿಲ್ಲ.

ಕೊಲ್ಹಾಪುರ ಗಲಭೆಗಳ ವಿಚಾರಣೆ ನಡೆಸಲು ಮುಂಬಯಿ ಹಾಯಕೋರ್ಟಿನ ನಿವೃತ್ತ ನ್ಯಾಯಾಧೀಶ ಶ್ರೀ ನವರೋಜಿ ವಾಡಿಯಾ ಇವರನ್ನು ನಿಯಮಿಸಲಾಗಿದೆ.

ಕೊಲ್ಹಾಪೂರದ ರಾಷ್ಟ್ರೀಯ ಸೇವಕ ಸಂಘವು ಅಕ್ರಮ ಸಂಸ್ಥೆಯೆಂದು ಸಾರಲ್ಪಟ್ಟಿವೆ.

ಲೀನವಾದ ದಕ್ಷಿಣ ಸಂಸ್ಥಾನಗಳ ನ್ಯಾಯ ಶಾಖೆಯ ಸುಧಾರಣೆಗಾಗಿ ಶ್ರೀ ಟಿ. ಕೆ. ತುಕೋಳ ಸಬ್ ಜಜ್ಜರನ್ನು ನೇಮಿಸಲಾಗಿದೆ.

ಕೊಲ್ಹಾಪುರದ ಹಿಂದಿನ ಮಂತ್ರಿಗಳಾದ ಶ್ರೀ. ಮಾಧವರಾವ ಬಾಗಲ ಇವರು ಸರಕಾರೀ ನೌಕರರನ್ನು ಸಂಪು ಮಾಡಲು ಪ್ರೋತ್ಸಾಹಿಸುತ್ತಿದ್ದಾರೆಂದು ಸೆರೆಹಿಡಿಯಲ್ಪಟ್ಟಿದ್ದಾರೆ. ಪ್ರಜಾಪರಿಷತ್ತಿನ ಕಾರ್ಯದರ್ಶಿ ಜಾರಲೆಯವರನ್ನು ಸೆರೆಹಿಡಿಯಲಾಗಿದೆ.

ಕೊಲ್ಹಾಪುರ ಸಂಸ್ಥಾನದಲ್ಲೆಲ್ಲ ೧೫ ನೇ ತಾರೀಕಿನಿಂದ ೧೪೪ ಕಲಮು ಜಾರಿಮಾಡಲಾಗಿದೆ. ಐದಕ್ಕಿಂತ ಹೆಚ್ಚು ಜನರು ಗುಂಪುಗಟ್ಟಿಕೊಂಡು ತಿರುಗಾಡಬಾರದಾಗಿ ವಿಧಿಸಲಾಗಿದೆ. ಹುಪ್ರಿಯಲ್ಲಿ ದಂಗೆ ನಡೆಸಿದ್ದಾಗಿ ೯ ಜನರನ್ನು ಬಂಧಿಸಿದ್ದು ಅಜರೆಯಲ್ಲಿ ೧೪ ಜನರನ್ನು ಹಿಡಿಯಲಾಗಿದೆ.

ಹೈದ್ರಾಬಾದ ಸಂಸ್ಥಾನ

ಕಾರಟಗಿಯ ಸತ್ಯಾಗ್ರಹಿಯಾದ ರುದ್ರಪ್ಪ ಇವನ ವಿಚಾರಣೆ ನಡೆದು ಆರು ತಿಂಗಳ ಶಿಕ್ಷೆ ವಿಧಿಸಲಾಯಿತು. ನೂರು ರೂಪಾಯಿ ದಂಡ ಕೊಡದಿದ್ದರೆ ಮತ್ತೊಂದು ತಿಂಗಳ ಶಿಕ್ಷೆಯನ್ನು ಅನುಭೋಗಿಸಬೇಕು.

ರಜಕಾರರು ೧೫ ದಿನಗಳ ಹಿಂದೆ ಸೇಡಂವನ್ನು ಮುತ್ತಿ ಅಲ್ಲಿನ ಮನೆ ಮತ್ತು ಅಂಗಡಿಗಳ ಲೂಟಿ ಮಾಡಿಕೊಂಡು ಹೋದರು. ಓರ್ವರ ಮನೆ ಹೊಕ್ಕು ಅವರ ಸಾಮಾನುಗಳನ್ನೆಲ್ಲ ಅಪಹರಿಸಿಕೊಂಡು ಎರಡು ವರುಷದ ಮಗುವನ್ನು ಭಲ್ಲೆಯಿಂದ ತಿವಿದು ಪ್ರಾಣ ತೆಗೆದುಕೊಂಡರು.

ರಜಕಾರರು ಮತ್ತು ನಿಜಾಮ ಪೋಲೀಸರು ಸುರಪುರದ ನಾಯಕರ ಮನೆಯನ್ನು ಇದೇ ತಿಂಗಳು ೧೪ ನೇ ತಾರೀಕಿನಿಂದ ಸುತ್ತುಗಟ್ಟಿದ್ದಾರೆ. ಒಳಗಿನವರನ್ನು ಹೊರಗೆ ಬಿಡುವದಿಲ್ಲಾದ್ದರಿಂದ ಒಳಗೆ ಉಪವಾಸ ಸಾಯುವ ಪ್ರಸಂಗ ಬಂದಿದೆ. ಈ ದುಃಸ್ಥಿತಿಯನ್ನು ತಿಳಿಸುವ ತಂತಿಯೊಂದು ಶ್ರೀ ದಿವಾಕರರಿಗೆ ಹೊಸದಿಲ್ಲಿಗೆ ಬಂದಿದ್ದು ಈ ವಿಷಯವನ್ನೆಲ್ಲ ಸಂಸ್ಥಾನ ಶಾಖೆಯವರಿಗೆ ತಿಳಿಸಲಾಗಿದೆಯೆಂದು ತಿಳಿಯುತ್ತದೆ.

ಹಿಂದುಸ್ತಾನ ಸರಕಾರದ ಗೂಢ ವಿಚಾರವಿನಿಮಯ ಮಾಡಲು ದಿಲ್ಲಿಗೆ ಹೋಗಿದ್ದ ಹೈದ್ರಾಬಾದ ಶಿಷ್ಟಮಂಡಳವು ಮಾತುಕತೆ ಮುಗಿಸಿಕೊಂಡು ಹೈದ್ರಾಬಾದಿಗೆ ಮರಳಿತು. ಸಲಹೆಗಾರರಾದ ಸರ್ ವಾಲ್ಟರರು ಬ್ರಿಟಿಶ ಅರಸರೊಡನೆ ವಿಚಾರ ವಿನಿಮಯ ಮಾಡಲು ಲಂಡನಿಗೆ ಹೋಗಲಿರುವರು.

ಹೈದ್ರಾಬಾದಕ್ಕೆ ಸಾಗಲಿರುವ ಅರಬರನ್ನು ತುಂಬಿಕೊಂಡು ೭ ಹಡಗಗಳು ಗೋವಾಕ್ಕೆ ಬಂದಿವೆ. ಇತ್ತೆಹಾದದ ಮುಂದಾಳುಗಳಾದ ಕಾಸೀಮ ರಜವಿಯವರ ಬಿನ್ನಹದ ಮೇರೆಗೆ ಈ ಅರಬರನ್ನು ಕಳಿಸಲಾಗಿದೆಯೆಂದು ತಿಳಿಯುತ್ತದೆ. ಹಿಂದೀ ಒಕ್ಕೂಟ ಸೈನಿಕರು ಹೈದರಾಬಾದ ಮುಸಲ್ಮಾನರ ಮೇಲೆ ದಾಳಿಮಾಡಿ ಅವರನ್ನು ಅತ್ಯಾಚಾರಕ್ಕೊಳಪಡಿಸುತ್ತಿರುವರೆಂದು ರಜವಿಯವರು ಸಂದೇಶ ಕಳಿಸಿದ್ದರಿಂದ ಇವರು ಬಂದಿರುವರಂತೆ. ಇವರು ಹಡಗದಿಂದ ಇಳಿದಕೂಡಲೆ ಗೋವಾ ಹಿಂದುಸ್ತಾನದ ಗಡಿಯನ್ನು ದಾಟಿದರಂತೆ.

ಸಣ್ಣ ಕತೆ

ವಿಚಿತ್ರ ಜಗತ್ತು

— ಶ್ರೀ. ಬಿ. ಜಿ. ಕುಲಕರ್ಣಿ ಬಿ. ಎ. (ಆನರ್ಸ) ಅವರಿಂದ —

ಬೆಕ್ಕೇರಿರೋಡ ಸ್ಟೇಶನ್ನಿನ ಟಿಕೆಟ್ಟ ಕಿಡಿಕೆಯ ಮುಂದೆ 'ಊ' ಹಚ್ಚಿಕೊಂಡು ನಿಂತು ನಿಂತು ಬೆಸತ್ತ ಜನರ ಬಾಡಿದ ಮುಖಗಳ ಮೇಲೆ ಒಮ್ಮೆಲೆ ಆನಂದದ ತೆರೆಗಳೆದ್ದವು. ಟಿಕೆಟ್ಟ ಇಲ್ಲದೆ ಬೇಕಾದವರು ಬೇಕಾದಹಾಗೆ ಪ್ರಯಾಣ ಮಾಡಬಹುದೆಂದು ಒಂದು ಸುಗ್ರೀವಾಜ್ಞೆ ಹೊರಬಿದ್ದರೂ ಆ ಮುಖಗಳು ಅಷ್ಟು ಅರಳುತ್ತಿರಲಿಲ್ಲ. ಸೌಂದರ್ಯದ ಪ್ರಭಾವವೇ ಅಂತಹದು!

ಪಾಶ್ಚಿಮಾತ್ಯ ದೇಶಗಳಲ್ಲಿದ್ದಂತೆ ನಮ್ಮ ದೇಶದಲ್ಲಿಯೂ ಸೌಂದರ್ಯದ ಸ್ಪರ್ಧೆಗಳು ಏರ್ಪಟ್ಟದ್ದರೆ ಸ್ನೇಹಲತೆಗೆ "ಕುಮಾರಿ ಹಿಂದುಸ್ತಾನ" ಅಥವಾ 'ಭಾರತ ಕುಮಾರಿ' ಎಂಬ ಬಿರುದು ಸಹಜವಾಗಿ ಸಿಕ್ಕಬಹುದಾಗಿತ್ತು. ಸೌಂದರ್ಯ, ನವತಾರುಣ್ಯ, ಆರೋಗ್ಯ ಇವುಗಳ ತ್ರಿವೇಣೀ ಸಂಗಮವೇ ಸ್ತ್ರೀ ರೂಪವನ್ನು ಎತ್ತಿದೆಯೋ ಏನೊ ಎನ್ನುವಂತೆ ಅವಳ ರೂಪ. ಇಂಥ ರೂಪವನ್ನು ನೋಡಿ ಯಾರಿಗೆ ಆನಂದವಾಗಲಿಕ್ಕಿಲ್ಲ? ಯಾರ ಮುಖ ಅರಳಲಿಕ್ಕಿಲ್ಲ?

ತಿಳಿದು ಅಥವಾ ತಿಳಿಯದಲೆ ಊ ದಲ್ಲಿಯ ಎಲ್ಲ ಜನರು ತಮ್ಮ ಬೇಸರವನ್ನೂ ಕ್ರಮಾಂಕಗಳನ್ನೂ ಮರೆತು ಹಿಂದೆ ಸರಿದರು. ಮತ್ತು ಮೊದಲು ಟಿಕೆಟ್ಟ ತೆಗೆಯಲು ಅವಳಿಗೆ ಅವಕಾಶವನ್ನು ಕಲ್ಪಿಸಿ ಕೊಟ್ಟರು. ಸ್ತ್ರೀ ದಾಕ್ಷಿಣ್ಯಕ್ಕಿಂತ ಸೌಂದರ್ಯದ ಆರಾಧನೆಯೇ ಅವರಿಗೆ ಹೀಗೆ ಮಾಡಲು ಹಚ್ಚಿತು. ಯಾಕೆಂದರೆ ಈ ಎಲ್ಲ ಜನರು ತಮ್ಮ ಹೃದಯಗಳನ್ನೆಲ್ಲ ಕಣ್ಣಲ್ಲಿರಿಸಿ ಎವೆಯಿಕ್ಕದೆ ಅವಳನ್ನು ನೋಡತೊಡಗಿದರು.

"ಮಹಮ್ಮದಪುರ- ಒಂದು ಸೆಕೆಂಡ ಕ್ಲಾಸ", ಎಂದಳು ಸ್ನೇಹಲತಾ, ಕಿಡಿಕೆಯಲ್ಲಿ ಒಂದು ನೋಟನ್ನೆಸೆಯುತ್ತ.

ಸ್ಟೇಶನ್ನಿನ ಹೆಸರನ್ನು ಕೇಳಿಕೊಳ್ಳುವದು, ಹಣ ತೆಗೆದುಕೊಳ್ಳುವದು, ಟಿಕೆಟ್ಟಿಗೆ ತಾರೀಖಿನ ಮುದ್ರೆಯನ್ನೊತ್ತಿ ಟಿಕೆಟ್ಟನ್ನೂ ಉಳಿದ ಹಣವನ್ನೂ ಕಿಡಿಕೆಯ ಹೊರಗಿಟ್ಟು ಮುಂದಿನವನ ಆಜ್ಞೆಯನ್ನು ನಿರೀಕ್ಷಿಸುವದು— ಇದೇ ಇಲ್ಲಿಯವರೆಗೆ ಮತ್ತು ಎಂದಿನಿಂದಲೂ ಕಿಡಿಕೆಯ ಆಚೆಗಿದ್ದ ಮಾನವಪ್ರಾಣಿಯ ಕ್ರಿಯಾಪದ್ಧತಿಯಾಗಿತ್ತು. ಆದರೆ 'ಮಹಮ್ಮದಪುರ — ಒಂದು ಸೆಕೆಂಡ ಕ್ಲಾಸ' ಎಂಬ ಮಧುರ ಸ್ವರವು ಕಿವಿಗೆ ಬಿದ್ದೊಡನೆ ಆ ಮಾನವನ ಸ್ಥಿತಿಯು ಮಹಾಶ್ವೇತೆಯ ಸಂಗೀತನ್ನಾಲಿಸಿದ ಇಂದ್ರಾಯುಧದಂತೆ ಆಯಿತು. ಕ್ರಿಯಾ ಪದ್ಧತಿಯಲ್ಲಿ ತತ್‍ಕ್ಷಣವೇ ಮಾರ್ಪಾಟಾಯಿತು ಯಾವೂರೆಂದು ಮತ್ತೊಮ್ಮೆ ಕೇಳಿ ಆ ವ್ಯಕ್ತಿಯು ಕಿಡಿಕೆಯಲ್ಲಿ ಮೊಗಹಾಕಿ ನೋಡಿತು. ಸ್ನೇಹಲತೆಯ ಸುಂದರ ಮುಖದ ದರ್ಶನ! ಬೆಕ್ಕೇರಿರೋಡ ಸ್ಟೇಶನ್ನಿನ ಅಲಿಖಿತ ಇತಿಹಾಸದಲ್ಲಿ ಅಂದು ಮೊಟ್ಟಮೊದಲನೆ ಸಾರೆ ಒಂದು ಟಿಕೆಟ್ಟು ತಾರೀಖಿನ ಮುದ್ರೆಯಿಲ್ಲದೆ ಕೊಡಲ್ಪಟ್ಟಿತು!

ಬೆಕ್ಕೇರಿರೋಡ ಸ್ಟೇಶನ್ನಿನ ಟಿಕೆಟ್ಟ ಕಲೆಕ್ಟರನು ಪರಿಪೂರ್ಣ ಟಿಕೆಟ್ಟ ಕಲೆಕ್ಟರನ ಸಾಕ್ಷಾತ್ಕಾರವಲ್ಲದಿದ್ದರೂ ಅವನು ಟಿಕೆಟ್ಟು ಕತ್ತರಿಸಲು ಹೋಗಿ ಎಂದೂ ಬಟ್ಟು ಜಬ್ಬಿಕೊಂಡಿರಲಿಲ್ಲ. ಅವನು ಟಿಕೆಟ್ಟ ಇಲ್ಲದ ಎಷ್ಟೋ ಜನರಿಗೆ ಹೊರ ಹೋಗಗೊಟ್ಟಿರಬಹುದು. ಸಾಧುಗಳ ಸಲುವಿಗೆ ಮರುಳಾಗಿ ಅವರನ್ನು ಬಿಟ್ಟಿರಬಹುದು. ಭಿಕ್ಷುಕರು ಅವನ ಕಣ್ಣುತಪ್ಪಿಸಿ ಪಾರಾಗಿರಬಹುದು. ಸಜ್ಜನರು ಗೌರವದಿಂದ ನುಸುಳಿರಬಹುದು. ಆದರೆ ಕೈಗೆ ಸಿಕ್ಕ ಟಿಕೆಟ್ಟನ್ನು ಕತ್ತರಿಸಹೋಗಿ ಬಟ್ಟು ಜಬ್ಬಿಕೊಂಡುದುದು ಅವನ ಆಯುಷ್ಯದಲ್ಲಿ ಇದೇ ಮೊದಲನೆ ಸಾರೆ ಆದರೆ ಬಟ್ಟಿಗಾಗಬಹುದಾದ ವೇದನೆಯು ಅವನ ಮಿದುಳಿಗೆ ಮುಟ್ಟಲಿಲ್ಲ. ಈ ತರುಣಿಯಂಥ ಸುಂದರಿಯರೆ ಯಾವಾಗಲೂ ಪ್ರಯಾಣ ಮಾಡುತ್ತಿರಬೇಕು, ಮಿಲಿಟರಿ ಸಾಗಾಟಕ್ಕೆ ಇದ್ದಂತೆ ಇಂಥವರ ಪ್ರಯಾಣಗಳಿಗೆ ಪ್ರಾಶಸ್ತ್ಯವಿರಬೇಕು ತಾನು ಸದಾಸರ್ವದಾ ಗೇಟಿಗೆ ನಿಂತಿರಬೇಕು, ಎಂಬೀ ವಿಚಾರಗಳ ಆ ಮಿದುಳಿನಲ್ಲಿ ಲಾಸ್ಯಮಾಡುತ್ತಿದ್ದವು. ಸೌಂದರ್ಯಕ್ಕೆ ಮರುಳಾಗುವ ಗುತ್ತಿಗೆಯನ್ನು ಕೇವಲ ಕವಿಗಳಿಗೆ ಕೊಟ್ಟಿಲ್ಲವಷ್ಟೇ!

ಸ್ನೇಹಲತೆಯು ಪ್ಲ್ಯಾಟಫಾರ್ಮಿನ ಮೇಲೆ ಕಾಲಿಟ್ಟ ಕೂಡಲೆ ಅಲ್ಲಿ ಸೌಂದರ್ಯದ ಬಾಂಬೇ ಬಿದ್ದಿತೇನೊ ಎನ್ನುವಂತಾಯಿತು. ಎಲ್ಲರೂ ಒಂದಿಲ್ಲೊಂದು ಬಗೆಯಿಂದ ಆ ಮೋಹನಾಸ್ತ್ರಕ್ಕೆ ಬಲಿಬಿದ್ದರು. ಹೊಸದಾಗಿ ನೇಮಿಸಲ್ಪಟ್ಟ 'ನಿಮಗೆ ಸಹಾಯಬೇಕೆ?' ಪೋಲೀಸನು ತಾನಾಗಿಯೇ ಮುಂದೆ ಬಂದು ನಿಮಗೆ ಸಹಾಯಬೇಕೆ ಎಂದು ಅವಳನ್ನು ಕೇಳಿದನು. ಅವಳು ಬೇಡೆಂದು ಗೋಣು ಅಲುಗಾಡಿಸಿದರೂ ಅವನು ನಾಲ್ಕೈದು ಹೆಜ್ಜೆ ಅವಳೊಡನೆ ಸಾಗಿ ಪೋಲೀಸ ಇನ್ಸಪೆಕ್ಟರ ಜನರಲ್ ಶಾಮ್ಟಯವರ "ನಿಮಗೆ ಸಹಾಯ ಬೇಕೆ?" ಪೋಲೀಸರ ಯೋಜನೆಯನ್ನು ತಿಳಿಹೇಳಿದನು. ಕೆಲಸವಿಲ್ಲದಿದ್ದರೂ ಗಾಡಿಯಿಂದ ಕೆಳಗಿಳಿದು ಗಾಡಿಯ ಆ ತುದಿಯಿಂದ ಈ ತುದಿಯ ವರೆಗೆ ಅಲೆಯುವ ತರುಣರ ಗಣವು ತನ್ನ ನಿತ್ಯ ಕ್ರಮವನ್ನು ಬಿಟ್ಟು ಸೆಕೆಂಡಕ್ಲಾಸಿನ ಡಬ್ಬಿಯ ಮುಂದೆ ಒಂದು ಅನೌಪಚಾರಿಕ ಪರಿಷತ್ತನ್ನು ಕೂಡಿಸಿತು. ವೃತ್ತಪತ್ರಗಳನ್ನು ಮಾರುವ ಬಾಲಕರು ಕೂಡ ಮೋಹನಾಸ್ತ್ರದ ಪ್ರಭಾವಕ್ಕೊಳಗಾದರು. "ಅಖಂಡ ಕರ್ನಾಟಕ" ಮಾರುವ ಹುಡುಗರು "ಮಹಾ ಕರ್ನಾಟಕ"ವೆಂದೂ "ಮಹಾ ಕರ್ನಾಟಕ" ಮಾರುವ ಹುಡುಗರು "ಅಖಂಡ ಕರ್ನಾಟಕ"ವೆಂದೂ ಕೂಗತೊಡಗಿದರು. ಇಂಟರ ಮತ್ತು ಥರ್ಡಕ್ಲಾಸಿನ ಪ್ರಯಾಣಿಕರು ಒಳಗಿನ ಸ್ಥಳವನ್ನು ಲೆಕ್ಕಿಸದೆ ಕಿಡಿಕೆಯಲ್ಲಿಯೇ ಸ್ಥಾನಾಪನ್ನರಾದರು. ಗಾರ್ಡ ಮತ್ತು ಸ್ಟೇಶನ್‍ಮಾಸ್ತರರು ಯಾವದೋ ಒಂದು ಮಹತ್ವದ ವಿಷಯವನ್ನು ಚರ್ಚಿಸುವವರಂತೆ ಮೋರೆ ಮಾಡಿಕೊಂಡು ಸೆಕೆಂಡ ಕ್ಲಾಸಿನ ಡಬ್ಬಿಯ ಎದುರು ನಿಂತರು. ಅವರ ನೆವದಿಂದ ಪೋರ್ಟರರೂ ಅಲ್ಲಿಯೇ ನಿಂತರು.

ವಿಧವಿಧದಿಂದ ತನ್ನ ಸೌಂದರ್ಯದ ಪೂಜೆ ನಡೆದಿದ್ದರೂ ಸ್ನೇಹಲತೆಗೆ ಅದರ ವಿಷಯವಾಗಿ ಸಂತೋಷವಾಗಲಿಲ್ಲ. ತಾತ್ಸಾರವೆನಿಸತೊಡಗಿತು. ವಿಭಿನ್ನವಾದ ಮೂರ್ತಿಯ ಪೂಜೆಯನ್ನು ನಡೆಸಿದೆ ಈ ಜನ ಎಂದು ಅವಳು ಮನಸಿನಲ್ಲಿ ಅಂದುಕೊಂಡಳು. ಬೇಡಾದಾಗ ಪ್ರಭಾವಶಾಲಿಯಾದ ತನ್ನ ಸೌಂದರ್ಯವು ಸತ್ವಪರೀಕ್ಷೆಯ ಕಾಲದಲ್ಲಿ ಮೊಳಕಾಲೂರಿತೆಂದು ಖೇದಗೊಂಡಳು ಶಂಕರನನ್ನು ಸೌಂದರ್ಯದ ಬಲದಿಂದ ಜಯಿಸಲು ಹೋಗಿ ಪರಾಭೂತಳಾದ ಪಾರ್ವತಿಯಂತೆ ಅವಳ ಸ್ಥಿತಿಯಾಗಿತ್ತು.

ಸ್ನೇಹಲತೆ ಹಾಗೂ ಬೆಕ್ಕೇರಿರೋಡ ಸ್ಟೇಶನ್ನಿನ ಹತ್ತರಿದ್ದ ಆಸ್ಪತ್ರಿಯಲ್ಲಿದ್ದ ಡಾ. ಪದ್ಮಾಕರ ಇವರು ಒಂದೇ ಶಾಲೆಯಲ್ಲಿ ಒಂದೇ ವರ್ಗದಲ್ಲಿ ಕಲಿತವರು. ಶಾಲೆಯಲ್ಲಿರುವಾಗಲೆ ಅವರಲ್ಲಿ ಆತ್ಮೀಯತೆ ಬೆಳೆದಿತ್ತು. ಕಾಲೇಜಿನ ಹೊಸ್ತಿಲದಲ್ಲಿ ಕಾಲಿಟ್ಟ ಕೂಡಲೆ ಆತ್ಮೀಯತೆ ಪ್ರೇಮವಾಗಿ ಪರಿಣಮಿಸಿತು ಪದ್ಮಾಕರನೂ ಸ್ನೇಹಲತೆಗೆ ತಕ್ಕಂತೆ ಸುಂದರನು. ಅದಕ್ಕೂ ಹೆಚ್ಚಿನದೆಂದರೆ ಬುದ್ಧಿಸಂಪನ್ನನು ಬೌದ್ಧಿಕ ಜಗತ್ತೆ ಅವನಿಗೆ ರಣಾಂಗಣ. ಸ್ನೇಹಲತೆಯ ಪ್ರೇಮಕ್ಕೆ ಅವನ ಹೃದಯದಲ್ಲಿ ಸ್ಥಾನವಿದ್ದಿತಾದರೂ ಸಾರ್ವಭೌಮತ್ವವಿರಲಿಲ್ಲ. ಕೀರ್ತಿಯ ಬೆನ್ನುಹತ್ತಿದ ವೀರರು ತಮ್ಮ ಪ್ರೇಯಸಿಯನ್ನು ತೊರೆದು ರಣಾಂಗಣಗಳಿಗೆ ಹೋಗುವಂತೆ ಪದ್ಮಾಕರನು ಬೌದ್ಧಿಕ ಕ್ಷೇತ್ರದಲ್ಲಿ ವಿಜಯ ಸಂಪಾದಿಸಲು ಪ್ರೇಮವನ್ನೂ ಸ್ನೇಹಲತೆಯನ್ನೂ ಬದಿಗಿರಿಸಿ ಹಿಂದೆ ಮುಂದೆ ನೋಡುತ್ತಿರಲಿಲ್ಲ. ಸ್ನೇಹಲತೆಗಾದರೂ ಪದ್ಮಾಕರನ ಮೇಲೆ ನಿಸ್ಸೀಮ ಪ್ರೇಮ. ಪದ್ಮಾಕರನು ತನ್ನವನಾಗಬೇಕೆಂದು ಅವಳಿಗೆ ಎಷ್ಟು ಉತ್ಕಟ ಇಚ್ಛೆಯಿದ್ದಿತೊ ಅದಕ್ಕೂ ಒಂದು ತೂಕ ಹೆಚ್ಚು ಅವಳಿಗೆ ಪದ್ಮಾಕರನು ಪ್ರಖ್ಯಾತನಾಗಬೇಕೆಂದೆನಿಸುತ್ತಿತ್ತು. ಈ ದೃಷ್ಟಿಯಿಂದಲೆ ಅವಳು ಅವನಿಂದ ಅಷ್ಟು ದೂರ ಇರುತ್ತಿದ್ದಳು. ಅದರೂ ದಿನಕ್ಕೊಮ್ಮೆಯಾದರೂ ಭೆಟ್ಟಿಯಾಗದಿದ್ದರೆ ಅವರಿಗೆ ಸಮಾಧಾನವಾಗುತ್ತಿರಲಿಲ್ಲ ಇಂಟರ ಸಾಯಿನ್ಸ ಪರೀಕ್ಷೆ ಪಾಸಾದ ಬಳಿಕ ಪದ್ಮಾಕರನು ಆ ಕಾಲೇಜನ್ನು ಬಿಟ್ಟು ಎಂ. ಬಿ. ಬಿ. ಎಸ್‍ಕ್ಕಾಗಿ ಮುಂಬಯಿಗೆ ಹೋದನು. ಇಂಟರ ಸಾಯಿನ್ಸದ ಪರೀಕ್ಷೆಯಲ್ಲಿ ಅವನಿಗೆ ಪ್ರಥಮ ವರ್ಗವು ಮೇಲಿನ ಕ್ರಮಾಂಕವು ದೊರೆತಿದ್ದವು. ಮುಂಬಯಿಯ ಗ್ರ್ಯಾಂಟ ಮೆಡಿಕಲ್ ಕಾಲೇಜಿನಲ್ಲಿ ಅವನಿಗೆ ಸಹಜವಾಗಿ ಪ್ರವೇಶ ದೊರೆಯಿತು, ಅಲ್ಲದೆ ಒಂದೆರಡು ಶಿಷ್ಯವೃತ್ತಿಗಳೂ ದೊರೆತವು. ಆರ್ಟ ವಿಭಾಗದಲ್ಲಿ ಓದುತ್ತಿದ್ದ ಸ್ನೇಹಲತೆಯು ಅದೇ ಕಾಲೇಜಿನಲ್ಲಿ ಬಿ. ಎ. ಕ್ಲಾಸಿನಲ್ಲಿ ಓದತೊಡಗಿದಳು. ಅಂತೂ ಇಬ್ಬರೂ ಒಬ್ಬರನ್ನೊಬ್ಬರು ಅಗಲಿದರು. ಆದರೂ ಸ್ನೇಹಲತೆಯ ಮನವು ದಿನಾಲು ಒಮ್ಮೆಯಾದರೂ ಮುಂಬಯಿಗೆ ಹೋಗಿ ಬರುತ್ತಿತ್ತು. ಮೊದಲು ಕೆಲವು ದಿವಸ ಪದ್ಮಾಕರನ ಮನವು ಮಹಮ್ಮದಪುರಕ್ಕೆ ಸ್ನೇಹಲತೆಯ ಹತ್ತರ ಬರುತ್ತಿತ್ತು. ಆದರೆ ವಿಧಿಲಿಖಿತ ಬೇರೆ ಇದ್ದಿತು.

ಮುಂಬಯಿಯ ಗ್ರ್ಯಾಂಟ ಮೆಡಿಕಲ್ ಕಾಲೇಜಿನಲ್ಲಿ ಪದ್ಮಾಕರನಿಗೆ ಬೌದ್ಧಿಕ ಸಹಚರಿಯೊಬ್ಬಳು ದೊರೆತಳು. ಅವನು ಓದುತ್ತಿದ್ದ ವರ್ಗದಲ್ಲಿಯೇ ಅವಳು ಓದುತ್ತಿದ್ದಳು. ಅವನಂತೆ ಅವಳೂ ಪ್ರಥಮ ವರ್ಗವನ್ನೂ ಶಿಷ್ಯವೃತ್ತಿಗಳನ್ನೂ ಸಂಪಾದಿಸಿದ್ದಳು. ಕು. ಪ್ರಿಯಂವದಾ ಪರಾಂಜಪೆ ಬಹು ಬುದ್ಧಿಸಂಪನ್ನಳು. ಕಾಣಲು ಅಷ್ಟೊಂದು ಸುಂದರಿಯಲ್ಲದಿದ್ದರೂ ಹತ್ತು ಹನ್ನೆರಡು ತರುಣಿಯರಲ್ಲಿ ಒಡೆದು ಕಾಣುವಷ್ಟು ಕುರೂಪಿಯಲ್ಲ. ಬುದ್ಧಿಮಂತಿಕೆಯಲ್ಲಿ ಪದ್ಮಾಕರನನ್ನೂ ಹಿಂದೆ ಹಾಕುವಂತಹಳು. ಕಾಲೇಜ ಪ್ರೊಫೆಸರರು ಬುದ್ಧಿವಂತರನ್ನು ಒಂದೆಡೆಗೆ ಸೇರಿಸಲು ಬಹು ಜಾಣರಂತೆ. ಇದರಿಂದ ಪ್ರಯೋಗಗಳು ಯಶಸ್ವಿಯಾಗಿ ಹೊಸ ಶೋಧ ಹತ್ತಬಹುದೆಂಬುದೆ ಅವರ ಲೆಕ್ಕ. ಪದ್ಮಾಕರ – ಪ್ರಿಯಂವದೆಯರು ಜೊತೆಗೂಡಿ ಪ್ರಯೋಗ ಶಾಲೆಯಲ್ಲಿ ಕೆಲಸ ಮಾಡಬೇಕೆಂದು ಅವರು ಹೇಳಿದರು. ಪ್ರಯೋಗಗಳ ಮತ್ತು ಪುಸ್ತಕಗಳ ವ್ಯಾಮೋಹದಲ್ಲಿ ಪದ್ಮಾಕರನು ತನ್ನ ಮೋಹಿನಿಯನ್ನು ಮರೆತು ಬಿಟ್ಟನು. ಪದ್ಮಾಕರ ಪ್ರಿಯಂವದೆಯರ ಕೆಲವು ಪ್ರಯೋಗಗಳು ವಿಶೇಷ ಪ್ರಶಂಸನೀಯವಾದವು. ವಿಶ್ವವಿದ್ಯಾಲಯದ ಪತ್ರಿಕೆಯಲ್ಲಿಯೂ ಅವು ಮುದ್ರಿಸಲ್ಪಟ್ಟವು. ನೀವಿಬ್ಬರು ಯಾವಜ್ಜೀವ ಒಂದೆಡೆಗೆ ಸೇರಿದರೆ ಶಾಸ್ತ್ರದ ಕಲ್ಯಾಣವಾಗುವದೆಂದು ಪ್ರೊಫೆಸರರು ಶುಭ ನುಡಿದರು. ಪದ್ಮಾಕರ ಪ್ರಿಯಂವದೆಯರು ಮೊದಲನೆ ವರ್ಗದಲ್ಲಿಯೇ ಎಂ. ಬಿ. ಬಿ. ಎಸ್. ಪರೀಕ್ಷೆ ಪಾಸಾದರು. ಇಬ್ಬರು ಒಂದೇ ಆಸ್ಪತ್ರೆಯಲ್ಲಿ ಕೆಲಸ ಹಿಡಿದರು. ಮುಂದೆ ಕೆಲವು ದಿವಸಗಳ ಮೇಲೆ ಅವರು ರಜಿಸ್ಟರ ವಿವಾಹ ಮಾಡಿಕೊಂಡರು.

ಸ್ನೇಹಲತೆಗೆ ಇದೆಲ್ಲ ತಿಳಿಯಿತು ಆದರೆ ಅವಳಿಗೆ ದುಃಖವಾಗಲಿಲ್ಲ. ಪದ್ಮಾಕರನು ತನ್ನವನಾಗಲಿ ಬಿಡಲಿ ಪ್ರಖ್ಯಾತನಾದನಲ್ಲ ಎಂದು ಅವಳಿಗೆ ಸಮಾಧಾನ.

ತುಂಟಬಾಲಕರು ನೊಣಗಳನ್ನು ಕೊಂದು ಆಟವಾಡುವಂತೆ ದೇವರು ಮನುಷ್ಯರ ಪ್ರಾಣಗಳೊಡನೆ ಚೆಲ್ಲಾಟವಾಡುತ್ತಾನೆಂದು ಶೇಕ್ಸಪಿಯರ ಕವಿಯು ಹೇಳಿದ್ದಾನೆ. ಸ್ನೇಹಲತೆಗೆ ಮತ್ತು ಪದ್ಮಾಕರನಿಗೆ ಬೇಗನೆ ಈ ಮಾತಿನ ಅನುಭವ ಬಂದಿತು. ಯಾವದೋ ಒಂದು ಔಷಧದ ಪ್ರಯೋಗವು ವಿಷಕಾರಿಯಾಗಿ ಪರಿಣಮಿಸಿ ಅದರಲ್ಲಿ ಪ್ರಿಯಂವದೆಯು ಅಂತವಾಯಿತು ಸ್ನೇಹಲತೆಗೆ ಮೊಟ್ಟಮೊದಲು ಖೇದವೆನಿಸಿತು. ಆದರೆ ೧೧ ವರ್ಷದವನಿರುವಾಗಿನಿಂದಲೂ ತನ್ನೊಡನೆ ಇದ್ದ ಪದ್ಮಾಕರನು ತನಗೆ ಮರಳಿ ಸಿಕ್ಕನೆಂಬ ವಿಚಾರವು ಅವಳ ಖೇದವನ್ನು ಮರೆಯಿಸಿತು.

ಸ್ನೇಹಲತೆಯು ಮಹಮ್ಮದಪುರದಿಂದ ಬೆಕ್ಕೇರಿರೋಡಿಗೆ ಹೋದಳು. ಪದ್ಮಾಕರನು ಪ್ರಿಯಂವದೆಯ ಗುಣಗಾನದ ಹೊರತು ಇನ್ನಾವ ಮಾತನ್ನೂ ಆಡಲಿಲ್ಲ. ಹಿಂದಿನ ಕೆಲವು ಪ್ರಸಂಗಗಳನ್ನು ನೆನಪು ಮಾಡಿಕೊಟ್ಟು ಹಿಂದಿನ ಪ್ರೇಮಕ್ಕೆ ಸಂಜೀವಿನಿಯನ್ನು ಪ್ರಯೋಗಿಸಲು ಸ್ನೇಹಲತೆ ಯತ್ನಿಸಿದಳು. ಪದ್ಮಾಕರನು ಪ್ರಿಯಂವದೆಯ ಧ್ಯಾನವನ್ನು ಬಿಡಲಿಲ್ಲ. ಸ್ನೇಹಲತೆಯು ಖಂಡತುಂಡವಾಗಿಯೇ ಮಾತನಾಡಬೇಕಾಯ್ತು.

"ಪದ್ಮ, ನನ್ನ ಪ್ರೇಮವನ್ನು ನೀನು ಮರೆತು ಬಿಟ್ಟೆ. ನಿನ್ನನ್ನು ಮರೆಯುವದು ಅಶಕ್ಯವೆಂದು ಅನೇಕ ಸಲ ಅನೇಕ ರೀತಿಯಿಂದ ಹೇಳಿದ್ದೆ, ಆದರೆ ಸಹಜವಾಗಿ ಮರೆತುಬಿಟ್ಟೆ. ಅದರಂತೆ ಅವಳ ಪ್ರೇಮವನ್ನೂ ಈಗ ಏಕೆ ಮರೆಯಬಾರದು?"

"ಸ್ನೇಹಲತಾ, ಅವಳ ಬೌದ್ಧಿಕಶಕ್ತಿಯು ನಿನ್ನ ಪ್ರೇಮವನ್ನು ಮರೆಯಿಸಿತು. ಅಂಥವಳು ಇನ್ನು ಹೇಗೆ ಸಿಕ್ಕಬಹುದು? ಸ್ನೇಹಲತಾ!"

"ಅವಳ ಬುದ್ಧಿವಂತಿಕೆಯು ನನ್ನನ್ನು ಮರೆಯಿಸಿತು. ನನ್ನ ಸೌಂದರ್ಯವು ಅವಳನ್ನು ಮರೆಯಿಸಲಾರದೆ?"

"ಇಲ್ಲ ಸ್ನೇಹಲತಾ ಎಂದೂ ಇಲ್ಲ. ನಿನ್ನಂಥ ಹತ್ತು ಸುಂದರಿಯರ ಸೌಂದರ್ಯವು ಕೂಡ ಅವಳ ಬೌದ್ಧಿಕ ತೇಜವನ್ನು ಹಿಂದಕ್ಕಟ್ಟಲಾರದು. ಕ್ಷಮಿಸು ಸ್ನೇಹಲತಾ. ನಿನ್ನ ಸೌಂದರ್ಯವು ನನ್ನ ಹೃದಯದ ಹೊಸ್ತಿಲದಲ್ಲಿ ಕಾಲು ಹಾಕಿರಬಹುದು ಅಥವಾ ಹಾಕಿರಲಿಕ್ಕಿಲ್ಲ. ಆದರೆ ಅವಳ ಬೌದ್ಧಿಕ ತೇಜವು ನನ್ನ ಹೃದಯವನ್ನೆಲ್ಲ ವ್ಯಾಪಿಸಿದೆ"

ಉಪಚಾರದ ನಾಲ್ಕು ಮಾತುಗಳನ್ನಾಡಿ ಸ್ನೇಹಲತಾ ಇದೇ ಸ್ಟೇಶನ್ನಿಗೆ ಹೋಗಲು ಬಂದಿದ್ದಳು. ಪದ್ಮಾಕರನನ್ನು ಗೆಲ್ಲದ, ಒಮ್ಮೆ ಸೋತವನನ್ನು ಸೋಲಿಸದ ಸೌಂದರ್ಯವು ಅಷ್ಟೊ ವ್ಯರ್ಥ ಎಂದು ಅವಳ ಮನಸ್ಸಿನಲ್ಲಿ ಒಂದೇ ಸಮನೆ ಕಟೆಯುತ್ತಿತ್ತು. ಸ್ಟೇಶನ್ನಿನಲ್ಲಿ ಅದೇ ಸೌಂದರ್ಯದ ಪೂಜೆಯು ಅವ್ಯಾಹತವಾಗಿ ಸಾಗಿದ್ದನ್ನು ನೋಡಿ ಅವಳಿಗೆ ಮತ್ತಷ್ಟು ದುಃಖವಾಯಿತು. ಮರುಕ್ಷಣದಲ್ಲಿ ದಿಗಿಲುಬಿದ್ದಿತು. ಜಗತ್ತೆಲ್ಲ ಏಕಾಗ್ರಚಿತ್ತದಿಂದ ತನ್ನನ್ನು ಪೂಜಿಸುತ್ತಿರುವಾಗ ಪದ್ಮಾಕರನೊಬ್ಬನೆ ವಿರಾಗಿಯಂತೆ ತನ್ನನ್ನು ಉಪೇಕ್ಷಿಸಬಹುದೆ ಎಂಬ ಪ್ರಶ್ನೆಯು ಅವಳನ್ನು ಕೆಣಕತೊಡಗಿತು. ದೋಷವು ತನ್ನ ಸೌಂದರ್ಯದಲ್ಲಿಲ್ಲ ಪದ್ಮಾಕರನ ದೃಷ್ಟಿಯಲ್ಲಿದೆಂಬ ಸಮಾಧಾನವು ಮೆಲ್ಲ ಮೆಲ್ಲನೆ ತಲೆಯೆತ್ತಲು ಪ್ರಾರಂಭಿಸಿತು. ಅವಳು ಹಾಗೆಯೆ ಸೆಕೆಂಡ ಕ್ಲಾಸಿನ ಡಬ್ಬಿಯಲ್ಲಿ ಹೋಗಿ ಕುಳಿತು ಕಿಡಿಕಿಯ ಬಾಗಿಲವನ್ನು ಏರಿಸಿದಳು.

ಆ ಸೆಕೆಂಡ ಕ್ಲಾಸ ಡಬ್ಬಿಯು, ಸೆಕೆಂಡ ಕ್ಲಾಸ ಡಬ್ಬಿಗಳು ಇರುವಂತೆ ತೆರವಾಗಿಯೆ ಇದ್ದಿತು. ಆಚೆಯ ಮೂಲೆಗೆ ಕುಳಿತ ವ್ಯಕ್ತಿಯೊಂದನ್ನು ಬಿಟ್ಟರೆ ಅಲ್ಲಿ ಯಾರೂ ಇರಲಿಲ್ಲ.

ಆ ವ್ಯಕ್ತಿ! ತರುಣನೇ ಆಗಿದ್ದರೂ ಅವನ ಮೋರೆಯ ಮೇಲೆ ತಾರುಣ್ಯ ಸಹಜವಾದ ಪ್ರಸನ್ನತೆ ಇರಲಿಲ್ಲ. ಅವನ ಶರೀರಯಷ್ಟಿಯು ದಷ್ಟಪುಷ್ಟವಾಗಿದ್ದಿತು. ಆದರೆ ಮೋರೆಯ ಮೇಲೆ ಅದಕ್ಕೆ ತಕ್ಕಂತೆ ಉತ್ಸಾಹ ತೋರಿ ಬರುತ್ತಿರಲಿಲ್ಲ. ಸ್ನೇಹಲತೆಯು, ಪ್ಲ್ಯಾಟಫಾರ್ಮಿನ ಮೇಲಿನ ಜನರನ್ನು ದುರ್ಲಕ್ಷಿಸಿದಳು ಅವನು ತನ್ನನ್ನು ದುರ್ಲಕ್ಷಿಸುತ್ತಿದ್ದಾನೆಂದು ಬೇಗನೆ ಅವಳಿಗೆ ತಿಳಿದು ಬಂದಿತು. ಅವನು ಆಚೆಯ ಕಿಡಿಕೆಯ ಹೊರಗೆ ಮೋರೆ ಹಾಕಿ ಶೂನ್ಯ ದೃಷ್ಟಿಯಿಂದ ದೂರಿನ ಗಿಡಗಂಟಿಗಳನ್ನು ಗಿರಿ ಕಂದರಗಳನ್ನ ನೋಡುತ್ತ ಕುಳಿತಿದ್ದನು. ಪದ್ಮಾಕರನಂಥ ಇನ್ನೊಂದು ವ್ಯಕ್ತಿಯು ಈ ಜಗತ್ತಿನಲ್ಲಿ ದಿಯೇ ಎಂದು ಅವಳು ಸಂಶಯಗೊಂಡಳು.

ಅವನು ತನ್ನನ್ನು ನೋಡಿರಲಿಕ್ಕಿಲ್ಲ ಎಂಬ ವಿಚಾರವು ಅವಳಿಗೆ ಹೊಳೆಯಿತು. ಮೆಲ್ಲನೆ ತಾನಾಗಿಯೇ ಮಾತಿಗೆ ಪ್ರಾರಂಭಿಸಿ ತನ್ನೆಡೆಗೆ ಅವನ ಲಕ್ಷ್ಯವನ್ನು ಸೆಳೆದುಕೊಂಡಳು. ಆದರೆ ನಿಮಿಷಾರ್ಧ ಮಾತ್ರ. ಮತ್ತೆ ಅವನು ಕಿಡಿಕೆಯ ಹೊರಗೆ ಮೋರೆಹಾಕಿ ಶೂನ್ಯ ದೃಷ್ಟಿಯಿಂದ ಗಿಡಗಂಟಿಗಳನ್ನೂ ಗಿರಿ ಕಂದರಗಳನ್ನೂ ನೋಡತೊಡಗಿದ.

"ಎಲ್ಲಿಯ ವರೆಗೆ ಹೋಗುವದು?" ಎಂದಳು ಸ್ನೇಹಲತಾ.

'ಮಹಮ್ಮದಪೂರ" ಎಂದು ಹೇಳಿದನವ. ಆದರೆ ಸ್ನೇಹಲತೆಯ ಕಡೆಗೆ ನಿಮಿಷಾರ್ಧಕ್ಕಿಂತ ಹೆಚ್ಚು ವೇಳೆ ನೋಡಲಿಲ್ಲ.

ಸ್ನೇಹಲತೆಯ ಜಿಜ್ಞಾಸೆ ಬೆಳೆಯಿತು. ಅವ್ಹಾನವನ್ನು ಎದುರಿಸೆಂದು ಅವಳನ್ನು ಅವಳ ಸೌಂದರ್ಯವು ಪ್ರಚೋದಿಸತೊಡಗಿತು. ಎಲ್ಲರೂ ತನ್ನ ಸೌಂದರ್ಯವನ್ನು ಆರಾಧಿಸುತ್ತಿರುವಾಗ ಇವನೊಬ್ಬನೆ ಹೀಗೇಕೆ? ಪದ್ಮಾಕರನಿಗೆ ಗಂಟುಬಿದ್ದಂತೆ ಇವನಿಗೂ ಯಾವಳೊಬ್ಬಳು ವಿದುಷಿ ಗಂಟು ಬಿದ್ದಿರಬಹುದೇ? ಎಂಬ ಹಲವಾರು ವಿಚಾರಗಳು ಅವಳಲ್ಲಿ ಮೂಡಿದವು

"ನಾನೂ ಮಹಮ್ಮದಪೂರದವಳೆ; ನಾನು ತಮ್ಮನ್ನು ಅಲ್ಲಿ ಎಂದೂ ಕಂಡಿಲ್ಲವಲ್ಲ"– ಸ್ನೇಹಲತಾ.

"ಹೌದು ಹೊಸಬ,"— ಗಿಡಗಂಟಿಗಳನ್ನು ಗಿರಿ ಕಂದರಗಳನ್ನು ಶೂನ್ಯ ದೃಷ್ಟಿಯಿಂದ ನೋಡುತ್ತಿದ್ದ ಆ ವ್ಯಕ್ತಿ.

"ಯಾರ ಮನೆಗೆ ಹೋಗಲಿರುವಿರಿ?"

"ಕಾಲೇಜ ಹಾಸ್ಟೇಲಿಗೆ"

ಎಳೆ ಸಿಕ್ಕರೆ ಹಚ್ಚಡ ನುಂಗುವ ಸ್ವಭಾವ ತರುಣರದು. ಯಾವಳೊಬ್ಬ ತರುಣಿಯು ಸ್ವಲ್ಪ ಮಾತನಾಡಿಸಿದರೆ ಸಾಕು. ಮಹಾಭಾರತವನ್ನೇ ಪ್ರಾರಂಭಿಸಿಬಿಡುತ್ತಾರೆ. ಆದರೆ ಈ ವ್ಯಕ್ತಿ ಹಚ್ಚಡವನ್ನು ಕೊಡಹೋದರು ಅದರಲ್ಲಿ ಒಂದು ಎಳೆಯನ್ನು ಕೂಡ ಹಿರಿಯಲು ಹಿಂದೆ ಮುಂದೆ ನೋಡುತ್ತದೆ? ಏನಿದು ಎಂದು ಸ್ನೇಹಲತೆಗೆ ಮತ್ತಷ್ಟು ದಿಗಿಲು ಬಿದ್ದಿತು.

"ವಿದ್ಯಾರ್ಥಿ?" – ಸ್ನೇಹಲತಾ

"ಅಲ್ಲ ಪ್ರಾಧ್ಯಾಪಕ"

"ವಿಷಯ?"

"ಸಂಸ್ಕೃತ"

ಮಾತಿಗೆ ಮಾತು ಮುಗಿಯಿತೆ ಹೊರತು ಬೆಳೆಯಲಿಲ್ಲ ಬೇಸತ್ತು ಸ್ನೇಹಲತೆಯು ಕಿಡಿಕೆಯ ಹೊರಗೆ ತಲೆಹಾಕಿ ತನ್ನ ಡಬ್ಬಿಯ ಕಡೆಗೆ ನೋಡುತ್ತಿದೆ! ಆ ವ್ಯಕ್ತಿಯೊಂದು ಮತ್ತಷ್ಟು ಜಟಿಲವಾದ ಸಮಸ್ಯೆಯಾಯಿತು ಅವಳಿಗೆ. ಮುಂದಿನ ಪ್ರಯಾಣವು ಮೌನದಲ್ಲಿಯೆ ಮುಕ್ತಾಯವಾಯಿತು. ಆದರೆ ಅವಳ ಜಿಜ್ಞಾಸೆ ಹೆಚ್ಚಿತು

ಮುಂದೆರಡು ದಿವಸಗಳಲ್ಲಿ ಅವಳ ತಂದೆಯು ಒಂದು ಸುದ್ದಿಯನ್ನು ಕೇಳಿದರು. ಕಾಲೇಜಿನಲ್ಲಿ

— ರಾ. ಕೇ ಹುಟ್ಟಿಕ್ಕೆ



ಜ್ಯೋತಿಷಿ— ಕೃಷ್ಣಶಾಸ್ತ್ರಿ ಭಿಡೆ ಭವಿಷ್ಯ ಕಥನ ಆಫೀಸ ಖಡೇಬಜಾರ ಬೆಳಗಾವಿ.

ಎಪ್ರಿಲ ೨೬ ರಿಂದ ಮೇ ೨ ರ ವರೆಗೆ

ಮೇಷ

ಪ್ರಕೃತಿಗೆ ಕಿರಕಿಳ ಕ್ಲೇಶ. ಆದರೆ ಹೆಂಡತಿ ಮತ್ತು ಮಕ್ಕಳಿಂದ ಅತಿ ಆದರದ ಮತ್ತು ಅದ ರ್ಶಕ ವರ್ತನೆ. ಮಿತ್ರ ಸುಖದ ಜೊತೆಕು ಉಳಿದ ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸಮಾಧಾನ ಅತ್ಯುತ್ತಮ. ಶೂದ್ರ ವ್ಯಕ್ತಿಯ ಸಹವಾಸ. ಉದ್ಯೋಗದಲ್ಲಿ ಒಳ್ಳೆ ಪ್ರಗತಿ ಮತ್ತು ಲಾಭ ಸ್ವಲ್ಪ ಕಡಿಮೆ ಎನಿಸಿದರೂ ಪ್ರತಿಷ್ಠೆ ಗಗನಕ್ಕೆ ಮುಟ್ಟುವದು. ಮಕ್ಕಳಲ್ಲಿ ಮತ್ತು ಬಂಧು ವರ್ಗ ದವರಲ್ಲಿ ಕೆಲ ಜನರ ಅಪೂರ್ವ ಉನ್ನತಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಿಗೂ ಮಾನ್ಯವಾಗುವಂಥ ಒಡಂಬಡಿಕೆ. ಪ್ರವಾಸಾದಿ ಕೆಲಸ ಮನಸ್ಸ ಬೇಕುವಂಥವು. ಅಶ್ವಿನಿಯ ೪ ನೆ ಮತ್ತು ಭರಣಿಯ ಮೊದಲನೆ ೩ ಚರಣ ಗಳಿಗೆ ಹೆಚ್ಚು ಅನುಕೂಲ. ತಾ. ೨೮, ೨೯, ೩೦ ೧ ಇವು ಅನುಕೂಲ.

ವೃಷಭ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ. ಆದರೆ ಮಕ್ಕಳ ಸಹಿತ ಎಲ್ಲರ ವರ್ತನೆ ಹೊಸಗೇಡಿ ತನವು. ನಿಮಗೆ ವಿಶೇಷ ಪ್ರಿಯ ಇಲ್ಲವೆ ಅವಶ್ಯ ಪೆನಿಸುವಂತಹ ಕೆಲ ವಸ್ತುಗಳನ್ನು ಅವರು ಎತ್ತಿಕೊಳ್ಳುವ ಪ್ರಯತ್ನ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಅನುಕೂಲ; ಆದರೆ ಪ್ರತಿ ಷ್ಠೆಗೆ ಕೆಲವೊಂದು ಬಗೆಯ ಕುಂದು ಬರಲು ಪ್ರಾರಂಭ. ಮಿತ್ರರು ಮತ್ತು ಸರಕಾರೀ ಜನರು ಮಾಡದೆ ಇದ್ದ ಕೆಲಸಗಳನ್ನು ಕೂಡ ಮಾಡಿದ ಆರೋಪ ಹೊರಿಸುವ ಪ್ರಯತ್ನ. ನಿಮ್ಮ ಮಾತಿ ನಿಂದಲೆ ಕೆಲ ಸಂಗತಿಗಳು ಕೆಡುವ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷ ಗಳಲ್ಲಿ ಸಮಾನ ಸ್ಥಿತಿ. ಪ್ರವಾಸಾದಿ ಕೆಲಸ ಕೊಂಡ ರಿಯುದು. ಕೃತ್ತಿಕೆಯ ೪ ನೆ ಮತ್ತು ರೋಹಿ ಣಿಯ ಮೊದಲನೆ ೩ ಚರಣಗಳಿಗೆ ಹೆಚ್ಚು ಕೊಂ ದರೆ. ತಾ. ೨೬, ೩೦, ೧ ಅನುಕೂಲ.

ಮಿಥುನ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಅನು ಕೂಲ. ಆದರೆ ಮಕ್ಕಳ ಕುರಕುರಿ. ಉಳಿದ ವಿಷಯಗಳಲ್ಲಿಯೂ ಪ್ರಾಪಂಚಿಕ ಸುಖ ಒಮ್ಮೆ ಅನುಕೂಲ ಮತ್ತೊಮ್ಮೆ ಪ್ರತಿಕೂಲವೆನಿಸುವದು ಪ್ರತಿಯೊಬ್ಬರಿಂದ ಕಿರಕಿಳ ವೆಚ್ಚ. ಉದ್ಯೋಗ ದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅಂದಾಜಿ ನಷ್ಟು. ಆದರೂ ಆಗುವ ವೆಚ್ಚ ಭಾರವೆನಿಸುವ ದರಿಂದ ದಗದಗಿ ಇದ್ದದ್ದೇ. ಬಂಧುವರ್ಗದವರು ಮಾತ್ರ ಕೆಲ ಒಳ್ಳೆ ಸಂಗತಿಗಳನ್ನು ಮಾಡುವರು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸಿಗಾಗಿ ಮಾಡಿದ ಪ್ರಯತ್ನ ನಿಮ್ಮಕಿಂತ ಪ್ರತಿ ಪಕ್ಷಗಳಿಗೆ ಹೆಚ್ಚು ಅನುಕೂಲವೆನಿಸುವ ಅಂಜಿಕೆ. ಮಿತ್ರರು ಮತ್ತು ಶತ್ರುಗಳಿಂದ ಒಂದೇ ಸವನೆ ಕೊಂದರೆ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಮೃಗಾದ ೪ ನೆ ಮತ್ತು ಆರಿದ್ರಾದ ಮೊದಲನೆ ೩ ಚರಣಗಳಿಗೆ ಕೊಂದರೆ ಹೆಚ್ಚು. ತಾ. ೨೮, ೨೯, ೨ ಅನುಕೂಲ.

ಕರ್ಕ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಬಹಳ ಉತ್ತಮ. ಆದರೆ ನೆರೆಯವರಿಂದ ಕೆಲ ವಿಷಯ ಗಳಲ್ಲಿ ಖಿರಿಕಿಯ ದೋರಣೆ. ಉದ್ಯೋಗದಲ್ಲಿ ಲಾಭ ಮತ್ತು ಪ್ರತಿಷ್ಠೆ ಉತ್ತಮ. ಆದರೆ ಪ್ರಗ ತಿಯಲ್ಲಿ ಕೆಲ ಅಡಚಣ ಅಕಲ್ಪಿತ ಉತ್ಪನ್ನವಾ ಗುವ ಸಂಭವ. ಮಿತ್ರ ಸುಖ ಉತ್ತಮ. ಆದರೆ ಶತ್ರುಗಳಿಂದಲೂ ತೊಂದರೆ ಅದೇಪ್ರಮಾಣದಲ್ಲಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷ ಗಳಲ್ಲಿ ಸಮಾನ ಸ್ಥಿತಿ. ಪ್ರವಾಸ ತೊಂದರೆಯದು. ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಅನು ಕೂಲ. ಪುಷ್ಯದ ೪ ನೆ ಮತ್ತು ಅಶ್ಲೇಷಾದ ಮೊದಲನೆ ೩ ಚರಣಗಳಿಗೆ ತೊಂದರೆ ಹೆಚ್ಚು. ತಾ. ೨೬, ೩೦, ೧ ಅನುಕೂಲ.

ಸಿಂಹ

ಪ್ರಕೃತಿ ನಿಮ್ಮದು ಅನುಕೂಲ. ಆದರೆ ಹೆಂಡ ತಿಯದು ಕೆಡುವದು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಮಕ್ಕಳು ಲೋಕಗೌರವದ ಕೃತ್ಯಗಳನ್ನು ಮಾಡುವರು. ಉದ್ಯೋಗದಲ್ಲಿ ಪ್ರಗತಿ ಕಡಮೆ. ಆದರೆ ಲಾಭ ಮತ್ತು ಪ್ರತಿಷ್ಠೆ ಬಹಳ ಉತ್ತಮ. ಮಿತ್ರರಲ್ಲಿ ಒಬ್ಬಿಬ್ಬರ ಉತ್ಕರ್ಷವಾದ ಸುದ್ದಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪ್ರತಿಪಕ್ಷಗಳದೆ ಹೆಚ್ಚು ಜೋರು ಆಗುವದರಿಂದ ಕಿಂಚಿತ್ ಹಾನಿಯನ್ನು ಸಹಿಸಿ ಒಡಂಬಡಿಕೆ ಮಾಡಿಕೊಳ್ಳುವ ಸಂಭವ. ಕೆಲವೊಂದು ವಿಶಿಷ್ಟ ಧರ್ಮಕೃತ್ಯ. ಸ್ತ್ರೀ ವರ್ಗ ದಲ್ಲಿ ಹೆಚ್ಚು ಆದರ. ಮಘಾದ ೪ ನೆ ಮತ್ತು ಪೂರ್ವಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೨೮, ೨೯, ೨, ಅನುಕೂಲ.

ಕನ್ಯಾ

ಪ್ರಕೃತಿಗೆ ಕಿರಕಿಳ ಕ್ಲೇಶ. ಆದರೆ ಹೆಂಡತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ಮಕ್ಕ ಳಲ್ಲಿ ಒಬ್ಬರ ವಿಶೇಷ ಉನ್ನತಿ. ಹೆಂಡತಿಯ ಬಂಧುವರ್ಗದವರಲ್ಲಿ ಕೆಲ ಜನರ ಉತ್ಕರ್ಷ. ಉದ್ಯೋಗದಲ್ಲಿ ಉತ್ತಮ ಪ್ರಗತಿ ಮತ್ತು ತುಂಬ ಲಾಭ. ಆದರೆ ಪ್ರತಿಷ್ಠೆ ಕಡಮೆಯೇ. ಪಾರ ಮಾರ್ಥಿಕ ಜನರ ಸಹವಾಸ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಪ್ರವಾಸ ಸುಖದ್ದು. ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ತೊಂದರೆಯದು. ಉತ್ತರಾದ ೪ ನೆ ಮತ್ತು ಹಸ್ತಾದ ಮೊದಲನೆ ೩ ಚರಣಗಳಿಗೆ ತೊಂದರೆ ಯಿಂದಲೆ ಯಶಸ್ಸು. ತಾ. ೨೬, ೩೦, ೧, ಅನು ಕೂಲ.

ತುಲಾ

ಪ್ರಕೃತಿ ಸಾಧಾರಣವೆ. ಆದರೆ ಹೆಂಡತಿ ಮತ್ತು ಪ್ರಾಪಂಚಿಕ ಸುಖ ಅನುಕೂಲ. ಮಕ್ಕಳಲ್ಲಿ ಒಬ್ಬರಿಂದ ಅತ್ಯಾದರದ ಆದರೆ ಬೇರೊಬ್ಬರಿಂದ ಅನಾದರದ ವರ್ತನ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಉತ್ತಮ. ಅವಚಿತ ಲಾಭದ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆ ಯಲ್ಲಿ ಬಹಳ ಅನುಕೂಲತೆ. ಪ್ರವಾಸಾದಿ ಕೆಲಸ ಹಿತದ್ದು. ಚಿತ್ರಾದ ೪ ನೇ ಮತ್ತು ಸ್ವಾತಿಯ ಮೊದಲನೇ ೩ ಚರಣಗಳಿಗೆ ಹೆಚ್ಚು ಅನುಕೂಲ. ತಾ. ೨೬, ೨೭, ೨೮, ೨೯ ಅನುಕೂಲ.

ವೃಶ್ಚಿಕ

ಪ್ರಕೃತಿ ಅನುಕೂಲ. ಹೆಂಡತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಅನುಕೂಲ. ಆದರೆ ಕೆಲವೊಂದು ಅಪರಿಹಾರ್ಯ ಅಡಚಣೆಗಳಿಂದಲ್ಲಿಅಗ ಬೇಕಾಗಿದ್ದ ಲಾಭವೂ ಕೈಗೆ ಬಾರದೆ ಉಳಿಯುವ ಸಂಭವ. ಮಿತ್ರತ್ವದಲ್ಲಿ ತೀವ್ರ ವಿರೋಧ. ವಾದ ದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಪ್ರವಾಸ ಮತ್ತು ಭೆಟ್ಟಿ ಪತ್ರವ್ಯವಹಾರಕ್ಕಿಂತ ಹೆಚ್ಚು ಅನುಕೂಲ. ಅನುರಾಧೆಯ ೨ ನೇ ಮತ್ತು ಜ್ಯೇಷ್ಠಾದ ಮೊದಲನೇ ೩ ಚರಣಗಳಿಗೆ ತೊಂದರೆ ಹೆಚ್ಚು. ತಾ. ೨೬, ೨೭, ೨೮, ೨೯ ಅನುಕೂಲ.

ಧನು

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಉತ್ತಮ ಆದರೆ ಮಕ್ಕಳ ಪ್ರಕೃತಿಗೆ ಇಲ್ಲವೆ ಸರಿಯಾಗಿ ವರ್ತಿಸದೆ ಇರುವದರಿಂದ ಮನಸ್ಸಿಗೆ ಚಿಂತೆ. ಉದ್ಯೋಗದಲ್ಲಿ ಪ್ರಗತಿ ಬಹಳ ಉತ್ತಮ. ಪ್ರತಿಷ್ಠೆ ಮನಸ್ಸಿನಂತೆ. ಆದರೆ ಲಾಭ ಬಹಳ ಕಡಮೆ. ಸ್ತ್ರೀ ವಿಷಯದಲ್ಲಿ ತರ್ಕವಿತರ್ಕಗಳು ಇಲ್ಲವೆ ಕೆಲವೊಬ್ಬ ಹೆಂಗಸು ದ್ವೇಷದಿಂದ ನಿರ ರ್ಥಕವಾಗಿ ಕೂಗೆಬ್ಬಿಸುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳ ಜೋರು ಹೆಚ್ಚು. ಮಿತ್ರರೇ ಶತ್ರುಗಳಿಗೆ ಫಿತೂರ ಆಗುವ ಅಂಜಿಕೆ. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಮೂಲಾದ ೪ ನೆ ಮತ್ತು ಪೂರ್ವಾಷಾಢಾದ ಮೊದಲನೆ ೩ ಚರಣಗಳಿಗೆ ತೊಂದರೆ ಹೆಚ್ಚು. ತಾ. ೨೮, ೨೯, ೩೦, ೧ ಅನುಕೂಲ.

ವಿಚಿತ್ರ ಜಗತ್ತು

(೧೫ ನೇ ಪುಟದಿಂದ)

ಹೊಸ ಕುಳ್ಳ್ಯತ-ಪ್ರಾಧ್ಯಾಪಕರು ಪೇದಿಸಲ ಟ್ಟದ್ದಾರೆಂದೂ ಅವರು ಮನೆಯಿಂದ ನೆಟ್ಟಗಿ ದ್ದಾರೆಂದು ತಮಗೆ ತಿಳಿದಿದೆಂದೂ ಅವರು ಹೇಳಿ ದರು. ಸ್ನೇಹಲತೆಗೆ ಈ ವೃತ್ತಾಂತದ ಭಾವವು ಒಮ್ಮೆಲೆ ಹೊಳೆಯಿತು. ಯಾವ ಸುಶಿಕ್ಷಿತ ತರುಣ ಗೆ ಹೆಸರೆಯಿಲ್ಲ ? ಅವಳು ನಿಶ್ಚಯದಂತೆ ಪ್ರತಿ ಕಾರ ಮಾಡಲಿಲ್ಲ. ಮೌನವೇ ಅನುಮತಿ ಎಂದು ಅವಳ ತಂದೆಯವರು ಭಾವಿಸಿದರು.

ಮುಂದೆರಡು ದಿವಸಗಳಾದ ಮೇಲೆ ಅವಳು ಹೆಚ್ಚಿಗೆ ವೃತ್ತಾಂತವನ್ನು ತಂದಳು. ಹೊಸ ಪ್ರಾಧ್ಯಾಪಕರು ವಿಧುರರೆಂದು ತಿಳಿದಿದೆಯಾಗಿ ಹೇಳಿದರು. ಪ್ರತಿ ಪದ್ಯಾಕರ ಎಂದು ಮನಸ್ಸಿನ ಲ್ಲಿಯೆ ಸ್ನೇಹಲತೆ ಗುಣಗುಟ್ಟಿದಳು. ಆದರೆ ಪ್ರತಿ ಕಾರ ಮಾಡಲಿಲ್ಲ. ಎರಡನೆ ಸಲದ ಮೌನವು ದ್ವಿಗುಣಿತ ಅನುಮತಿ ಎಂದು ಅವಳ ತಂದೆಯ ವರು ಆ ವಿಷಯದಲ್ಲಿ ಮುಂದೆ ಸಾಗಿದರು.

ಮುಂದೆ ನಾಲ್ಕೈದು ದಿವಸಗಳಲ್ಲಿ ಅವರು ಕೊನೆಯ ಸುದ್ದಿಯೊಂದನ್ನು ತಂದರು. ಹೊಸ ಪ್ರಾಧ್ಯಾಪಕರು ಲಗ್ನವಾಗಿ ಒಂದು ವರ್ಷವಾಗು ವದರೊಳಗಾಗಿ ಅವರ ಪತ್ನಿ ತೀರಿಕೊಂಡಳಂತೆ, ಅವರು ಎರಡನೇ ವಿವಾಹವಾಗುವದಿಲ್ಲವಂತೆ.

“ಯಾಕೆ ??” ಎಂದು ಸ್ನೇಹಲತೆಯ ತಾಯಿ ಕೇಳಿದಳು. “ಅವರ ಮೊದಲನೆ ಹೆಂಡತಿ ಅವ ರಿಗೆ ಅನುರೂಪವಿರಲಿಲ್ಲವಂತೆ. ಪರಿಪರಿಯಿಂದ ಅವರನ್ನು ಕಾಡಿದಳಂತೆ. ಅನೇಕ ಕಷ್ಟನಷ್ಟ ಗಳನ್ನು ತಂದೊಡ್ಡಿದಳಂತೆ. ನೊಂದುಬೆಂಡಾದ ಪ್ರಾಧ್ಯಾಪಕರು ಅವಳು ಹೋದೊಡನೆ ಮುಕ್ತ ನಾದೆನೆಂದರಂತೆ. ಬಿಸಿಹಾಲನ್ನು ಕುಡಿದು ನೋರೆ ಸುಟ್ಟುಕೊಂಡ ತೆನ್ನಾಲಿ ರಾಮನ ಬೆಕ್ಕು ಹಾಲು ಕಂಡೊಡನೆ ಹರದಾರಿಯಷ್ಟು ದೂರ ಜಿಗಿದು ಹೋಗುತ್ತಿತ್ತಲ್ಲವೆ ? ಹಾಗೆಯೇ ಇವರೂ ಹುಡಿ ಗೆಯರೆಂದರೆ ಹರದಾರಿಯಷ್ಟು ದೂರ ಜಿಗಿಯು ತ್ತಾರಂತೆ!” ಎಂದು ಮುಂತಾಗಿ ಅವರು ಹೇಳಿ ದರು.

“ವಿಚಿತ್ರ ಜಗತ್ತು!” ಎಂದಳು ಸ್ನೇಹಲತಾ. ಅದರ ಅರ್ಥ ಬೇರೆಯವರಿಗೆ ತಿಳಿಯಲಿಲ್ಲ.

ಮಕರ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಬಹಳ ಉತ್ತಮ. ಮಕ್ಕಳಿಂದ ಧೀರೋದಾತ್ತವಾದ ಕೆಲ ಲೌಕಿಕದ ಕೃತ್ಯಗಳು. ಕೆಲ ಪ್ರಿಯ ಕೆಲ ಅಪ್ರಿಯ ಹೀಗೆ ಇಬ್ಬಗೆಯ ಜನರೊಡನೆ ವ್ಯವ ಹಾರ ಗೊತ್ತುಪಡಿಸುವ ಸರತಿ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಸಾಧಾರಣವೆ. ಆದರೆ ಲಾಭ ಅದಕ್ಕಿಂತ ಅನುಕೂಲ. ವೆಚ್ಚ ಹೆಚ್ಚು ಆದರೂ ಆದರಲ್ಲಿಯ ಹೇತು ಸಾಧ್ಯ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಡುವ ಪ್ರಸಂಗ. ಮಿತ್ರ ಸುಖ ಅನುಕೂಲ. ಪ್ರವಾಸಾದಿ ಕೆಲಸ ಸಾಮಾನ್ಯ. ಉತ್ತರಾಷಾಢಾದ ೪ ನೇ ಮತ್ತು ಶ್ರವಣಾದ ಮೊದಲನೇ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ೨೬, ೩೦, ೧, ೨ ಅನುಕೂಲ.

ಕುಂಭ

ನಿಮ್ಮ ಪ್ರಕೃತಿ ಸಾಧಾರಣವೆ. ಆದರೆ ಹೆಂಡತಿ ಯದು ಮತ್ತು ಮಕ್ಕಳದು ಅನುಕೂಲ ಉಳಿದ ಎಲ್ಲ ವಿಷಯಗಳಲ್ಲಿಯೂ ಪ್ರಾಪಂಚಿಕ ಸುಖ ಬಹಳ ಅನುಕೂಲ. ಸ್ಥಾವರಜಂಗಮದಲ್ಲಿ ಬಹಳ ಹೆಚ್ಚಳ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಬಹಳ ಉತ್ತಮ. ಆದರೆ ಪ್ರತಿಷ್ಠೆಗೆ ಒಂದು ಬಗೆಯ ಕುಂದು ಬರುವ ಅಂಜಿಕೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು ದೊರೆತು ಶತ್ರುಗಳಿಗೆ ಪೂರ್ಣ ಫಜೀತಿ. ಸ್ವಪ್ನ ಶುಭ ಮತ್ತು ಭಾವೀಸೂಚಕ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ಧನಿಷ್ಠಾದ ೪ ನೇ ಮತ್ತು ಶತತಾರಕೆಯ ಮೊದ ಲನೆ ೩ ಚರಣಗಳಿಗೆ ಮಾತ್ರ ತೊಂದರೆಯಿಂದಲೆ ಯಶಸ್ಸು. ತಾ. ೨೬, ೨೭, ೨೮, ೨೯ ಅನು ಕೂಲ.

ಮೀನ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ. ಪ್ರಾಪಂಚಿಕ ವಿಷಯಗಳಲ್ಲಿ ಕೆಲ ಬಗೆಯ ತೊಂದರೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಆದರೆ ಕೆಲ ಕೆಲ ನಿರರ್ಥಕ ವೆಚ್ಚ ಮಾಡುವ ಲಹರಿ. ಸಮೀ ಪದ ಆಪ್ತರಲ್ಲಿ ಮಂಗಳ ಕಾರ್ಯಗಳು. ವಿಪರೀತ ವಿಚಾರಗಳಿಂದ ಮನಸ್ಸು ಯಾವಾಗಲೂ ನಿರತ ವಾಗುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಆದರೆ ಶತ್ರುಗಳ ಜೋರು ಹೆಚ್ಚು. ಮಿತ್ರತ್ವದಲ್ಲಿ ವಿರೋಧ. ಪ್ರವಾಸಾದಿ ಕೆಲಸ ಹಿತಕರ. ಉತ್ತರಾಭಾದ್ರಪದದ ೪ ನೇ ಮತ್ತು ರೇವತಿಯ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೨೬, ೨೭, ೨೮, ೨೯ ಅನುಕೂಲ.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಮುದ್ರಾಣಾಲಯದಲ್ಲಿ “ಲೋಕ ಶಿಕ್ಷಣ ಟ್ರಸ್ಟಿನ” ಪ ವಾಗಿ ಹ. ರಾ. ಪುರೋಹಿತರಿಂದ ವರಿಂದ ಮುದ್ರಿಸಿ ಪ್ರಕಟವಾಯಿತು.